
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 । ಸಂಚಿಕೆ 32 । ಆಗಸ್ಟ್ 2–8, 2021 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com





ಮುಖ್ಯಮಂತ್ರಿ ಬದಲಾವಣೆಯಿಂದ ಜನ-ವಿರೋಧಿ ಆಳ್ವಿಕೆ ಬದಲಾಗುವುದೇ?



ಪೆಗಾಸಸ್:

ಪ್ರಜಾಪ್ರಭುತ್ವ ತಲುಪಿರುವ ಪಾತಾಳದ ದ್ಯೋತಕ




ಹುಸಿ ಕಥನಗಳ ಮೋದಿ ಸರ್ಕಾರ

ಅಯೋಧ್ಯೆ ಟ್ರಸ್ಟ್‌ನಲ್ಲಿ ಗೋಲ್‌ಮಾಲ್



ಆಗಸ್ಟ್ ೯ ‘ಭಾರತ ಉಳಿಸಿ’ ದಿನ



ಸಿಐಟಿಯು-ಎಐಕೆಎಸ್-ಎಐಡಬ್ಲ್ಯೂಯು ಪ್ರಚಾರಾಂದೋಲನ : ಜುಲೈ25 ರಿಂದ ಆಗಸ್ಟ್ 8, 2021

ರೈತರ ಹೋರಾಟದ 8 ತಿಂಗಳು: ಜುಲೈ 26 ರಂದು ಮಹಿಳಾ ಕಿಸಾನ್ ಸಂಸದ್ ಅಧಿವೇಶನ

ಕಳೆದ ವಾರ ಈ ಪುಟದಲ್ಲಿ ವರದಿ ಮಾಡಿರುವಂತೆ ಜುಲೈ 22 ರಿಂದ ಸಂಸದ್ ಭವನದಿಂದ ಒಂದು ಕಿ.ಮೀ. ದೂರದಲ್ಲಿ ಜಂತರ್‌ಮಂತರ್‌ನಲ್ಲಿ 'ಕಿಸಾನ್ ಸಂಸದ್' ಅಪಾರ ದೃಢ ನಿರ್ಧಾರದ ನಡುವೆ ಆರಂಭವಾಗಿದೆ. ಆಗಸ್ಟ್ 13 ರ ವರೆಗೆ ಸಂಸತ್ತಿನ ಮುಂಗಾರು ಅಧಿವೇಶನ ನಡೆಯುತ್ತಿರುವ ಸಮಯದಲ್ಲಿ ಪ್ರತಿದಿನ 200 ರೈತರ ಪ್ರತಿನಿಧಿಗಳು ಈ ಸಂಸತ್ತಿನ ಕಲಾಪಗಳಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

ತನ್ನ ಎಂದಿನ ಪ್ರಜಾಪ್ರಭುತ್ವ-ವಿರೋಧ ಚಾಳಿಗೆ ಅನುಗುಣವಾಗಿ, ಗೃಹ ಮಂತ್ರಿಗಳ ಅಡಿಯಲ್ಲಿರುವ ದಿಲ್ಲಿ ಪೋಲೀಸ್ ಮಾಧ್ಯಮಗಳು ಮತ್ತು ಎಲ್ಲ ಜನವಿಭಾಗಗಳು ಅ ಕಡೆ ಸುಳಿಯದಂತೆ ಮಾಡಲು ಕ್ರಮ ಕೈಗೊಂಡಿದೆ.

ವಿಸ್ತರಿತ ಮೋದಿ ಸಂಪುಟದ ಮಂತ್ರಿ ಮೀನಾಕ್ಷಿ ಲೇಖಿ ತನ್ನ ಮಾಧ್ಯಮ ಟಿಪ್ಪಣಿಯಲ್ಲಿ ರೈತರನ್ನು 'ಮಾವಾಲಿ'ಗಳು ಎಂದು ಹೀಯಾಳಿಸಿದ್ದನ್ನು ಸಂಯುಕ್ತ ಕಿಸಾನ್ ಮೋರ್ಚಾ ಬಲವಾಗಿ ಖಂಡಿಸಿದೆ. ಆಕೆ ಅದನ್ನು ಹಿಂತೆಗೆದುಕೊಳ್ಳುವುದಾಗಿ ಹೇಳಿದರೂ, ದೇಶವನ್ನು ಮತ್ತು ಅದರ ಸಾರ್ವಭೌಮತೆಯನ್ನು ಜೀವಂತವಾಗಿ ಇಟ್ಟಿರುವ ಅನ್ನದಾತರ ಹೀಯಾಳಿಕೆ ಬಿಜೆಪಿ ಸರಕಾರದ ದಮನಕಾರೀ ನಿಲುವನ್ನು ಬಿಂಬಿಸುತ್ತದೆ ಎಂದು ಮೋರ್ಚಾ ಹೇಳಿದೆ.

ಜುಲೈ 23 ರಂದು ಎರಡು ದಿನಗಳ ಚರ್ಚೆಯ ನಂತರ ಕಿಸಾನ್ ಸಂಸದ್ ಎಪಿಎಂಸಿಯನ್ನು ಬದಿಗೊತ್ತುವ ಕಾಯ್ದೆಯನ್ನು ರದ್ದು ಮಾಡುವ ಮತ್ತು ಸಂಸತ್ತು ಕೂಡ ಹಾಗೇ ಮಾಡಬೇಕು ಎಂದು ನಿರ್ದೇಶಿಸುವ ಒಂದು ನಿರ್ಣಯವನ್ನು ಸರ್ವಸಮ್ಮತಿಯಿಂದ ಅಂಗೀಕರಿಸಿತು. ರೈತರಿಗೆ ಕಡಿಮೆಯಲ್ಲ ಹೆಚ್ಚು ಮಂಡಿಗಳು ಬೇಕಕಾಗಿವೆ ಎಂದಿರುವ ನಿರ್ಣಯ ರಾಜ್ಯ ಸರಕಾರಗಳು ಕಿಸಾನ್ ಸಂಘಟನೆಗಳೊಂದಿಗೆ ಸಮಾಲೋಚಿಸಿ ಮಂಡಿ ವ್ಯವಸ್ಥೆಯನ್ನು ಬಲಪಡಿಸಲು, ಉತ್ತಮ ಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದೆ.





ಜುಲೈ 26 ರಂದು ರೈತರ ದಿಲ್ಲಿ ಗಡಿಗಳಲ್ಲಿನ ಹೋರಾಟ 8 ತಿಂಗಳನ್ನು ಪೂರೈಸಿದ ದಿನ ಮಹಿಳಾ ಅಧಿವೇಶನ ನಡೆಯಿತು. ಎಐಡಿಡಬ್ಲ್ಯುಎ ಉಪಾಧ್ಯಕ್ಷೆ ಸುಭಾಷಿಣಿ ಅಲಿ, ಎನ್‌ಎಫ್‌ಐಡಬ್ಲ್ಯು ಪ್ರಧಾನ ಕಾರ್ಯದರ್ಶಿ ಆನಿ ರಾಜ ಮತ್ತು ಎನ್‌ಎಪಿಎಂ ಮುಖಂಡರಾದ ಮೇಧಾ ಪಾಟ್ಕರ್ ರವರನ್ನು ಸಭಾಧ್ಯಕ್ಷರುಗಳಾಗಿ ಚುನಾಯಿಸಲಾಯಿತು. ಎಐಡಿಡಬ್ಲ್ಯುಎ ಉಪಾಧ್ಯಕ್ಷೆ ಜಗ್ಮತಿ ಸಂಗ್ವಾನ್ ಅವರನ್ನು ಒಬ್ಬ ಉಪಸಭಾಧ್ಯಕ್ಷರಾಗಿ ಆರಿಸಲಾಯಿತು.



ಈ ಮಹಿಳಾ ಕಿಸಾನ್ ಅಧಿವೇಶನ ಅಗತ್ಯ ಸರಕುಗಳ ತಿದ್ದುಪಡಿ ಕಾಯ್ದೆಯ ಮೇಲೆ ಚರ್ಚೆ ನಡೆಸಿತು.. ಕಳ್ಳದಾಸ್ತಾನು ಮತ್ತು ಕಾಳಸಂತೆಗೆ ಕಾನೂನಾತ್ಮಕ ಮಂಜೂರಾತಿ ಕೊಡುವ ಈ ಕಾಯ್ದೆಯ ಕರಾಳ ಛಾಯೆ ರೈತರ ಮೇಲೆ ಮಾತ್ರವಲ್ಲ, ಎಲ್ಲೆಡೆಗಳಲ್ಲೂ ಗ್ರಾಹಕರ ಮೇಲೂ ಬೀಳಲಿದೆ ಎಂದು ಚರ್ಚೆಯಲ್ಲಿ ಭಾಗವಹಿಸಿದ ಮಹಿಳೆಯರು ಹೇಳಿದರು. ಕುಟುಂಬದ ಆಹಾರ ಭದ್ರತೆಯ ಹೊಣೆ ಮಹಿಳೆಯರ ಮೇಲಿರುವುದರಿಂದ, ಈ ಕಾಯ್ದೆಯಿಂದಾಗಿ ಆಹಾರ ಕೈಗೆಟುಕದಾದಾಗ ಅವರು ಕಡಿಮೆ ತಿನ್ನಬೇಕಾಗಿ ಬರುತ್ತದೆ, ಈ ಕಾಯ್ದೆಯ ದುಷ್ಪರಿಣಾಮ ವನ್ನು ಮಹಿಳೆಯರೇ ಅನುಭವಿಸ ಬೇಕಾಗುತ್ತದೆ ಎಂದು ಅವರು ಸರಕಾರದ ಗಮನಕ್ಕೆ ತರಲು ಪ್ರಯತ್ನಿಸಿದರು.

ಈ ಅಧಿವೇಶನ ಎರಡು ಮಹತ್ವದ ನಿರ್ಣಯಗಳನ್ನು ಅಂಗೀಕರಿಸಿತು. ಒಂದು, ಮಹಿಳೆಯರು ಬೇಸಾಯಕ್ಕೆ ಗಮನಾರ್ಹ ಕೊಡುಗೆ ನೀಡಿದರೂ, ಅವರಿಗೆ ಸಿಗಬೇಕಾದ ಘನತೆ, ಮಾನ್ಯತೆ ಮತ್ತು ಸ್ಥಾನಮಾನ ಸಿಗುತ್ತಿಲ್ಲ. ಅವರ ಶ್ರಮ, ಕಠಿಣ ದುಡಿಮೆ, ನಿಪುಣತೆ, ಜ್ಞಾನ ಮತ್ತು ಚೈತನ್ಯವನ್ನು ನಮ್ಮ ಜನತಾ ಆಂದೋಲನಗಳು ಮತ್ತು ನಮ್ಮ ಸಮಾಜ ಗಮನಕ್ಕೆ ತಗೊಳ್ಳಬೇಕು. ರೈತ ಆಂದೋಲನದಲ್ಲಿ ಮಹಿಳೆಯರ ಪಾತ್ರ ಮತ್ತು ಅವಕಾಶವನ್ನು ಹೆಚ್ಚಿಸುವ ವಿಚಾರಪೂರಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ಣಯವನ್ನು ಅಧಿವೇಶನ ಅಂಗೀಕರಿಸಿತು.

ಎರಡನೇ ನಿರ್ಣಯ ಸಂಸತ್ತಿನಲ್ಲಿ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33% ಪ್ರಾತಿನಿಧ್ಯ ನೀಡಬೇಕು, ಇದಕ್ಕಾಗಿ ಸಂವಿಧಾನ ತಿದ್ದುಪಡಿ ತರಬೇಕು ಎಂದು ಹೇಳಿದೆ.



"ಅಗತ್ಯ ರಕ್ಷಣಾ ಸೇವೆಗಳ ಮಸೂದೆ"ಯ ವಿರುದ್ಧ ಐಎಲ್‌ಒ ಗೆ ದೂರು

ಕರಾಳ ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆ ಸರಕಾರಕ್ಕೆ ಶಿಫಾರಸು ಮಾಡಿ-ಸಿಐಟಿಯು ಪತ್ರ

ಭಾರತ ಸರಕಾರ ರಕ್ಷಣಾ ಉತ್ಪಾದನಾ ಘಟಕಗಳಸಿವಿಲಿಯನ್ ಕಾರ್ಮಿಕರ ಕೈಗಾರಿಕಾ ಕಾರ್ಯಾಚರಣೆಗಳನ್ನು ನಿಷೇಧಿಸಲು ಹೊರಟಿರುವುದರತ್ತ ಸಿಐಟಿಯು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ)ಯ ಗಮನ ಸೆಳೆದಿದೆ.

ಕಾರ್ಮಿಕರು ಕೈಗಾರಿಕಾ ಕಾರ್ಯಾಚರಣೆಗೆ ಇಳಿಯುವುದರ ವಿರುದ್ದ ಕರಾಳ ಅಂಶಗಳನ್ನು ಒಳಗೊಂಡಿರುವ ಒಂದು ಮಸೂದೆಯನ್ನು ಭಾರತ ಸರಕಾರ ಮಂಡಿಸಿದ್ದು, ಇದರಲ್ಲಿ ಮಧ್ಯಪ್ರವೇಶಿಸಿ ಅದನ್ನು ಹಿಂತೆಗೆದುಕೊಳ್ಳುವಂತೆ ಶಿಫಾರಸು ಮಾಡಬೇಕು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಐಎಲ್‌ಒದ ಮಹಾಕಾರ್ಯದರ್ಶಿಗೆ ಬರೆದಿರುವ ಪತ್ರದಲ್ಲಿ ಕೇಳಿದ್ದಾರೆ.



ಜಂತರ್ ಮಂತರ್‌ನಲ್ಲಿ ಸುಗ್ರೀವಾಜ್ಞೆ/ಮಸೂದೆಯ ವಿರುದ್ಧ ಪ್ರತಿಭಟನೆ

ಈ ಮಸೂದೆ ರಕ್ಷಣಾ ಉತ್ಪಾದನಾ ಕ್ಷೇತ್ರದಲ್ಲಿನ ನೌಕರರು ಮತ್ತು ಸಂಘಗಳು ಯಾವುದೇ ಕೈಗಾರಿಕಾ ಕಾರ್ಯಾಚರಣೆ ನಡೆಸದಂತೆ ನಿಷೇಧಿಸುತ್ತದೆ ಮಾತ್ರವಲ್ಲ, ಈ ಕ್ಷೇತ್ರದಲ್ಲಿ ಕಾರ್ಮಿಕ ಸಂಘಗಳನ್ನೇ ಧ್ವಂಸ ಮಾಡುತ್ತದೆ.

ಇದು ಐಎಲ್‌ಒದ ಆಡಳಿತ ಸಂಸ್ಥೆಯ ಸಂಘ ಸ್ವಾತಂತ್ರ್ಯದ ಸಮಿತಿಯ ನಿರ್ಧಾರಗಳಿಗೆ ವಿರುದ್ಧವಾಗಿದೆಯಲ್ಲದೆ, ಐಎಲ್‌ಒದ ಶಿಫಾರಸುಗಳನ್ನು ಮತ್ತು ಭಾರತದ ಸಂವಿಧಾನವನ್ನೂ ಈ ಕುರಿತ ಸುಗ್ರೀವಾಜ್ಞೆ ಉಲ್ಲಂಘಿಸಿದೆ ಎಂದು ತಪನ್ ಸೆನ್ ತಮ್ಮ ಪತ್ರದಲ್ಲಿ ಬರೆದಿದ್ದಾರೆ.

ಭಾರತದಲ್ಲಿನ ರಕ್ಷಣಾ ಸಾಮಗ್ರಿಗಳ ಉತ್ಪಾದನೆ ಮತ್ತು ಸೇವೆಗಳಿಗೆ ಸುಮಾರು 44 ಸಂಸ್ಥೆಗಳನ್ನು ಮತ್ತು ಹಲವು ಸಂಶೋಧನ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಇವು ರಕ್ಷಣಾ ಸಾಮಗ್ರಿಗಳ ಉತ್ಪಾದನೆಯಲ್ಲಿ ದೇಶವನ್ನು ಸುಮಾರಾಗಿ ಸ್ವಾವಲಂಬಿಯಾಗಿ ಮಾಡಿರುವಂತವುಗಳು. ಭಾರತೀಯ ರಕ್ಷಣಾ ಪಡೆಗಳು ಆವಶ್ಯಕತೆಗಳಲ್ಲಿ 75% ವನ್ನು ಸಮಯಕ್ಕೆ ಸರಿಯಾಗಿ ಅಸಾಮಾನ್ಯ ದಕ್ಷತೆ ಮತ್ತು ಗುಣಮಟ್ಟದಲ್ಲಿ ಉತ್ಪಾದಿಸುವ ಈ ಸಂಸ್ಥೆಗಳಲ್ಲಿ ಸಾವಿರಾರು ಕಾರ್ಮಿಕರು, ನೌಕರರು ಕೆಲಸ ಮಾಡುತ್ತಿದ್ದಾರೆ.

ಇವುಗಳನ್ನೀಗ ಖಾಸಗಿ ಕಾರ್ಪೊರೇಟ್ ಮಾಲಕರ ಕೈಗಳಿಗೆ ಕೊಡುವ ಧಾವಂತದಲ್ಲಿ ಸರಕಾರ ಇದೆ. ಕಾರ್ಮಿಕರು ಇದನ್ನು ವಿರೋಧಿಸಿ ಮುಷ್ಕರ ನಡೆಸಲು ನಿರ್ಧರಿಸಿದಾಗ ರಕ್ಷಣಾ ಮಂತ್ರಾಲಯ ಮಾತುಕತೆಗಳ ಮೂಲಕ ಇತ್ಯರ್ಥ ಬಾಡಲು ಮುಂದಾಯಿತು. ಖಾಸಗೀಕರಣದ ನಡೆಯನ್ನು ಕೈಬಿಡುವದಾಗಿ ಸರಕಾರ ಹೇಳಿತು. ಆದ್ದರಿಂದ ಕಾರ್ಮಿರಕು ಮುಷ್ಕರದ ನೋಟೀಸನ್ನು ಹಿಂತೆಗೆದುಕೊಂಡರು.

ಆದರೆ ಈಗ ಸರಕಾರ ಮತ್ತೆ ಮದ್ದುಗುಂಡು ತಯಾರಿಕಾ ಸಂಸ್ಥೆಗಳ ಖಾಸಗೀಕರಣಕ್ಕೆ ಮುಂದಾಗಿದೆ. ಇದನ್ನು ವಿರೋಧಿಸಿ ಕಾರ್ಮಿಕರು ಮುಷ್ಕರದ ನೋಟೀಸು ಕೊಡುವ ವೇಳೆಗೆ ಜೂನ್ 30 ರಂದು "ಅಗತ್ಯ ರಕ್ಷಣಾ ಸೇವೆಗಳ ಸುಗ್ರೀವಾಜ್ಞೆ'ಯನ್ನು ಹೊರಡಿಸಿದೆ. ನಂತರ ಸಂಸತ್ತಿನಲ್ಲಿ ಈ ಕುರಿತು ಒಂದು ಮಸೂದೆಯನ್ನೂ ಮಂಡಿಸಲಾಗಿದೆ.

ಇದು ಕಾರ್ಮಿಕರ ದನಿಯನ್ನು ಅಡಗಿಸಲಿಕ್ಕಾಗಿ ಎಂದಿರುವ ತಪನ್ ಸೆನ್ ಇದು ಪ್ರಮುಖ ಐಎಲ್‌ಒ ಅಧಿನಿರ್ಣಯಗಳನ್ನು, ಸಂಘಟನೆಯ ಸ್ವಾತಂತ್ರ್ಯ ಕುರಿತ ನಿರ್ಣಯಗಳನ್ನು ಮತ್ತು ಘೋಷಣೆಗಳನ್ನು ಉಲ್ಲಂಘಿಸುತ್ತವೆ ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ತಮ್ಮ ಈ ಪತ್ರವನ್ನು ಕಾರ್ಮಿಕ ಹಕ್ಕುಗಳ ಮೂಲ ನೀತಿಗಳನ್ನು ಹಾಗೂ ಐಎಲ್‌ಒ ಮಾನಕಗಳನ್ನು ಉಲ್ಲಂಘಿಸುತ್ತಿರುವ ಭಾರತ ಸರಕಾರದ ಕ್ರಮಗಳ ವಿರುದ್ಧ ಒಂದು ಔಪಚಾರಿಕ ದೂರು ಎಂದು ಪರಿಗಣಿಸಬೇಕು ಎಂದು ಅವರು ಹೇಳಿದ್ದಾರೆ.

ಸಂಪಾದಕೀಯ

ಬೊಮ್ಮಾಯಿ ಸರ್ಕಾರದಿಂದ ಏನನ್ನು ನಿರೀಕ್ಷಿಸಬಹುದು?

ಬಿಜೆಪಿ ಅಖಿಲ ಭಾರತ ವರಿಷ್ಠರ ನಿರ್ದೇಶನದಂತೆ ಹಾವೇರಿ ಜಿಲ್ಲೆ ಶಿಗ್ಗಾವಿ ಕ್ಷೇತ್ರದ ಶಾಸಕ ಬಸವರಾಜ ಬೊಮ್ಮಾಯಿ ರಾಜ್ಯದ 30 ನೇ ಮುಖ್ಯ ಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಅವರು ರಾಜ್ಯದ ಮುಖ್ಯಮಂತ್ರಿಯಾಗುತ್ತಿರುವ 23 ನೇ ವ್ಯಕ್ತಿ. ಅವರ ತಂದೆ ಎಸ್.ಆರ್. ಬೊಮ್ಮಾಯಿ ರಾಜ್ಯದ 11 ನೇ ಮುಖ್ಯಮಂತ್ರಿಯಾಗಿ 1988 ರಿಂದ 1989 ರ ವರೆಗೆ ಸೇವೆ ಸಲ್ಲಿಸಿದ್ದರು. ಬಸವರಾಜ ಬೊಮ್ಮಯಿಯವರು ಬಿ.ಎಸ್. ಯಡಿಯೂರಪ್ಪರವರ ಪರಮಾಪ್ತರಲ್ಲಿ ಒಬ್ಬರಾಗಿದ್ದು ಸಹಜವಾಗಿ ಅವರ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾರೆ.

ನೂತನ ಮುಖ್ಯ ಮಂತ್ರಿಯಾಗಿರುವ ಬಸವರಾಜ ಬೊಮ್ಮಾಯಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಕಮಡೊಳ್ಳಿ ಗ್ರಾಮದಲ್ಲಿ ಹುಟ್ಟಿದರು. ತಂದೆ ದಿವಂಗತ ಎಸ್.ಆರ್. ಬೊಮ್ಮಾಯಿ, ರಾಜ್ಯದ ಮಾಜಿ ಮುಖ್ಯಮಂತ್ರಿಗಳು. ತಾಯಿ ದಿವಂಗತ ಗಂಗಮ್ಮ ಬೊಮ್ಮಾಯಿ. ಇಂಜಿನಿಯರಿಂಗ್ ಪದವಿದರರಾಗಿದ್ದ ಇವರು ಕಾಲೇಜ್ ಹಂತದಲ್ಲೇ ರಾಜಕೀಯ ಸಂಘಟನೆಯತ್ತ ಒಲವನ್ನು ಬೆಳೆಸಿಕೊಂಡಿದ್ದರು. 1997 ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ರಾಜ್ಯ ವಿಧಾನ ಪರಿಷತ್ತಿಗೆ ಆಯ್ಕೆಯಾಗುವ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು. ಮುಂದೆ ಹಾವೇರಿ ಜಿಲ್ಲೆಯ ಶಿಗ್ಗಾವಿ ಕ್ಷೇತ್ರದಿಂದ 2008 ರಿಂದ ಮೂರು ಬಾರಿ ಸತತವಾಗಿ ಶಾಸಕರಾಗಿ ಆಯ್ಕೆಯಾದರು.

ಬಸವರಾಜ ಬೊಮ್ಮಾಯಿಯವರು ತಂದೆಗೆ ತಕ್ಕ ಮಗ ಎಂದು ಹೇಳುವವರಿದ್ದಾರೆ. ಅಪ್ಪನ ಹಾದಿಯಲ್ಲೇ ನಡೆದು ಹೆಸರು ಮಾಡುತ್ತಾರೆ ಎಂದು ಅವರ ಅಭಿಮಾನಿಗಳ ನಿರೀಕ್ಷೆ. ಆದರೆ ಬಸವರಾಜ ಬೊಮ್ಮಾಯಿಯವರು ತನ್ನ ತಂದೆ ತುಳಿದ ರಾಜಕೀಯ ಹಾದಿಯನ್ನು ತ್ಯಜಿಸಿ ವರ್ಷಗಳೇ ಕಳೆದಿವೆ. ಎಸ್.ಆರ್. ಬೊಮ್ಮಾಯಿಯವರು ರಾಯಿಸ್ಟ್ ಸಮಾಜವಾದಿ ಸಿದ್ಧಾಂತವನ್ನು ಮೈಗೂಡಿಸಿಕೊಂಡವರು. ತಂದೆಯ ರಾಜಕೀಯ ಪಯಣವನ್ನು ಬಾಲ್ಯದಿಂದಲೇ ಗಮನಿಸುತ್ತಾ ಬಂದಿದ್ದ ಬಸವರಾಜ ಬೊಮ್ಮಾಯಿಯವರು ಸಮಾಜವಾದಿ ಚಿಂತನೆಯ ರಾಜಕೀಯವನ್ನೇ ಆಯ್ಕೆಮಾಡಿಕೊಂಡರು. ಬಹುಬೇಗ ಜನತಾ ಪರಿವಾರದ ಸಂಘಟನೆಯಲ್ಲಿ ಕ್ರಿಯಾಶೀಲರಾದರು. ಜಯಪ್ರಕಾಶ ನಾರಾಯಣ, ಲೋಹಿಯಾ ಸಿದ್ಧಾಂತಗಳನ್ನು ಅಧ್ಯಯನ ಮಾಡಿದರು. ಆದರೆ ವಿಧಾನ ಪರಿಷತ್ತಿಗೆ ಆಯ್ಕೆಯಾಗುವ ಮೂಲಕ ಬಿಜೆಪಿಗೆ ಹತ್ತಿರವಾದರು. ಯಡಿಯೂರಪ್ಪರವರ ಪರಮಾಪ್ತರಾದರು. ಮುಂದೆ ಯಡಿಯೂರಪ್ಪರವರು ಬಿಜೆಪಿ ಬಿಟ್ಟು ಕೆಜೆಪಿ ಪಕ್ಷ ಕಟ್ಟಿದಾಗ ಬೊಮ್ಮಾಯಿರವರು ಬಿಜೆಪಿಯಲ್ಲಿಯೇ ಉಳಿದರು ಮಾತ್ರವಲ್ಲ ಯಡಿಯೂರಪ್ಪರವರನ್ನು ಮರಳಿ ಬಿಜೆಪಿಗೆ ಕರೆತರುವಲ್ಲಿಯೂ ಬೊಮ್ಮಾಯಿ ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದಾಗಿ ಬಿಜೆಪಿ ವರಿಷ್ಠರಲ್ಲಿ ಬೊಮ್ಮಾಯಿ ಬಗ್ಗೆ ವಿಶ್ವಾಸ ಗಟ್ಟಿಗೊಳ್ಳಲು ಒಂದು ಕಾರಣವಾಯಿತು.

ಲಿಂಗಾಯತರ ಪೈಕಿ ಪಂಚಮಶಾಲಿ, ಬಣಜಿಗ ಮತ್ತು ಗಾಣಿಗೇರರು ರಾಜಕೀಯವಾಗಿ ಪ್ರಭಾವಿಗಳು. ಅವರೆಲ್ಲರನ್ನು ಒಂದುಗೂಡಿಸಿ ಯಡಿಯೂರಪ್ಪ ಅವರ ನಾಯಕರಾಗಿ ಹೊರಹೊಮ್ಮಿದ್ದರು. ಲಿಂಗಾಯತರ ಪೈಕಿ 'ಸಾದರು' ಅತಿ ಚಿಕ್ಕ ಉಪಪಂಗಡಕ್ಕೆ ಸೇರಿದವರಾಗಿದ್ದಾರೆ. ಬೊಮ್ಮಾಯಿಯವರು 'ಸಾದರ' ಒಳಪಂಗಡಕ್ಕೆ ಸೇರಿದವರು. ಮುಂದಿನ ದಿನಗಳಲ್ಲಿ ಲಿಂಗಾಯತರು ಒಳಪಂಗಡಗಳ ಆಧಾರದಲ್ಲಿ ತಿರುಗಿಬಿದ್ದರೆ ಅಚ್ಚರಿಯೇನಲ್ಲ.

ಅನಿರೀಕ್ಷಿತವಾಗಿ ರಾಜ್ಯದ ಮುಖ್ಯ ಮಂತ್ರಿಯಾಗಿರುವ ಬಸವರಾಜ ಅವರಿಂದ ಜನತೆ ಏನನ್ನು ನಿರೀಕ್ಷಿಸಬಹುದು. "ಪಕ್ಷದ ಸಿದ್ಧಾಂತ, ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ" ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ. ಬಿಜೆಪಿಯ ತತ್ವ ಸಿದ್ಧಾಂತಗಳು ಆರ್‌ಎಸ್‌ಎಸ್ ಸಿದ್ಧಾಂತಗಳೇ ಆಗಿರುತ್ತವೆ ಎಂಬ ವಿಷಯ ಎಲ್ಲರಿಗೂ ತಿಳಿದಿರುವುದೆ. ಬೊಮ್ಮಾಯಿ ಮಾತುಗಳಲ್ಲಿ ಯಾವುದೇ ಹೊಸತನವಿಲ್ಲ. ಸಮಾಜವಾದಿ ದಾರಿಯನ್ನು ತ್ಯಜಿಸಿ ಕೋಮುವಾದಿ ಪಥವನ್ನು ಆಯ್ಕೆಮಾಡಿಕೊಂಡಿರುವ ಬಸವರಾಜ ಬೊಮ್ಮಾಯಿಯವರಿಂದ ಯಾವ ಒಳ್ಳೆಯ ದಿನಗಳನ್ನು ನಿರೀಕ್ಷಿಸಬಹುದು? ಬೊಮ್ಮಾಯಿಯವರಿಂದ ಯಾವ ಒಳ್ಳೆಯ ದಿನಗಳನ್ನು ನಿರೀಕ್ಷಿಸಬಹುದು. ಬೊಮ್ಮಾಯಿರವರು ಯಡಿಯೂರಪ್ಪರವರನ್ನು, ಯಡಿಯೂರಪ್ಪ ಮೋದಿಯವರನ್ನು ಅವಲಂಬಿಸಿ ಆಡಳಿತ ನಡೆಸಬೇಕು. ಯಾವ ಸ್ವತಂತ್ರ ಕಾರ್ಯಾಚರಣೆ ಸಾಧ್ಯವಿಲ್ಲ. ವ್ಯಕ್ತಿ ಬದಲಾವಣೆ ಮುಖ್ಯವಲ್ಲ. ದೋರಣೆಗಳು ಬದಲಾಗಬೇಕು. ಜನತೆಯ ಆದಾಯ ಹೆಚ್ಚಿಸುವ, ನಿರುದ್ಯೋಗವನ್ನು ನಿರ್ಮೂಲನೆ ಮಾಡುವ, ರೈತರಿಗೆ ನ್ಯಾಯವನ್ನು ದೊರಕಿಸುವ, ಅಸ್ಪೃಶ್ಯತೆ, ಅಸಮಾನತೆ ಕಿತ್ತುಹಾಕುವ, ಮಹಿಳೆಯರಿಗೆ ಸದಾ ರಕ್ಷಣೆಯನ್ನು ನೀಡುವ, ಜವಾಬ್ದಾರಿಯುತ ಆಡಳಿತವನ್ನು ನೀಡಲಾಗದೆ ಬೊಮ್ಮಾಯಿ ಸರ್ಕಾರ ಜನತೆಗೆ ಏನು ಒಳ್ಳೆಯದನ್ನು ಮಾಡಲು ಸಾಧ್ಯ. ಬೊಮ್ಮಾಯಿ ಅವರ ಆಡಳಿತ ಜನವಿರೋಧಿಯಾಗಿಯೇ ಮುಂದುವರೆದರೆ ಆಶ್ಚರ್ಯವೇನಿಲ್ಲ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆಯವರ ಮೇಲಿನ ಭ್ರಷ್ಟಾಚಾರದ ಗಂಭೀರ ಆರೋಪವನ್ನು

ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಲು ಸಿಪಿಐ(ಎಂ) ಒತ್ತಾಯ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ ಹಾಗೂ ಬಿಜೆಪಿಗೆ ಸೇರಿದ ಗಂಗಾವತಿ ಶಾಸಕರಾದ ಶ್ರೀ ಪರಣ್ಣ ಮನವಳ್ಳಿಯವರು ಸೇರಿ, ಹೈದ್ರಾಬಾದ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಅಂಗನವಾಡಿ ಕೇಂದ್ರಗಳ ದಶ ಲಕ್ಷಾಂತರ ಫಲಾನುಭವಿಗಳಾದ ಅಪೌಷ್ಠಿಕತೆಯಿಂದ ಬಳಲುವ ಮಕ್ಕಳು, ಬಾಣಂತಿಯರು, ಗರ್ಭಿಣಿ ಮಹಿಳೆಯರಿಗೆ ಪ್ರತಿದಿನ ಕೊಡಲಾಗುವ ಮೊಟ್ಟೆಗಳನ್ನು ವಿತರಿಸುವ ಟೆಂಡರ್ ನಲ್ಲಿ ತಮಗೆ ಕೋಟ್ಯಾಂತರ ರೂಪಾಯಿಗಳ ಕಮಿಷನ್ ನೀಡುವವರಿಗೆ ಗುತ್ತಿಗೆ ನೀಡುವ ಭ್ರಷ್ಟತೆಯ ವಿಚಾರ ಮಾದ್ಯಮಗಳಲ್ಲಿ ಬಹಿರಂಗಗೊಂಡಿದೆ.

ಅದೇ ರೀತಿ, ಅಂಗನವಾಡಿ ಕೇಂದ್ರಗಳಿಗೆ ನೀಡಲಾಗುವ ಪೌಷ್ಠಿಕ ಆಹಾರ ಮತ್ತು ಮೊಟ್ಟೆಗಳ ವಿತರಣೆಯಲ್ಲೂ ಆಯಾ ಕೇಂದ್ರಗಳಿಗೆ ಅಲ್ಲಿನ ಫಲಾನುಭವಿಗಳನ್ನನುಸರಿಸಿ ನೀಡದೇ ಕಡಿಮೆ ನೀಡಲಾಗುತ್ತಿರುವ ವಿಚಾರವೂ ಇಂತಹ ಭ್ರಷ್ಟತೆಯ ಮೂಲವಾಗಿದೆ. ಪ್ರಶ್ನಿಸಿದ ಅಂಗನವಾಡಿ ನೌಕರರನ್ನು ಅಧಿಕಾರಿವಲಯ ಬೆದರಿಸುತ್ತಿರುವುದು ಗುಟ್ಟಾದ ವಿಚಾರವಾಗಿ ಉಳಿದಿಲ್ಲ.

ಈ ಎಲ್ಲದರಿಂದ ರಾಜ್ಯದ ಜನತೆ ತೀವ್ರವಾಗಿ ಆತಂಕಿತರಾಗಿದ್ದಾರೆ.

ಬಡಜನತೆಯ ಅಪೌಷ್ಠಿಕತೆಯ ವಿಚಾರದಲ್ಲಿ ಸಚಿವರ ಹಾಗೂ ಶಾಸಕರ ಈ ಭ್ರಷ್ಟತೆಯ ನಡವಳಿಕೆ ತೀವ್ರ ಖಂಡನೀಯವಾಗಿದೆ. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿಯು, ಈ ಕೂಡಲೆ ಆ ಇಬ್ಬರ ರಾಜನಾಮೆಯನ್ನು ಮುಖ್ಯಮಂತ್ರಿಗಳು ಪಡೆಯಬೇಕು ಮತ್ತು ಈ ಭ್ರಷ್ಠಾಚಾರದ ಪ್ರಕರಣವನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಿ ಜನತೆಗೆ ನಿಜವೇನೆಂದು ಬಹಿರಂಗ ಪಡಿಸಬೇಕೆಂದು ಬಲವಾಗಿ ಒತ್ತಾಯಿಸಿದೆ.

ರಾಜ್ಯದಾದ್ಯಂತ ಮಳೆಹಾನಿ, ಪ್ರವಾಹ ಮತ್ತು ನೆರೆ ಹಾನಿಗೆ ಪರಿಹಾರ ಒದಗಿಸಲು ಒತ್ತಾಯ

ಕಳೆದ ಒಂದೆರಡು ತಿಂಗಳಲ್ಲಿ ರಾಜ್ಯದಾದ್ಯಂತ ಸುರಿದ ಮುಂಗಾರು ಮಳೆ ಹಲವು ಜಿಲ್ಲೆಗಳಲ್ಲಿ ಪ್ರವಾಹವಾಗಿದೆ ಮಾತ್ರವಲ್ಲಾ, ಇದರಿಂದಾಗಿ, ರಾಜ್ಯದಾದ್ಯಂತ ಇರುವ ಎಲ್ಲಾ ಜಲಾಶಯಗಳೆಲ್ಲಾ ತುಂಬಿ ನದಿಗಳೆಲ್ಲಾ ಉಕ್ಕಿ ಹರಿಯುವ ಪರಿಸ್ಥಿತಿ ಉಂಟಾಗಿದೆ. ಮುಖ್ಯವಾಗಿ ಉತ್ತರಕನ್ನಡ ಜಿಲ್ಲೆ, ಕರಾವಳಿ ಮತ್ತು ಮಲೆನಾಡು ಪ್ರದೇಶ ಹಾಗೂ ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಹಲವಾರು ಜಿಲ್ಲೆಗಳು ಹಾನಿಗೀಡಾಗಿವೆ.

ಇದರಿಂದಾಗಿ ರಾಜ್ಯದಾದ್ಯಂತ ಜನ ಜೀವನ ಅಸ್ತವ್ಯಸ್ಥವಾಗಿದೆ. ಈ ಮಳೆಯ ಕಾರಣದಿಂದ ಕೋಟ್ಯಾಂತರ ಕೂಲಿಕಾರರು, ಬಡ ರೈತರು, ಕಾರ್ಮಿಕರು, ಕಸುಬುದಾರರು ಉದ್ಯೋಗ ಹೀನರಾಗಿದ್ದಾರೆ. ವಸತಿ – ಮನೆಗಳನ್ನು ಕಳೆದುಕೊಂಡರೇ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಜಾನುವಾರು ನೀರು ಪಾಲಾಗಿವೆ. ರಾಜ್ಯದಾದ್ಯಂತ ಹಲವಾರು ಜಿಲ್ಲೆಗಳಲ್ಲಿ ಲಕ್ಷಾಂತರ ಎಕರೆ ಜಮೀನುಗಳಿಗೆ ನೀರು ನುಗ್ಗಿ ಜಮೀನುಗಳಲ್ಲಿ ಕೊರಕಲುಗಳುಂಟಾಗಿ ಹಾನಿಗೀಡಾಗಿವೆ. ಬೆಳೆನಷ್ಟವಾಗಿದೆ.

ಹೆದ್ದಾರಿಗಳು, ಸೇತುವೆಗಳು, ನಾಗರೀಕ ರಸ್ತೆಗಳು, ಚರಂಡಿಗಳು ಗಂಭೀರ ಹಾನಿಗೀಡಾಗಿವೆ. ವಿದ್ಯುತ್ ಕಂಬಗಳು ಸಂಪರ್ಕ ಕಡಿತಗೊಂಡು ಮುರಿದು ಬಿದ್ದಿವೆ.



ಮಳೆಯು ಸ್ವಲ್ಪ ಕಡಿಮೆಯಾಗುವುದರೊಂದಿಗೆ ನೆರೆಯ ಭೀತಿ ಆರಂಭಗೊಂಡಿದೆ ಇದು ಸಾಂಕ್ರಾಮಿಕ ಹರಡಲು ಕಾರಣವಾಗಲಿದೆ.

ಈ ನೆಲೆಯಲ್ಲಿ ರಾಜ್ಯ ಸರಕಾರ ಕೂಡಲೇ, ಸಂಕಷ್ಟದಲ್ಲಿರುವ ಜನತೆಯನ್ನು ರಕ್ಷಿಸಲು ಅಗತ್ಯ ನೆರವಿಗೆ ಧಾವಿಸಲು ಜಿಲ್ಲೆಗಳಿಗೆ ಅಗತ್ಯ ನೆರವನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಆಹಾರದ ಪೊಟ್ಟಣಗಳು, ಪಡಿತರ ವಿತರಣೆ, ತಾತ್ಕಾಲಿಕ ವಸತಿಗಳನ್ನು ನಿರ್ಮಿಸಬೇಕು.

ಅದೇ ರೀತಿ, ರಾಜ್ಯದಾದ್ಯಂತ ಆಗಿರುವ ಹಾನಿಯನ್ನು ಗುರುತಿಸಲು ಅಧಿಕಾರಿಗಳ ತಂಡವನ್ನು ರಚಿಸಿ ಗಣತಿ ಮಾಡಬೇಕು. ಬೆಳೆ ಹಾನಿಗೆ ಪ್ರತಿ ಎಕರೆಗೆ ತಲಾ 20,000 ಮರಗಳ ಹಾನಿಗೆ ತಲಾ ಮರಕ್ಕೆ 10,000 ರೂಗಳಂತೆ, ಹೊಲದ ಕೊರಕಲುಗಳಿಗೆ ಪ್ರತಿ ಎಕರೆಗೆ 20,000 ಮತ್ತು ಜಾನುವಾರು ಹಾನಿಗೆ ತಲಾ 50,000 ರೂ, ಬಿದ್ದ ಮನೆಗಳಿಗೆ ಪರಿಹಾರವನ್ನು ಒದಗಿಸಬೇಕೆಂದು ಮತ್ತು ಸಾಂಕ್ರಾಮಿಕ ಹಾವಳಿ ತಡೆಯಲು ಅಗತ್ಯ ಕ್ರಮವಹಿಸುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

ಹೋರಾಟಗಾರ್ತಿಯರ ಸಮುದಾಯ ಪ್ರಜ್ಞೆ: 33 ಕೆರೆಗಳು ಭರ್ತಿ! –ನೀಲಾ ಕೆ.

ಸುಭಾಸ ಎಸ್.

ಕಲಬುರ್ಗಿ: ಅಂತರ್ಜಲ ಹೆಚ್ಚಿಸಲು ಮತ್ತು ಸ್ಥಳೀಯವಾಗಿ ಮಹಿಳೆಯರಿಗೆ ಉದ್ಯೋಗ ದೊರಕಿಸಿಕೊಡಲು ಮುಂದಾದ ಮಹಿಳೆಯರ ಹೋರಾಟವು ಚಳವಳಿ ರೂಪ ಪಡೆದುಕೊಂಡ ಪರಿಣಾಮ ಜಿಲ್ಲೆಯಲ್ಲಿ 33 ಕೆರೆಗಳು ಈಗ ಮೈದುಂಬಿಕೊಂಡಿವೆ.

ತಾಲ್ಲೂಕಿನ ಆಜಾದಪುರ ಕೆರೆಯು ಹೂಳು ಮತ್ತು ಗಿಡಗಂಟಿಗಳಿಂದ ಸಂಪೂರ್ಣವಾಗಿ ಮುಚ್ಚಿಹೋಗಿತ್ತು. ಅಲ್ಲಿಯ ಜನ ಕೆಲಸ ಅರಸಿ ನಗರಕ್ಕೆ ಬರುತ್ತಿದ್ದರು. ಉದ್ಯೋಗ ಖಾತರಿ ಯೋಜನೆಯಡಿ ಕೆರೆ ಹೂಳೆತ್ತುವ ಕಾಮಗಾರಿ ಕೈಗೊಂಡರೆ ಸ್ಥಳೀಯವಾಗಿ ಉದ್ಯೋಗ ದೊರಕಿಸಿಕೊಡುವ ಜೊತೆಗೆ, ಕೆರೆಗಳನ್ನು ಸಂರಕ್ಷಿಸಬಹುದು ಎನ್ನುವ ಉದ್ದೇಶದಿಂದ ಪ್ರಜ್ಞಾ ಕಾನೂನು ಸಲಹಾ ಸಮಿತಿ ಹಾಗೂ ಜನವಾದಿ ಮಹಿಳಾ ಸಂಘಟನೆಯವರು ಹೋರಾಟಕ್ಕೆ ಇಳಿದರು. ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕೆಲಸವನ್ನು ಕೈಗೆತ್ತಿಕೊಂಡು ಹೂಳೆತ್ತಿಸಿದರು. ಮಳೆಗಾಲದಲ್ಲಿ ಕೆರೆ ತುಂಬಿತು!

ಈ ಯಶಸ್ಸೇ ಮುಂದಿನ ಯಶೋಗಾಥೆಗೆ ಪ್ರೇರಣೆ ಆಯಿತು. ಉದ್ಯೋಗ ಖಾತರಿ ಯೋಜನೆಯಡಿ ಅಲ್ಲಿಷ್ಟು, ಇಲ್ಲಿಷ್ಟು ಕೆಲಸ ಮಾಡಿದರೆ ಪ್ರಯೋಜನವಿಲ್ಲ. ಒಂದೇ ಕಡೆ ದೊಡ್ಡಮಟ್ಟದಲ್ಲಿ ಕೆಲಸ ಮಾಡಿದರೆ ಹೆಚ್ಚು ಅನುಕೂಲ ಎನ್ನುವುದನ್ನು ಪ್ರಜ್ಞಾ ಕಾನೂನು ಸಲಹಾ ಸಮಿತಿ ಅಧ್ಯಕ್ಷೆ ಡಾ.ಮೀನಾಕ್ಷಿ ಬಾಳಿ, ಉಪಾಧ್ಯಕ್ಷ ಡಾ.ಪ್ರಭು ಖಾನಾಪುರೆ, ಕಾರ್ಯದರ್ಶಿ ನೀಲಾ ಕೆ., ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷೆ ಚಂದಮ್ಮ ಗೋಳಾ, ಉಪಾಧ್ಯಕ್ಷೆ ಡಾ.ಶಾಂತಾ ಮಠ, ಕಾರ್ಯದರ್ಶಿ ನಂದಾದೇವಿ ಮಂಗೊಂಡಿ ಅರಿತರು. ಜಿಲ್ಲೆಯಲ್ಲಿ 33 ಕೆರೆಗಳ ಹೂಳನ್ನು ಎತ್ತಿಸಿದರು. ಅಷ್ಟೂ ಕೆರೆಗಳಲ್ಲಿ ನೀರು ನಿಂತಿದೆ. ಇಷ್ಟೇ ಅಲ್ಲ. ಸುತ್ತಲಿನ ಕೊಳವೆಬಾವಿ, ತೆರೆದಬಾವಿಗಳು ಮರುಪೂರಣಗೊಂಡಿವೆ.

‘ಕೆರೆ, ಬಾವಿಗಳು ಊರಿನ ಜೀವನಾಡಿಗಳು. ನಮ್ಮ ನಿರ್ಲಕ್ಷ್ಯದಿಂದ ಅಂತರ್ಜಲ ಮಟ್ಟ ಕುಸಿಯುತ್ತ ಹೋಗುತ್ತಿದೆ. ಈಗ ನಾವು ಫ್ಲೋರೈಡ್, ಆರ್ಸೆನಿಕ್‌ಯುಕ್ತ ನೀರನ್ನು ಕುಡಿಯುವಂತಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಭವಿಷ್ಯ ಕಠಿಣ ಎನ್ನುವುದನ್ನು ಅರಿತು ಉದ್ಯೋಗ ಖಾತರಿ ಯೋಜನೆ ಮೂಲಕ ಕೆರೆಗಳ ಹೂಳೆತ್ತುವ ಕಾಮಗಾರಿ ಆರಂಭಿಸುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಬೇಕು ಎಂಬ ನಿರ್ಣಯಕೈಗೊಂಡೆವು. ಅಷ್ಟಕ್ಕೆ ಸುಮ್ಮನಾಗದೆ, ಹಗಲು–ರಾತ್ರಿ ಬೆನ್ನು ಹತ್ತಿದ್ದರಿಂದ ಕೆರೆಗಳ ಒಡಲು ಈಗ ಭರ್ತಿಯಾಗಿವೆ’ ಎಂದು ಹೋರಾಟಗಾರ್ತಿ ನೀಲಾ ಕೆ. ಖುಷಿಯಿಂದ ಹೇಳುತ್ತಾರೆ.

ಆಜಾದಪುರ ಕೆರೆಯ ನಂತರ ಅಫಜಲಪುರ, ಆಳಂದ ಮತ್ತು ಚಿಂಚೋಳಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕೆರೆ ಹೂಳೆತ್ತುವ ಕಾಮಗಾರಿಗಳು ನಡೆದವು. ಹೆಚ್ಚಿನ ಸಂಖ್ಯೆಯಲ್ಲಿದ್ದ ಮಹಿಳೆಯರು ಕೆರೆಗಳ ಕಾಮಗಾರಿ ಜೊತೆಗೆ ಹಳ್ಳ, ನಾಲಾ, ಗೋಕಟ್ಟೆ, ಚೆಕ್‌ಡ್ಯಾಂ ಮತ್ತು ರೈತರ ಹೊಲದಲ್ಲಿ ಕೃಷಿಹೊಂಡ ಕಾಮಗಾರಿಯನ್ನೂ ಕೈಗೊಂಡರು.

ಎಷ್ಟೋ ಕಡೆ ಜನಪ್ರತಿನಿಧಿಗಳು, ಅಧಿಕಾರಿಗಳು ಸರಿಯಾಗಿ ಸ್ಪಂದಿಸಲಿಲ್ಲ. ಕೆಲವೆಡೆ ಅವರೇ ಅಡ್ಡಗಾಲು ಹಾಕಿದರು. ಆದರೆ ಅಂದಿನ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಅನಿರುದ್ಧ ಶ್ರವಣ್ ಪಿ. ಅವರು ಬೆನ್ನೆಲುಬಾಗಿ ನಿಂತರು ಎಂದು ನೆನಪಿಸಿಕೊಳ್ಳುತ್ತಾರೆ.

‘ಕೆಲವು ಹಳ್ಳಿಗಳಲ್ಲಿ ರಾಜಕೀಯ ಜೋರಾಗಿದೆ. ಹೀಗಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ)ಗಳು ಜವಾಬ್ದಾರಿ ತೆಗೆದುಕೊಳ್ಳಲು ಹಿಂದೇಟು ಹಾಕಿದರು. ನಾವೇ ಬೆನ್ನುಬಿದ್ದು, ಅರ್ಜಿ ಪಡೆದುಕೊಂಡು ಭರ್ತಿ ಮಾಡಿಕೊಟ್ಟೆವು. ಪ್ರತಿನಿತ್ಯ ಉರಿ ಬಿಸಿಲಲ್ಲೇ ನಿಂತು ಹುರುಪು ತುಂಬಿದ್ದರಿಂದ ಸಾವಿರಾರು ಮಹಿಳೆಯರು ಯುದ್ಧೋಪಾದಿಯಲ್ಲಿ ಕೆಲಸ ಮಾಡಿದರು. ಪರಿಣಾಮ ಕೆರೆಯ ಅಭಿವೃದ್ಧಿ ಜತೆಗೆ ಅವರ ಆರ್ಥಿಕ ಸ್ಥಿತಿಯೂ ಬದಲಾಯಿತು’ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡ ಹೋರಾಟವನ್ನು ಗುರುತಿಸಿದ ರಾಜ್ಯ ಸರ್ಕಾರವು ಚಂದಮ್ಮ ಗೋಳಾ, ನಂದಾದೇವಿ ಮಂಗೊಂಡಿ ಅವರಿಗೆ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ನೀಡಿ ಗೌರವಿಸಿದೆ.

ಅಭಿವೃದ್ಧಿಗೊಂಡ ಕೆರೆಗಳು ಆಳಂದ ತಾಲ್ಲೂಕು: ಕಡಗಂಚಿ, ತಡಕಲ್, ನರೋಣಾ ಗ್ರಾಮಗಳಲ್ಲಿ ತಲಾ ಎರಡು, ಹೊನ್ನಳ್ಳಿ, ಧುತ್ತರಗಾಂವ, ವೈಜಾಪುರ, ಮುನ್ನಳ್ಳಿ, ಆಳಂದ, ಸಾಲೇಗಾಂವ, ಚಿತ್ತಲು, ದಣ್ಣೂರ, ನಿಂಬರ್ಗಾ, ತೆಲ್ಲೂರ, ಎಲೆನಾವದಗಿ. ಗುಳೆ ತಪ್ಪಿಸಲು, ಅಂತರ್ಜಲ ಹೆಚ್ಚಿಸಲು ಸುದೀರ್ಘ ಹೋರಾಟ ಮಾಡಿದ್ದರ ಫಲದಿಂದ ಕೆರೆಗಳು ನೀರಿನಿಂದ ಭರ್ತಿಯಾಗಿವೆ.



ಕಟ್ಟಡ ಕಾರ್ಮಿಕರ ಆಹಾರ ಕಿಟ್: ಅನರ್ಹರ ವಶ ಖಂಡಿಸಿ ಪ್ರತಿಭಟನೆ

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಮಿಕರ ಹಣದಿಂದ ಆಹಾರ ಕಿಟ್ ಪಡೆದು ಬೈಂದೂರು ಶಾಸಕರು ಬಹುತೇಕ ಅನರ್ಹರಿಗೆ ಹಂಚುತ್ತಿದ್ದಾರೆ ಎಂದು ಬೈಂದೂರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಮುಖಂಡ ಹಾಗೂ ಸಿಐಟಿಯು ಸಂಚಾಲಕರಾದ ರೊನಾಲ್ಡ್ ರಾಜೇಶ್ ಕ್ವಾಡ್ರಸ್

ಅವರು, ಬೈಂದೂರಿನಲ್ಲಿ ನಡೆದ ಶಾಸಕರ ಆಹಾರ ಕಿಟ್ ತಾರತಮ್ಯ ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದರು.

ರಾಜ್ಯದ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ 20 ಲಕ್ಷ ಆಹಾರ ಕಿಟ್ ಖರೀದಿ ಮಾಡಿ ಕಳೆದ 10–14 ವರ್ಷಗಳಿಂದ ಮಂಡಳಿಯಲ್ಲಿ ನೋಂದಾಯಿಸಿಕೊಂಡು ನಿರಂತರ ವಂತಿಗೆ ಪಾವತಿ ಮಾಡಿದ ಕಟ್ಟಡ ಕಾರ್ಮಿಕರಿಗೆ ಶಾಸಕರು ಆಹಾರ ಕಿಟ್ ನಿರಾಕರಿಸಿ ಬಹುತೇಕ ಆನ್ ಲೈನ್ ನಲ್ಲಿ ಗುರುತುಚೀಟಿ ಪಡೆದ ಅನರ್ಹರಿಗೆ ವಿತರಣೆ ಮಾಡುತ್ತಿರುವುದು ಖಂಡನೀಯವಾಗಿದೆ ಎಂದು ಹೇಳಿದರು.

ಬೈಂದೂರು ಸಂಘದ ಪ್ರಧಾನ ಕಾರ್ಯದರ್ಶಿ ಗಣೇಶ ತೊಂಡೆಮಕ್ಕಿ ಮಾತನಾಡಿ ಕಲ್ಯಾಣ ಮಂಡಳಿಯ ಸಾವಿರಾರು ಕೋಟಿ ಕಟ್ಟಡ ಕಾರ್ಮಿಕರ ಕುಟುಂಬಗಳ ಹಣದಲ್ಲಿ ಐಶರಾಮಿ ಕಾರು ಖರೀದಿ, ನೂರಾರು ಟಿವಿಗಳ ಖರೀದಿ, ಟೂಲ್ ಖರೀದಿಗಳ ಮೂಲಕ ಬಿಜೆಪಿ ರಾಜಕೀಯ ಉದ್ದೇಶಗಳಿಗೆ ಬಳಸುತ್ತಿದೆ ಎಂದು ಹೇಳಿದ ಅವರು ಇದರ ವಿರುದ್ಧ ರಾಜ್ಯಾದ್ಯಂತ ಸಂಘವು ತೀವ್ರ ಹೋರಾಟಕ್ಕೆ ಕರೆ ನೀಡಿದೆ ಎಂದು ಹೇಳಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮುಖ್ಯ ಅತಿಥಿಯಾಗಿ ಮಾತನಾಡಿದರು. ಸಿಐಟಿಯು ಮುಖಂಡರಾದ ವೆಂಕಟೇಶ್ ಕೋಣಿ, ಅಮ್ಮಯ್ಯ ಪೂಜಾರಿ, ಮಂಜುಪಡುವರಿ ನಾಗರತ್ನ ನಾಡ, ಶಾರದ ಬೈಂದೂರು, ನಾಗರತ್ನ ಪಡುವರಿ, ವಿಜಯ, ಮಾಧವ ದೇವಾಡಿಗ, ಶ್ರೀಧರ ಉಪ್ಪುಂದ, ರಾಜೀವ ಅರೆಹೊಳೆ ಇದ್ದರು.

ಅಸಂಘಟಿತ ಕಾರ್ಮಿಕರಿಗೆ 1000 ಕೋಟಿ ರೂ.ಗಳ 3ನೇ ಪ್ಯಾಕೇಜ್ ನೀಡಲು ಸಿಪಿಐ(ಎಂ) ಒತ್ತಾಯ

ರಾಜ್ಯ ಸರ್ಕಾರವು 11 ವೃತ್ತಿಗಳಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರಿಗೆ ಪ್ರಕಟಿಸಿರುವ ಕೋವಿಡ್ ಲಾಕ್ಡೌನ್ ಪರಿಹಾರ ಪ್ಯಾಕೇಜ್ ಪಡೆಯಲು ಸೇವಾ ಸಿಂಧು ಅಡಿ ಇದುವರೆಗೆ 13 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಅರ್ಜಿ ಸಲ್ಲಿಸಿದ್ದಾರೆ. ಅವರೆಲ್ಲರಗೂ ಮತ್ತು ಇನ್ನು ಮುಂದೆ ನೋಂದಾಯಿಸಿ ಕೊಳ್ಳಲ್ಲಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆಯನ್ನು ಅಂದಾಜಿಸಿ ಕನಿಷ್ಠ 1000 ಕೋಟಿ ರೂಗಳ ಮೂರನೇ ಪ್ಯಾಕೇಜ್ ನೀಡಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಕೋವಿಡ್ ಎರಡನೆ ಅಲೆಯ ಲಾಕ್ಡೌನ್ ಪರಿಹಾರವಾಗಿ ರಾಜ್ಯ ಸರ್ಕಾರವು ಪ್ರಕಟಿಸಿರುವ ಎರಡನೆ ಪ್ಯಾಕೇಜ್ ನಲ್ಲಿ ನೀಡಲಾಗಿದ್ದ 61 ಕೋಟಿ ರೂಗಳ ಹಣದಿಂದ ಪ್ಯಾಕೇಜ್ ಘೋಷಣೆಗೆ ಮೊದಲು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷತಾ ಮಂಡಳಿಯಲ್ಲಿ ನೋಂದಾಯಿಸಿ ಕೊಂಡಿದ್ದ 3.05 ಲಕ್ಷ ಕಾರ್ಮಿಕರಿಗೆ ಮಾತ್ರ ಪರಿಹಾರ ನೀಡಲು ಸಾಕಾಗುವಷ್ಟಾಗಿದೆ. ಉಳಿದಂತೆ ಸಧ್ಯ ಅರ್ಜಿ ಸಲ್ಲಿಸಿರುವ ಕಾರ್ಮಿಕರಿಗೆ ಪರಿಹಾರ ನೀಡಲು ಕಲ್ಯಾಣ ಮಂಡಳಿಯಲ್ಲಿ ಹಣ ಇಲ್ಲದಾಗಿದೆ. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಜುಲೈ 31 ರ ಕೊನೆಯ ದಿನಾಂಕವನ್ನು ಆಗಸ್ಟ್ 30 ರವರೆಗೆ ವಿಸ್ತರಿಸಿ ಅದುವರೆಗೆ ನೋಂದಾಯಿಸಿಕೊಳ್ಳುವ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಪರಿಹಾರ ನೀಡ ಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ನೋಂದಾಯಿಸಿಕೊಳ್ಳಲು ಸಲ್ಲಿಸ ಬೇಕಾದ ದಾಖಲೆಗಳನ್ನು ಪದೆ ಪದೆ ಬದಲಾಯಿಸಿದ ಕಾರಣ ಹಾಗೂ ಸೇವಾ ಸಿಂಧು ಸರ್ವರ್ ಡೌನ್ ಆಗುವ ತಾಂತ್ರಿಕ ಕಾರಣಗಳಿಂದಾಗಿ ಹಲವು ಅಸಂಘಟಿತ ಕಾರ್ಮಿಕರಿಗೆ ನೊಂದಾಯಿಸಿ ಕೊಳ್ಳಲು ಸಾಧ್ಯವಾಗಿಲ್ಲ. ಆದಕಾರಣ ಕೊನೆಯ ದಿನಾಂಕವನ್ನು ಆಗಸ್ಟ್ 30 ರವರೆಗೆ ವಿಸ್ತರಿಸಿ ಇತರೆ ಒಟ್ಟು 134 ವೃತ್ತಿಯಲ್ಲಿ ತೊಡಗಿರುವ ಎಲ್ಲಾ ಅಸಂಘಟಿತ ಕಾರ್ಮಿಕರಿಗು ನೆರವು ನೀಡಬೇಕೆಂದು ಸಿಪಿಐ(ಎಂ) ಕೋರಿದೆ. ರಾಜೀನಾಮೆ ನೀಡಬೇಕಾಗ ಬಹುದೆಂಬ ಹಿನ್ನೆಲೆಯಲ್ಲಿ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ತಮಗೆ ಬೇಕಾದ ಎಲ್ಲದಕ್ಕೂ ಸಾವಿರಾರು ಕೋಟಿ ರೂಗಳ ಹಣ ಮಂಜೂರು ಮಾಡಿಕೊಂಡಿರುವ ಮುಖ್ಯ ಮಂತ್ರಿಗಳು ಮತ್ತು ಬಿಜೆಪಿ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಪ್ರಕಟಿಸಿರುವ ಪರಿಹಾರಕ್ಕೆ ಅಗತ್ಯ ಹಣ ಮಂಜೂರು ಮಾಡದಿರುವುದು ಬಿಜೆಪಿ ಸರ್ಕಾರದ ಆದ್ಯತೆಯನ್ನು ತೋರುತ್ತದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಕೊರೋನಾ ಸಾಂಕ್ರಾಮಿಕ ವೈರಸ್ ಹರಡುವಿಕೆಗೆ ತಡೆ ಮತ್ತು ಸೋಂಕು ತಗುಲಿದಾಗ ಅನುಸರಿಸಬೇಕಾದ ಜಾಗೃತಿ ಹಾಗೂ ಚಿಕಿತ್ಸೆ ಕುರಿತು



ಆದಿವಾಸಿ ಸ್ವಯಂ ಸೇವಕ ರಿಗೆ ತರಬೇತಿ ಶಿಬಿರವನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಕೊಡಗು ಜಿಲ್ಲೆ, ಇದೇ ಜುಲೈ 24 ರಂದು ವ್ಯವಸ್ಥೆಗೊಳಿಸಿತ್ತು. ಕೊಡಗು ಜಿಲ್ಲೆಯ ತಿತಿಮತಿ ಸಭಾಂಗಣದಲ್ಲಿ ಜರುಗಿದ ಶಿಬಿರವನ್ನು ಜನಪರ ವೈದ್ಯ ಪೀಪಲ್ಸ್ ಸರ್ಜಿಕಲ್ ಅಂಡ್ ಮೆಟರ್ನಿಟಿ ಆಸ್ಪತ್ರೆ, ಬಾಗೇಪಲ್ಲಿ ಯ ವೈದ್ಯರಾದ ಡಾ. ಎ. ಅನಿಲ್ ಕುಮಾರ್ ರಿಂದ ಉದ್ಘಾಟನೆ ಮತ್ತು ತರಬೇತಿ. ಅತಿಥಿಗಳಾಗಿ ಎಸ್.ವೈ. ಗುರುಶಾಂತ್ ತಿತಿಮತಿ ಗ್ರಾಮ ಪಂಚಾಯತಿ ಅದ್ಯಕ್ಷರಾದ ಶ್ರೀಮತಿ ಆಶಾ, ಆಗಮಿಸಿದ್ದರು. ಅದ್ಯಕ್ಷತೆ ಎನ್ನುವ ರಾಜ್ಯ ಸಂಚಾಲಕರು ಕೊಡಗು ಜಿಲ್ಲೆಯ ಅಧ್ಯಕ್ಷರಾದ ವೈ. ಕೆ ಗಣೇಶ್ ರವರು ವಹಿಸಿದ್ದರು. ಕಾರ್ಯಕ್ರಮವನ್ನು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ನ್ಯಾನ್ಸಿ ಅವರು ನಿರ್ವಹಿಸಿದರು. ರಾಜ್ಯ ಸಹಸಂಚಾಲಕಿ ಜೆ.ಆರ್. ಪ್ರೇಮಾ, ಜಿಲ್ಲಾ ಆದಿವಾಸಿ ಸಂಘಟನೆಯ ಕಾರ್ಯದರ್ಶಿ ಅಶೋಕ್, ಹಾಗೂ ಹಿರಿಯರಾದ ಡಾ. ಐ.ಅರ್.ದುರ್ಗಾಪ್ರಸಾದ್ ರವರು ಉಪಸ್ಥಿತರಿದ್ದರು.

ಲಿಂಗಾಯತರ ವಿರೋಧ ಕಟ್ಟಿಕೊಳ್ಳದೆ ತಂತ್ರ ಹೆಣೆದ ಬಿಜೆಪಿ, ಹಿಂದುತ್ವದ ಅಜೆಂಡ ಸಿಎಂ ಆಯ್ಕೆಗೆ ಮುಖ್ಯವಾಯಿತೆ?!

ಗುರುರಾಜ ದೇಸಾಯಿ

ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅವರು ಇಂದು ಬೆಳಿಗ್ಗೆ 11 ಗಂಟೆ ಸರಿಯಾಗಿ ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ರ ಗೆಹ್ಲೋಟ್ ಅವರಿಂದ ಅಧಿಕಾರ ಮತ್ತು ಗೌಪ್ಯತೆಯ ಪ್ರತಿಜ್ಞಾವಿಧಿ ಸ್ವೀಕರಿಸಿದ್ದಾರೆ. ಯಡಿಯೂರಪ್ಪ ರಾಜೀನಾಮೆ ನೀಡುವ ಮೂಲಕ ನಾಯಕತ್ವ ಬದಲಾವಣೆಗೆ ಅಂತಿಮ ತೆರೆ ಎಳೆದ ಬಳಿಕ ಹೈಕಮಾಂಡ್ ರಾಜ್ಯಕ್ಕೆ ಹೊಸ ಸಿಎಂ ಆಯ್ಕೆ ಮಾಡಿದೆ. ಮತ್ತೆ ಲಿಂಗಾಯತರಿಗೆ ಮಣೆಹಾಕುವ ಮೂಲಕ ಬಿಜೆಪಿ ಜಾಣ ನಡೆಯನ್ನು ಅನುಸರಿಸಿದೆ. ಬೇರೆ ಸಮುದಾಯಕ್ಕೆ ಸೇರಿದ ಶಾಸಕರನ್ನು ಸಿಎಂ ಮಾಡಿದರೆ ರಾಜ್ಯದಲ್ಲಿ ಬಿಜೆಪಿಗೆ ಹಿನ್ನಡೆಯಾಗಬಹುದು ಎಂಬುದನ್ನು ಹೈಕಮಾಂಡ್ ಅರಿತಂತಿದೆ. ಹಾಗಾಗಿ ಲಿಂಗಾಯತ ಸಮುದಾಯಕ್ಕೆ ಮತ್ತೊಮ್ಮೆ 'ಸಿಎಂ' ಪಟ್ಟ ಕಟ್ಟಲಾಗಿದೆ.

ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಗಟ್ಟಿ ರಾಜ್ಯ ಕರ್ನಾಟಕ. ಮೊದಲ ಬಾರಿಗೆ ಬಿಜೆಪಿ ಅಧಿಕಾರದ ಪತಾಕೆ ಹಾರಿಸಿದ್ದು ಕರ್ನಾಟಕದಲ್ಲಿಯೇ. ಬದಲಾದ ರಾಜಕೀಯ ಗುದ್ದಾಟದಲ್ಲಿ ಮತ್ತೆ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದಿತ್ತು. ಈ ಅಧಿಕಾರದ ಗದ್ದುಗೆಯನ್ನ ಬಿಟ್ಟುಕೊಡಬಾರದೆಂಬುದು ಬಿಜೆಪಿಯ ಮಹಾದಾಸೆ. ಅದಕ್ಕಾಗಿಯೇ ಯಡಿಯೂರಪ್ಪ ನಂತರದ ನಾಯಕತ್ವಕ್ಕೆ ಹುಡುಕಾಟ ನಡೆಸಿ 2023 ಚುನಾವಣೆಗೆ ತಂತ್ರವನ್ನೂ ಹೂಡಿದೆ. ಯಡಿಯೂರಪ್ಪ ನಂತರವೂ ಬಿಜೆಪಿ ಮತ್ತಷ್ಟು ಗಟ್ಟಿ ಮಾಡಬೇಕು ಅನ್ನೋ ದೂರದೃಷ್ಟಿ. ಯಡಿಯೂರಪ್ಪ ಜಾಗಕ್ಕೆ ತಕ್ಕನಾದ ಮಾಸ್ ಇಲ್ಲದಿದ್ದರೂ ಕ್ಯಾಸ್ಟ್ ಬೇಸ್ ಇರಬೇಕು ಅನ್ನೋದು ಹೈಕಮಾಂಡ್ ಲೆಕ್ಕಾಚಾರ. ಹಾಗಾಗಿಯೇ ಯಡಿಯೂರಪ್ಪ ನಂತರದ ಉತ್ತರಾಧಿಕಾರಿ ತಲಾಶ್ ಗೆ ಒಳಗೊಳಗೆ ತಂತ್ರ ನಡೆಸುತ್ತಾ ಬಂದಿತ್ತು. ಆ ತಂತ್ರದ ಪ್ರಯೋಗವೇ ಬಸವರಾಜ ಬೊಮ್ಮಾಯಿ ಆಯ್ಕೆ. ಇತ್ತ ಯಡಿಯೂರಪ್ಪ ತಮ್ಮ ರಾಜೀನಾಮೆಗೆ ಕಾರಣವನ್ನು ಬಿಚ್ಚಿಡದೆ ಮೌನವಹಿಸಿದ್ದಾರೆ. ನಾನು ಸೂಚಿಸಿದವರು ಸಿಎಂ ಆಗಿದ್ದಾರೆ, ಕಿಂಗ್ ಮೇಕರ್ಆಗಿ ಕಾರ್ಯನಿರ್ವಹಿಸಬಹುದಲ್ಲಾ ಎಂದು ಯಡಿಯೂರಪ್ಪ ಲೆಕ್ಕಾಚಾರ ಹಾಕಿದಂತೆ ಕಾಣುತ್ತದೆ.

ಯಡಿಯೂರಪ್ಪ ರಾಜೀನಾಮೆಗೆ ಕಾರಣವೇನು?

ಯಡಿಯೂರಪ್ಪ ಪದಚ್ಯುತಿಗೆ ಕಾರಣವೇನು ಎಂಬುದು ಇಲ್ಲಿವರಿಗೆ ಉತ್ತರಕ್ಕೆ ಸಿಗದ ಪ್ರಶ್ನೆಯಾಗಿದೆ. ಆದರೆ ಅವರು ಮೌನವಾಗಿದ್ದರು ಅವರ ರಾಜೀನಾಮೆಗೆ ಕಾರಣವೇನು ಎಂಬುದನ್ನು ಜನ ಆಗಲೇ ಲೆಕ್ಕ ಹಾಕಿದ್ದಾರೆ. ಆಡಳಿತ ನಿರ್ವಹಣೆಯಲ್ಲಿ ಯಡಿಯೂರಪ್ಪ ಸೋಲುತ್ತಿರುವುದು, ಅವರ ಮಗ ಬಿ.ವೈ. ವಿಜಯೇಂದ್ರ ಪರೋಕ್ಷವಾಗಿ ಆಡಳಿತ ನಡೆಸುತ್ತಿರುವುದು ಬದಲಾವಣೆಯತ್ತ ಚಿತ್ತ ಹರಿಸಲು ಪ್ರಮುಖ ಕಾರಣ. ಆಡಳಿತ ಹಸ್ತಕ್ಷೇಪ ಹಾಗೂ ಸಾರ್ವಜನಿಕ ಲಜ್ಜೆಯೂ ಇಲ್ಲದಂತೆ ಭ್ರಷ್ಟಾಚಾರವನ್ನು ಬಿಡುಬೀಸಾಗಿ ನಡೆಸಲಾಗುತ್ತಿದೆ. ಇದು ಸಾರ್ವಜನಿಕರ ಆಕ್ರೋಶಕ್ಕೂ ಕಾರಣವಾಗುತ್ತದೆ. ಕನಿಷ್ಠ ಪ್ರಾಮಾಣಿಕತೆ ಉಳಿಸಿಕೊಂಡಿರುವ ಕೆಲವು ಶಾಸಕರು 'ಇಂತಹ ಸರ್ಕಾರದಲ್ಲಿ ತಾವು ಏಕೆ ಭಾಗಿಯಾಗಿರಬೇಕು' ಎಂದು ಪ್ರಶ್ನಿಸಿರುವುದರಿಂದ ನಾಯಕತ್ವ ಬದಲಾವಣೆಗೆ ಪಕ್ಷದ ವರಿಷ್ಠರು ಮನಸ್ಸು ಮಾಡಿದ್ದರು ಎಂಬುದನ್ನು ಗುಟ್ಟಾಗಿ ಇಡಬೇಕಾಗಿಲ್ಲ. ರಾಜೀನಾಮೆ ನೀಡಲು ವರಿಷ್ಟರು ಯಡಿಯೂರಪ್ಪಗೆ ಒತ್ತಡ ಹೇರಿದ್ದು ನಿಜ ಎಂಬುದು ಅವರ ಗದ್ಗದಿತ ಭಾಷಣ ಕೇಳಿದವರು ಸುಲಭವಾಗಿ ಪತ್ತೆಹಚ್ಚಿಬಿಡಬಹುದು.



ಕರ್ನಾಟಕದಲ್ಲಿ ಪಕ್ಷ ಕಟ್ಟಿ, ಅಧಿಕಾರಕ್ಕೆ ತಂದ ಹೆಗ್ಗಳಿಕೆ ಹೊಂದಿರುವ ಯಡಿಯೂರಪ್ಪ ಮೇಲೆ ಗೌರವ ಇಟ್ಟಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಯಾವುದೇ ಗೊಂದಲಗಳಿಗೆ ಆಸ್ಪದವಿಲ್ಲದೇ 'ಶುಭ ವಿದಾಯ'ದ ರೀತಿಯಲ್ಲಿ ಮುಖ್ಯಮಂತ್ರಿಯೇ ಕುರ್ಚಿ ತ್ಯಾಗ ಮಾಡಲಿ ಎಂಬ ಅಪೇಕ್ಷೆ ಹೊಂದಿದ್ದರು. ಅದಕ್ಕಾಗಿಯೇ ಕಳೆದವಾರ ಯಡಿಯೂರಪ್ಪನವರನ್ನು ದೆಹಲಿಗೆ ಕರೆಯಿಸಿಕೊಂಡು ಸಾಕಷ್ಟು ವಿಚಾರಗಳನ್ನು ಚರ್ಚಿಸಿ ಅಂತಿಮವಾಗಿ ರಾಜೀನಾಮೆ ನೀಡುವಂತೆ ಮೋದಿ ಮತ್ತು ಅಮಿತ್ ಶಾ ಸೂಚನೆ ನೀಡಿದ್ದಾರೆ. ನಿಮ್ಮ ರಾಜೀನಾಮೆ ನಿಮಗೂ ಮತ್ತು ನಿಮ್ಮ ಮಕ್ಕಳ ಭವಿಷ್ಯಕ್ಕೂ ದಾರಿಯಾಗುತ್ತದೆ ಎಂಬ ದಾಳವನ್ನು ಕೇಂದ್ರದ ವರಿಷ್ಟರು ಉರುಳಿಸುತ್ತಿದ್ದಂತೆ, ಯಡಿಯೂರಪ್ಪ ಒಂದು ಬೇಡಿಕೆಯನ್ನು ಇಡುತ್ತಾರೆ.

ಆ ಬೇಡಿಕೆ ಏನೆಂದರೆ ನಾನು ಹೇಳಿದವರನ್ನೇ ಮೊದಲ ಆದ್ಯತೆಯಾಗಿ ಪರಿಗಣಿಸಿ ಮುಖ್ಯಮಂತ್ರಿ ಸ್ಥಾನಕ್ಕೆ ಕೂರಿಸುವಲ್ಲಿ ಪಕ್ಷ ಸಿದ್ಧವಿದೆ ಎನ್ನುವುದಾದರೆ ನಾನು ರಾಜೀನಾಮೆ ನೀಡಲು ಸಿದ್ದ ಎಂದಿದ್ದಾರೆ. ಇದಕ್ಕೆ ಮೋದಿ ಮತ್ತು ಶಾ ತಲೆ ಅಲ್ಲಾಡಿಸಿದ್ದಾರೆ. ಹಾಗಾಗಿ ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದು ಯಡಿಯೂರಪ್ಪ ಉರುಳಿಸಿದ ದಾಳದಿಂದ. ಮುಂದಿನ ಚುನಾವಣೆಯಲ್ಲಿ ಗೆಲುವಿನ ಲೆಕ್ಕಾಚಾರದಲ್ಲಿರುವ ಕೇಂದ್ರದ ಹೈಕಮಾಂಡ್ ತುಟಿಪಿಟಕ್ಕೆನ್ನದೆ ಬೊಮ್ಮಾಯಿ ಆಯ್ಕೆಗೆ ಅಂಕಿತ ಹಾಕಿದೆ.

ಬೊಮ್ಮಾಯಿಯನ್ನು ಸಂಘ ಒಪ್ಪಿಕೊಂಡಿದ್ದು ಹೇಗೆ?

ಬಸವರಾಜ ಬೊಮ್ಮಾಯಿ ಜೆಡಿಎಸ್ ಮೂಲಕ ರಾಜಕೀಯ ಜೀವನ ಆರಂಭಿಸಿದ್ದರು. 2008ರಲ್ಲಿ ಕಮಲ ಪಕ್ಷಕ್ಕೆ ಸೇರ್ಪಡೆಯಾಗಿದ್ದರು. ಅದೇ ವರ್ಷ ಹಾವೇರಿ ಜಿಲ್ಲೆಯ ಶಿಗ್ಗಾಂವ್ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನಸಭೆ ಪ್ರವೇಶ ಪಡೆದಿದ್ದರು. ಆಯ್ಕೆಯಾದ ಮೊದಲ ಅವಧಿಯಲ್ಲೇ ನೀರಾವರಿ ಸಚಿವರಾಗಿ ಕಾರ್ಯನಿರ್ವಹಿಸಿದರು, 2019 ರಿಂದ ಗೃಹಸಚಿವರಾಗಿ ಕಾರ್ಯವನ್ನು ನಿರ್ವಹಿಸಿದವರು.



ಮೂಲ ಬಿಜೆಪಿಗ ಅಲ್ಲದಿದ್ದರೂ ಕೇವಲ 13 ವರ್ಷಗಳಲ್ಲಿ ನೀರಾವರಿ ಸಚಿವರಾಗಿ, ಗೃಹಸಚಿವರಾಗಿ ಕಾರ್ಯನಿರ್ವಹಿಸಿದರು. ಪ್ರಭಾವಿ ಲಿಂಗಾಯತ ಮುಖಂಡರಾಗಿರುವ ಬೊಮ್ಮಾಯಿಯವರನ್ನು ಸಿಎಂ ಮಾಡಿದರೆ ಮುಂದಿನ ಚುನಾವಣೆಯಲ್ಲಿ ಸರಳವಾಗಿ ಗೆಲ್ಲಬಹುದು ಆ ಕಾರಣಕ್ಕಾಗಿ ಇವರನ್ನು ಆಯ್ಕೆ ಮಾಡಲಾಗಿದೆ ಅಂಬ ಅಂಶ ನಿಜವೇ ಆಗಿದ್ದರೂ ಅವರ ಆಯ್ಕೆಗೆ ವಾಸ್ತವಿಕ ಕಾರಣ ಬೇರೆಯೇ ಇದೆ. ಏನೂ ಆ ಕಾರಣ ಎನ್ನುವದನ್ನು ನೋಡೋಣ.

ಬಸವರಾಜ ಬೊಮ್ಮಾಯಿಯವರು ಮೂಲ ಬಿಜೆಪಿಗರಲ್ಲ 2008 ರಲ್ಲಿ ಅವರು ಆರ್.ಎಸ್.ಎಸ್ ಜೊತೆ ಅಷ್ಟಾಗಿ ಸಖ್ಯವನ್ನು ಬಯಸಿರಲಿಲ್ಲ. ಆದರೆ 2019 ರಲ್ಲಿ ಯಾವಾಗ ಅವರು ಗೃಹಸಚಿವರಾದರೋ ಥೇಟ್ ಅಮಿತ್ ಶಾನಂತೆ ಸಂಘದ ಅಜೆಂಡಗಳನ್ನು ರಾಜ್ಯದಲ್ಲಿ ಜಾರಿಮಾಡಲು ಯೋಜನೆಗಳನ್ನು ಹಾಕುತ್ತಾ ಹೋದರು. ಬಸವರಾಜ ಬೊಮ್ಮಾಯಿ, ತಮ್ಮ ಹಿಂದಿನ ಉದಾರವಾದಿ ಧೋರಣೆ ಬದಿಗಿಟ್ಟು, ಸಂಘ ಪ್ರಣೀತ 'ಹಿಂದೂ ರಾಷ್ಟ್ರವಾದ'ದತ್ತ ತಮ್ಮ ನಿಲುವು ಬದಲಿಸಿಕೊಂಡರು. ಅದನ್ನು ಸಾಕ್ಷೀಕರಿಸುವಂತೆ ಒಂದೆರೆಡು ಉದಾಹರಣೆಗಳನ್ನು ನೋಡಬಹುದು. ಪೌರತ್ವ ತಿದ್ದುಪಡಿ ಕಾಯ್ದೆ 2019 ಪ್ರತಿಭಟನೆಯ ವೇಳೆ ಮಂಗಳೂರಿನಲ್ಲಿ ನಡೆದ ಗೋಲಿಬಾರ್ ಘಟನೆಯನ್ನು ಬಸವರಾಜ್ ಬೊಮ್ಮಾಯಿ ನಿರ್ವಹಿಸಿದ ರೀತಿ ಆರ್ಎಸ್ಎಸ್ಗೆ ಮೆಚ್ಚುಗೆಯಾಗಿತ್ತು. ಲವ್ ಜಿಹಾದ್ ಲವ್ ಜಿಹಾದ್ ಎಂದು ಸಂಘಪರಿವಾರ ಆಗಾಗ ವಿಷಕಾರುತ್ತಿರುವುದನ್ನು ನಾವೆಲ್ಲ ನೋಡಿದ್ದೇವೆ. ಇಲ್ಲದೆ ಇರುವ ಘಟನೆಗಳನ್ನು ಲವ್ ಜಿಹಾದ್ ಎಂದು ಪರಿಗಣಿಸಿ ಹಿಂದುಮತಗಳನ್ನು ಬ್ಯಾಂಕ್ ಆಗಿ ಪರಿವರ್ತಿಸುವುದು ಬಿಜೆಪಿಯ ಲೆಕ್ಕಾಚಾರ. ಈ ವಿಚಾರದಲ್ಲಿ ಮತಾಂತರ ನಿಷೇಧ ಮತ್ತು ಲವ್ ಜಿಹಾದ್ ವಿರುದ್ಧ ಕಾನೂನು ಜಾರಿ ಮಾಡುಲು ಮುಂದಾಗಿದ್ದ ಘಟನೆ, ಡ್ರಗ್ಸ್ ಪ್ರಕರಣದಲ್ಲಿ ಬೊಮ್ಮಾಯಿ ತೆಗೆದುಕೊಂಡಿರುವ ಕ್ರಮಗಳು, ಇತ್ತೀಚೆಗೆ ಯುಪಿ ಮಾದರಿಯಲ್ಲಿ ಜನಸಂಖ್ಯಾ ನೀತಿಯನ್ನು ಜಾರಿ ಮಾಡುವ ಪ್ರಸ್ತಾಪ ಇಟ್ಟಿದ್ದು 'ಸಂಘ'ದವರನ್ನು ಮೆಚ್ಚಿಸಲು ಕಾರಣವಾಯಿತು. ಬಸವರಾಜ ಬೊಮ್ಮಾಯಿ ಸಿಎಂ ಆಗಲು ಮುಖ್ಯ ಕಾರಣ ಇದೇ ಅಂಶಗಳು ಎಂಬುದನ್ನು ಬಹುತೇಕರು ಮುಚ್ಚಿಡುತ್ತಿದ್ದಾರೆ.

ಇತ್ತ ಯಡಿಯೂರಪ್ಪ ಸೂಚಿಸಿದ ಹೆಸರು ಹಾಗೂ ಕರ್ನಾಟಕದಲ್ಲಿ ಹಿಂದುತ್ವ ಅಜೆಂಡ್ ಜಾರಿ ಮಾಡಲು ಸೂಕ್ತವ್ಯಕ್ತಿಯ ಹುಡುಕಾಟದಲ್ಲಿದ್ದ ಬಿಜೆಪಿ ಮತ್ತು ಸಂಘಪರಿವಾರದವರಿಗೆ ಬಸವರಾಜ ಬೊಮ್ಮಾಯಿ ಈಗ ಬಂಗಾರದ ಮೊಟ್ಟೆ ಇಡುವ ಕೋಳಿಯಾಗಿದ್ದಾರೆ. ಇತ್ತ ಲಿಂಗಾಯತರ ಮತ ಬ್ಯಾಂಕ್ ಭದ್ರ ಆಯ್ತು, ಯಡಿಯೂರಪ್ಪರವರನ್ನು ಸಮಾಧಾನಪಡಿಸಿದ ಹಾಗಾಯಿತು, ಇತ್ತ ಹಿಂದುತ್ವ ಅಜೆಂಡ ಜಾರಿಗೆ ಸುಲಭ ದಾರಿಯಾಯಿತು ಎಂಬ ಸಂಭ್ರಮ ಸಂಘದೊಳಗೆ ನಡೆಯುತ್ತಿದೆ. ಹಿಂದುತ್ವ ಎಂಬ ಬಂದೂಕನ್ನು ಬಸವರಾಜ ಬೊಮ್ಮಾಯಿಯವರ ಹೆಗೆಲಮೇಲೆ ಇಟ್ಟು ಅಲ್ಪಸಂಖ್ಯಾತ ಸಮುದಾಯಗಳ ಕಡೆ ಹೊಡೆಯುವ ಬಿಜೆಪಿ ದಾರಿ ಈಗ ಸುಲಭವಾಗಿದೆ. ಸಚಿವರಾಗಿದ್ದುಕೊಂಡೆ ಹಿಂದುತ್ವದ ಅಜೆಂಡಗಳನ್ನು ಜಾರಿ ಮಾಡಲು ಮುಂದಾಗಿದ್ದ ಸಿಎಂ ಸಾಹೇಬರು ಸಿಎಂ ಆದಮೇಲೆ ಹೇಗಿರುತ್ತದೆ ಎಂಬುದನ್ನು ಒಂದುಬಾರಿ ಉಹಿಸಿಕೊಂಡರೆ ಕಣ್ಮುಂದೆ ಬರುವ ಚಿತ್ರಣ ಬೇರೆಯದ್ದೆ ಆಗಿದೆ.

ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದು ಹಾಲು ಎಂಬ ಖುಷಿ ಬಿಜೆಪಿಯೊಳಗಡೆ ಇದ್ದರೆ, ರಾಜ್ಯದಲ್ಲಿ ದಿನೆ ದಿನೆ ಹತ್ತಾರು ಸಂಕಷ್ಟುಗಳು ಹೆಚ್ಚಾಗುತ್ತಲೆ ಇವೆ. ಇವನ್ನೆಲ್ಲ ಬಸವರಾಜ ಬೊಮ್ಮಾಯಿ ಸಮರ್ಥವಾಗಿ ನಿಭಾಯಿಸುತ್ತಾರಾ? ಎಂಬ ಪ್ರಶ್ನೆ ಈಗ ಉದ್ಭವವಾಗಿದೆ. ಬಸವರಾಜ ಬೊಮ್ಮಾಯಿ ಸಂಘದ ನಿಷ್ಟೆಯಾಗಿ ಕಾರ್ಯನಿರ್ವಹಿಸುತ್ತಾರಾ? ಅಥವಾ ಜನಪರ ಯೋಜನೆಗಳ ಮೂಲಕ ಕರ್ನಾಟಕದ ಜನರ ನಿಷ್ಟೆಯಾಗಿ ಕೆಲಸ ಮಾಡುತ್ತಾರಾ? ಕಾಲವೇ ಉತ್ತರವನ್ನು ಹೇಳಲಿದೆ. ಸರ್ವಜನಾಂಗದ ಶಾಂತಿಯ ತೋಟಕ್ಕೆ ಬಸವರಾಜ ಬೊಮ್ಮಾಯಿಯವರು ಕಲ್ಲೆಸೆಯದೆ ಇದ್ದರೆ ಅವರ ತಂದಗೆ ಗೌರವ ನೀಡಿದಂತಾಗುತ್ತದೆ. ಉತ್ತಮ ಹಿನ್ನೆಲೆ ಅವರು ತಂದೆಯಂತೆ ರಾಜ್ಯದಲ್ಲಿ ಒಂದಿಷ್ಟು ಉತ್ತಮಕೆಲಸವನ್ನು ಮಾಡುತ್ತಾರಾ? ಅಥವಾ ಸಂಘನಿಷ್ಟೆಯಾಗಿ ಆರ್ಎಸ್ಎಸ್ ಅಣತಿಯಂತೆ ನಡೆದುಕೊಳ್ಳುತ್ತಾರಾ ಕಾದು ನೋಡಬೇಕಿದೆ.

ದೇವದಾಸಿ ಮಹಿಳೆಯರ ಸಹಾಯಧನ/ ಪಿಂಚಣಿ ಹೆಚ್ಚಳ ಮಾಡಲು ಮನವಿ

ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿ ನಂತರ ಸಂಪುಟದ ಸಭೆ ನಡೆಸಿ, ಹಲವಾರು ಜನರ ಪಿಂಚಣಿಗಳನ್ನು ಹೆಚ್ಚಿಸಿದ್ದಾರೆ. ಹೆಚ್ಚಿಸಿರುವುದು ಕಡಿಮೆಯಾದರೂ ಹೆಚ್ಚಿಸುವ ಪ್ರಯತ್ನ ಮಾಡಿದ್ದೀರಿ ಆದರೇ, ದೇವದಾಸಿ ಮಹಿಳೆಯರ ಮಾಸಿಕ ಸಹಾಯಧನ ಅಥವಾ ಪಿಂಚಣಿಯನ್ನು ಈ ಹಿಂದಿನ ಸಿದ್ಧರಾಮಯ್ಯನವರ ಸರಕಾರದಿಂದಲೂ 500 ರೂ. ಹೆಚ್ಚಳ ಮಾಡುವುದಾಗಿ ಹೇಳುತ್ತಿದ್ದರೂ, ಈ ಮೂರು ವರ್ಷಗಳಲ್ಲಿ ಹೆಚ್ಚಳ ಮಾಡಲಿಲ್ಲ. ಇದುವರೆಗಿನ ಎಲ್ಲಾ ಸರಕಾರಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿ, ಹಲವು ಹಂತಗಳ ಪ್ರತಿಭಟನೆ ನಡೆಸಿದರೂ ಪ್ರಯೋಜನವಾಗಲಿಲ್ಲ. ಇದೀಗ ತಾವೂ ಕೂಡಾ ನಮ್ಮನ್ನು ಮರೆತಿದ್ದೀರಿ. ದಲಿತ ಮಹಿಳೆಯರು ಮತ್ತು ಅತ್ಯಂತ ಸಂಕಷ್ಟಗೀಡಾಗಿರುವ ನಮ್ಮನ್ನು ಕಡೆಗಣಿಸಿರುವುದು ಬೇಸರದ ವಿಷಯವಾಗಿದೆ ಎಂದು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಪ್ರಧಾನ ಕಾರ್ಯದರ್ಶಿ ಮಾಳಮ್ಮ ಹೇಳಿದಾರೆ.

ಆದ್ದರಿಂದ ಈ ಕೂಡಲೇ ನಮಗೆ ನೀಡಬೇಕಾದ ಮಾಸಿಕ ಸಹಾಯಧನವನ್ನು ಅಥವಾ ಪಿಂಚಣಿಯನ್ನು 3,000 ರೂಗಳಿಗೆ ಹೆಚ್ಚಿಸಲು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದೆ.

ಅತಿಥಿ ಅಂಕಣ



ಪೆಗಾಸಸ್: ಪ್ರಜಾಪ್ರಭುತ್ವವು ತಲುಪಿರುವ ಪಾತಾಳದ ದ್ಯೋತಕ

ಪ್ರೊ. ರಾಜೇಂದ್ರ ಚೆನ್ನಿ

ಭಾರತದ ಇಂದಿನ ರಾಜಕೀಯ ವ್ಯವಸ್ಥೆಯು ಚುನಾವಣಾ ರಾಜಕೀಯದ ಮೂಲಕ ಅಧಿಕಾರಕ್ಕೆ ಬಂದಿರುವ ಬಂಡವಾಳಶಾಹಿ ಫ್ಯಾಸಿಸ್ಟ್ ವ್ಯವಸ್ಥೆ ಎಂದು ಹೇಳಲು ಯಾಕೆ ಹಿಂದೇಟು ಹಾಕುತ್ತಿದ್ದೇವೆ? ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಶ್ನಿಸುವುದೆಂದರೆ ಸರ್ವಾಧಿಕಾರವನ್ನು ಬೆಂಬಲಿಸಿದಂತೆ ಎನ್ನುವ ಭೋಳೆ ನಂಬಿಕೆಯಿಂದ ಹೀಗೆ ಮಾಡುತ್ತಿದ್ದೇವೆಯೆ? ಪ್ರಜಾಪ್ರಭುತ್ವವು ಇಂದಿನ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಬಲಪಂಥೀಯ ಸರ್ವಾಧಿಕಾರಕ್ಕೆ ವೇದಿಕೆಯಾಗಿದೆ ಎನ್ನುವುದನ್ನು ಗಮನಿಸಬೇಡವೆ? ನಮ್ಮ ಚಿಂತನೆ ಹಾಗೂ ಕ್ರಿಯೆಗಳು ಪ್ರಜಾಪ್ರಭುತ್ವವು ದಮನಿತ ವರ್ಗಗಳ ಸಮಾನತೆ, ಸ್ವಾತಂತ್ರ್ಯಗಳ ಆಶಯಗಳನ್ನು ಅನುಷ್ಠಾನಕ್ಕೆ ತರುವ ವ್ಯವಸ್ಥೆಯಾಗಲಿ ಎನ್ನುವುದಾಗಿರಬೇಕಲ್ಲವೆ? ಈ ಮಾತನ್ನು ಹೇಳಲು ಕಾರಣವೆಂದರೆ ಪೆಗಾಸಸ್ ವಿರೋಧವು ಎಷ್ಟು ಮುಖ್ಯವೋ ಅಷ್ಟೇ ಜನವಿರೋಧಿ ಮಸೂದೆಗಳು ಕೂಡ. ಹೊನ್ನಾವರದ ಮೀನುಗಾರರು (ವಿಶೇಷವಾಗಿ ಮಹಿಳೆಯರು) ಬಂದರಿನ ಖಾಸಗೀಕರಣದ ವಿರುದ್ಧ ಹೋರಾಡಿ ಪೋಲೀಸರಿಂದ ಏಟು ತಿಂದರು. ಆದರೆ ಇದೇ ಖಾಸಗೀಕರಣವನ್ನು ಬೆಂಬಲಿಸುವ ಮಸೂದೆಯೊಂದನ್ನು ಪೆಗಾಸಸ್ ಗಲಾಟೆಯ ಸಂದರ್ಭವನ್ನು ಬಳಸಿಕೊಂಡು ಸರಕಾರವು ಸಂಸತ್ತಿನಲ್ಲಿ ಅಂಗೀಕರಿಸಿತು. ಪೆಗಾಸಸ್‌ನ ವಿರುದ್ಧವೂ ಮೀನುಗಾರ್ತಿಯರ ಪರವಾಗಿಯೂ ಏಕಕಾಲಕ್ಕೆ ಹೋರಾಡದಿದ್ದರೆ ಅಂಥ ಹೋರಾಟವನ್ನು ಜನಪರ ಹೋರಾಟವೆಂದು ಕರೆಯಲಾಗದು.

ಪೆಗಾಸಸ್ ಎನ್ನುವ ಪ್ರಭುತ್ವ ಪ್ರೇರಿತ ಗೂಢಚರ್ಯೆಯು ಭಾರತದಲ್ಲಿ ಪ್ರಜಾಪ್ರಭುತ್ವವು ತಲುಪಿರುವ ಪಾತಾಳದ ದ್ಯೋತಕವಾಗಿದೆ. ಇದನ್ನು ಸಂಸತ್ತಿನಲ್ಲಿ ಪ್ರಬಲವಾಗಿ ವಿರೋಧಿಸುತ್ತಿರುವ ವಿರೋಧ ಪಕ್ಷಗಳ ನಡೆಯನ್ನು ಸಮರ್ಥಿಸಬಹುದಾದರೂ ಈ ಪಕ್ಷಗಳೂ ಕೂಡ ತಾವು ಅಧಿಕಾರದಲ್ಲಿದ್ದಾಗ ಪ್ರಜಾಪ್ರಭುತ್ವ ವಿರೋಧಿ ಕಾನೂನುಗಳನ್ನು ವಿರೋಧಿಸಿರಲಿಲ್ಲ ಹಾಗೂ ಪ್ರಜೆಗಳ ಹಕ್ಕುಗಳ ವಿರುದ್ಧ ಅಧಿಕಾರ ಚಲಾಯಿಸಿದವು ಎನ್ನುವುದನ್ನು ಮರೆಯುವಂತಿಲ್ಲ. ಈ ಪಕ್ಷಗಳು ತಮ್ಮ ಆಳ್ವಿಕೆಯಲ್ಲಿ ಕರಾಳವಾದ ಜನವಿರೋಧಿ ಕಾನೂನುಗಳನ್ನೂ, ತಿದ್ದುಪಡಿಗಳನ್ನೂ ಜಾರಿಗೆ ತಂದವು. ಈಗಿರುವ ಫ್ಯಾಸಿಸ್ಟ್ ಸರಕಾರವು ಅವುಗಳ ದುರ್ಬಳಕೆ ಮಾಡುತ್ತಿದೆಯಷ್ಟೆ. ಹೀಗಾಗಿ ವಾಸ್ತವವೇನೆಂದರೆ, ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಚಿಂತಿಸಿದಂತೆ ನಾವು ಪ್ರಜಾಪ್ರಭುತ್ವದ ಹೊರ ಆವರಣವನ್ನು ಅನುಷ್ಠಾನಕ್ಕೆ ತಂದೆವೆ ಹೊರತು, ಪ್ರಜಾಪ್ರಭುತ್ವ ಸಂಸ್ಕೃತಿಯನ್ನು ಗಟ್ಟಿಗೊಳಿಸಲೇ ಇಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಅನೇಕ ಕಾರಣಗಳಿಂದಾಗಿ ಅದ್ವಿತೀಯವಾದ ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟವು, ಕೊನೆಗೂ ಅಧಿಕಾರಕ್ಕೆ ತಂದಿದ್ದು ಜಮೀನ್ದಾರಿ ಮತ್ತು ಬಂಡವಾಳಶಾಹಿ ವರ್ಗಗಳನ್ನೇ ಹೊರತು ರೈತರನ್ನು ಅಥವಾ ದುಡಿಯುವ ವರ್ಗಗಳನ್ನಲ್ಲ. ಕವಿ ಸಿದ್ದಲಿಂಗಯ್ಯನವರ "ಯಾರಿಗೆ ಬಂತು 47ರ ಸ್ವಾತಂತ್ರ್ಯ" ಎನ್ನುವ ಪದ್ಯದಲ್ಲಿ ಈ ಪ್ರಶ್ನೆಗೆ ಸರಿಯಾಗಿಯೇ ಉತ್ತರವನ್ನೂ ಕೊಟ್ಟಿದ್ದಾರೆ.

ಹೀಗಾಗಿ ಆಳುವ ವರ್ಗದ ಈ ಶಕ್ತಿಗಳೇ ಪ್ರಜಾಪ್ರಭುತ್ವವಾದಿ ಚೌಕಟ್ಟಿನಲ್ಲಿ ಇಂದು ಕ್ರೂರವಾದ ಪ್ರಜಾಪ್ರಭುತ್ವ ವಿರೋಧಿ ಅಧಿಕಾರ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದಿವೆ. ಇಂಥ ವ್ಯವಸ್ಥೆಯ ಶತ್ರುಗಳೆಂದರೆ ಹೋರಾಟಗಾರರು, ಪತ್ರಕರ್ತರು, ವಿರೋಧ ಪಕ್ಷಗಳು ಮತ್ತು ಪ್ರಭುತ್ವದ ಟೀಕಾಕಾರರು. ಪೆಗಾಸಸ್ ಮೂಲಕ ಇವರೆಲ್ಲರ ಮೇಲೆ ಈ ಸರಕಾರವು ನಿಗಾ ಇಡುತ್ತ ಬಂದಿದೆ. ಅಲ್ಲದೆ ಸ್ಟ್ಯಾನ್‌ಸಾಮಿ ಅಂಥವರನ್ನು ಸಾವಿಗೀಡಾಗುವಂತೆ ಮಾಡಿದೆ. ಜೈಲುಗಳಲ್ಲಿ ಕೊಳೆಯುತ್ತಿರುವ ಇನ್ನೂ ಅನೇಕರ ಸ್ಥಿತಿಯು ಹೆದರಿಕೆ ಹುಟ್ಟಿಸುವಂತಿದೆ. ಸಂಸತ್ತಿನಲ್ಲಿ ಪೆಗಾಸಸ್ ವಿರುದ್ಧ ಗಲಭೆ ನಡೆಯುತ್ತಿರುವಾಗಲೆ ಕೊರೋನಾ ಪಿಡುಗಿನ ವಾಸ್ತವಗಳ ಬಗ್ಗೆ ಧೈರ್ಯವಾಗಿ ಬರೆದ 'ದೈನಿಕ ಭಾಸ್ಕರ' ಪತ್ರಿಕಾ ಸಮೂಹದ ವಿರದ್ಧ ಸರಕಾರವು ತನ್ನ ಖಾಸಗಿ ಕ್ರಿಮಿನಲ್ ಸಂಸ್ಥೆಯಾದ ಐಟಿ ಇಲಾಖೆಯ ಮೂಲಕ ದಾಳಿಯನ್ನು ಮಾಡಿಸಿದೆ. ಇದರ ಹಿಂದಿನ ಸಂದೇಶವು ಸ್ಪಷ್ಟವಾಗಿದೆ. ನಿರ್ಭಿಢೆಯಾಗಿ ಪ್ರಭುತ್ವವು ಈಗ ತನ್ನ ಫ್ಯಾಸಿಸ್ಟ್ ಸ್ವರೂಪವನ್ನು ತೋರಿಸುತ್ತಿದೆ. ಈಗ ಶುರುವಾಗಿರುವ ದಮನದ ಪರ್ವವು ಇನ್ನು ಪ್ರತಿನಿತ್ಯ ಅಪಾರ ಹಿಂಸೆಯನ್ನೇ ತರುತ್ತದೆಯೆನ್ನುವುದರ ಬಗ್ಗೆ ಸಂಶಯ ಬೇಡ. ಅಲ್ಲದೆ ಸಂಸತ್ತಿನಲ್ಲಿ ನಡೆಯುತ್ತಿರುವ ಗಲಭೆಯನ್ನು ಬಳಸಿಕೊಂಡು ಅನೇಕ ಜನವಿರೋಧಿ ಮಸೂದೆಗಳನ್ನು ಸರಕಾರವು ಪಾಸು ಮಾಡುತ್ತಿದೆ.


ವಾಸ್ತವವಾಗಿ ಈ ದುಸ್ಥಿತಿಯ ನಿಜವಾದ ಲಕ್ಷಣವೆಂದರೆ ಈ ವಿದ್ಯಮಾನಗಳಿಗೆ ಪ್ರಜೆಗಳ ಪ್ರತಿಕ್ರಿಯೆ. ಅನೇಕ ಹೋರಾಟಗಾರರು ಅಂದಾಜು ಮೂರುವರ್ಷಗಳಿಂದ ವಿಚಾರಣೆಯೂ ಇಲ್ಲದೆ ಜೈಲಿನಲ್ಲಿದ್ದಾರೆ. ಇವರಲ್ಲಿ ವಯಸ್ಸಾದವರೂ ಆರೋಗ್ಯ ಸಮಸ್ಯೆಯುಳ್ಳವರೂ ಇದ್ದಾರೆ. ಆದರೆ ಪ್ರಜೆಗಳಿಂದ ಪ್ರತಿಭಟನೆ ಇಲ್ಲ. ವಿಶ್ವದ ಅತ್ಯುತ್ತಮ ಅಂಬೇಡ್ಕರ್ ವಿದ್ವಾಂಸರಾದ ಆನಂದ್ ತೇಲ್‌ತುಂಬ್ಡೆಯವರ ಬಂಧನದ ನಂತರ ಭಾರತದ ದಲಿತ ಸಮುದಾಯಗಳು ಉಗ್ರವಾಗಿ ಪ್ರತಿಭಟಿಸುತ್ತಿವೆಯೆಂದು ನಿರೀಕ್ಷಿಸಿದವರಿಗೆ ನಿರಾಸೆ ಮತ್ತು ಆಶ್ಚರ್ಯಗಳೇ ಕಾದಿದ್ದವು. ಸ್ಟ್ಯಾನ್‌ಸಾಮಿಯವರ ನಿಧನದ ಬಗ್ಗೆ ಶೋಕಾಚರಣೆ ಮಾಡಲು ಕ್ರಿಶ್ಚಿಯನ್ ಸಮುದಾಯಗಳು ಅನೇಕ ಕಡೆಗೆ ಹಿಂದೇಟು ಹಾಕಿದವು. ತಮ್ಮ ಇತ್ತೀಚಿನ ನಡೆಗಳಿಂದಾಗಿ ಕರ್ನಾಟಕದ ಲಿಂಗಾಯಿತ–ವೀರಶೈವ ಮಠಗಳು ವಚನಕಾರರ ಸಮಾನತೆಯ ಹೋರಾಟಕ್ಕೆ ಸಾಮೂಹಿಕ ಸಮಾಧಿಯನ್ನು ಕಟ್ಟಿದವು. ಅನೇಕ 'ಆಧುನಿಕ ಬಸವಣ್ಣ' ವೇಷದ ಸ್ವಾಮಿಗಳು ತಾವು ಹಿಂದುತ್ವವಾದಿ ಸರಕಾರದ ಮೂಕ ಬಸವರೆಂದು ಸಾರ್ವಜನಿಕವಾಗಿ ತೋರಿಸಿಕೊಂಡರು. ಸರಳವಾಗಿ ಹೇಳುವುದಾದರೆ ಇಂದಿನ ಸ್ಥಿತಿಯಲ್ಲಿ ಪ್ರಜೆಗಳು ಈಗಾಗಲೇ ಕೋಮಾದಲ್ಲಿದ್ದಾರೆ. ಫ್ಯಾಸಿಸ್ಟ್ ಶಕ್ತಿಗಳು ಎಂದಿಲ್ಲದ ಆತ್ಮವಿಶ್ವಾಸದಲ್ಲಿವೆ. ಮುಂದೇನು?

ಇಂದಿನ ಫ್ಯಾಸಿಸ್ಟ್ ಪ್ರಭುತ್ವವು ಸೈನಿಕರ ಬಂಡಾಯದಿಂದ ಅಥವಾ ನೇರವಾದ ಹಿಂಸೆಯಿಂದ ಅಧಿಕಾರಕ್ಕೆ ಬಂದಿಲ್ಲ. ಪ್ರಜಾಪ್ರಭುತ್ವವಾದಿ ಎಂದು ನಾವು ಭ್ರಮಿಸುವ ಚುನಾವಣಾ ರಾಜಕೀಯ ವ್ಯವಸ್ಥೆಯ ಮೂಲಕವೇ ಅಧಿಕಾರಕ್ಕೆ ಬಂದಿದೆ. ಈ ಚುನಾವಣೆಗಳು ಬಹುಪಾಲು ಜಾತಿ, ಪ್ರಭಾವ, ದುಡ್ಡು ಮುಂತಾದ ಶಕ್ತಿಗಳಿಂದ ನಡೆದಿವೆಯೆನ್ನುವುದು ಗೊತ್ತಿದ್ದರೂ ನಾವು ಅವುಗಳನ್ನು ಪವಿತ್ರವೆಂದು ಹಾಡಿಹೊಗಳುತ್ತ ಬಂದಿದ್ದೇವೆ. ಬೂರ್ಜ್ವಾ ಪ್ರಜಾಪ್ರಭುತ್ವದ ವಿಕೃತಿಗಳನ್ನು ಸಮರ್ಥವಾಗಿ ನಾವು ಪ್ರಶ್ನಿಸಲೂ ಇಲ್ಲ. ಇದರ ಪರಿಣಾಮವೆಂದರೆ ಚುನಾವಣೆ ಮೂಲಕ ಗೆದ್ದವರು ಪ್ರಜೆಗಳ ನಿಜವಾದ ಪ್ರತಿನಿಧಿಗಳು ಎಂದೂ ಚುನಾವಣಾ ವ್ಯವಸ್ಥೆಯನ್ನು ಪವಿತ್ರೀಕರಣಗೊಳಿಸಿಬಿಟ್ಟಿದ್ದೇವೆ. ಆಶ್ಚರ್ಯವೆಂದರೆ 19ನೇ ಶತಮಾನದ ಇಂಗ್ಲೆಂಡ್‌ನ ಮಧ್ಯಮವರ್ಗದ ಲಿಬರಲ್ ಚಿಂತನೆಯ ಬರಹಗಾರರು ಕೂಡ ಸಂಸದೀಯ ಪ್ರಜಾಪ್ರಭುತ್ವವು ವರ್ಗ ಹಿತಾಸಕ್ತಿಗಳ ಅಧಿಕಾರವಾಗಿರುತ್ತದೆಯೆಂದು ಉಗ್ರವಾಗಿ ಟೀಕಿಸಿದ್ದರು. ಸ್ವತಃ ಗಾಂಧಿ 'ಹಿಂದ್ ಸ್ವರಾಜ್' ಕೃತಿಯಲ್ಲಿ ಇಂಗ್ಲೆಂಡ್‌ನ ಸಂಸತ್ತನ್ನು "ಬಂಜೆ ಮತ್ತು ವೇಶ್ಯೆ" ಎಂದು ಕರೆದಿದ್ದರು. ಬಂಜೆ ಏಕೆಂದರೆ ಅದರಿಂದ ಏನೂ ಹುಟ್ಟದು, ವೇಶ್ಯೆ ಏಕೆಂದರೆ ಅದನ್ನು ಆಳುವ ವರ್ಗವು ಇಟ್ಟುಕೊಳ್ಳುತ್ತದೆಯೆಂದು. ಗಾಂಧಿಯವರ ವಿಮರ್ಶೆ ಸರಿಯಾದ್ದರೂ ಅವರು ಸ್ತ್ರೀವಿರೋಧಿ ರೂಪಕಗಳನ್ನು ಬಳಸಿದ್ದನ್ನು ನಾವು ತೀವ್ರವಾಗಿ ಖಂಡಿಸಲೇಬೇಕು.

ಪ್ರಶ್ನೆಯೆಂದರೆ ಭಾರತದ ಇಂದಿನ ರಾಜಕೀಯ ವ್ಯವಸ್ಥೆಯು ಚುನಾವಣಾ ರಾಜಕೀಯದ ಮೂಲಕ ಅಧಿಕಾರಕ್ಕೆ ಬಂದಿರುವ ಬಂಡವಾಳಶಾಹಿ ಫ್ಯಾಸಿಸ್ಟ್ ವ್ಯವಸ್ಥೆ ಎಂದು ಹೇಳಲು ಯಾಕೆ ಹಿಂದೇಟು ಹಾಕುತ್ತಿದ್ದೇವೆ? ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಶ್ನಿಸುವುದೆಂದರೆ ಸರ್ವಾಧಿಕಾರವನ್ನು ಬೆಂಬಲಿಸಿದಂತೆ ಎನ್ನುವ ಭೋಳೆ ನಂಬಿಕೆಯಿಂದ ಹೀಗೆ ಮಾಡುತ್ತಿದ್ದೇವೆಯೆ? ಪ್ರಜಾಪ್ರಭುತ್ವವು ಇಂದಿನ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಬಲಪಂಥೀಯ ಸರ್ವಾಧಿಕಾರಕ್ಕೆ ವೇದಿಕೆಯಾಗಿದೆ ಎನ್ನುವುದನ್ನು ಗಮನಿಸಬೇಡವೆ? ನಮ್ಮ ಚಿಂತನೆ ಹಾಗೂ ಕ್ರಿಯೆಗಳು ಪ್ರಜಾಪ್ರಭುತ್ವವು ದಮನಿತ ವರ್ಗಗಳ ಸಮಾನತೆ, ಸ್ವಾತಂತ್ರ್ಯಗಳ ಆಶಯಗಳನ್ನು ಅನುಷ್ಠಾನಕ್ಕೆ ತರುವ ವ್ಯವಸ್ಥೆಯಾಗಲಿ ಎನ್ನುವುದಾಗಿರಬೇಕಲ್ಲವೆ? ಈ ಮಾತನ್ನು ಹೇಳಲು ಕಾರಣವೆಂದರೆ ಪೆಗಾಸಸ್ ವಿರೋಧವು ಎಷ್ಟು ಮುಖ್ಯವೋ ಅಷ್ಟೇ ಜನವಿರೋಧಿ ಮಸೂದೆಗಳು ಕೂಡ. ಹೊನ್ನಾವರದ ಮೀನುಗಾರರು (ವಿಶೇಷವಾಗಿ ಮಹಿಳೆಯರು) ಬಂದರಿನ ಖಾಸಗೀಕರಣದ ವಿರುದ್ಧ ಹೋರಾಡಿ ಪೋಲೀಸರಿಂದ ಏಟು ತಿಂದರು. ಆದರೆ ಇದೇ ಖಾಸಗೀಕರಣವನ್ನು ಬೆಂಬಲಿಸುವ ಮಸೂದೆಯೊಂದನ್ನು ಪೆಗಾಸಸ್ ಗಲಾಟೆಯ ಸಂದರ್ಭವನ್ನು ಬಳಸಿಕೊಂಡು ಸರಕಾರವು ಸಂಸತ್ತಿನಲ್ಲಿ ಅಂಗೀಕರಿಸಿತು. ಪೆಗಾಸಸ್‌ನ ವಿರುದ್ಧವೂ ಮೀನುಗಾರ್ತಿಯರ ಪರವಾಗಿಯೂ ಏಕಕಾಲಕ್ಕೆ ಹೋರಾಡದಿದ್ದರೆ ಅಂಥ ಹೋರಾಟವನ್ನು ಜನಪರ ಹೋರಾಟವೆಂದು ಕರೆಯಲಾಗದು.

ಈ ಸ್ಥಿತಿಯಲ್ಲಿ ಪರಿಹಾರವಾಗಿ ಕಾಣುತ್ತಿರುವುದೆಂದರೆ ವರ್ಗ ಹೋರಾಟವನ್ನು ಜಾಗತಿಕ ಬಂಡವಾಳಶಾಹಿಯ ಇಂದಿನ ಸಂದರ್ಭಕ್ಕೆ ತಕ್ಕಹಾಗೆ ಮರುವ್ಯಾಖ್ಯಾನ ಮಾಡಿಕೊಂಡು ಮರುರೂಪಿಸುವುದು. ಏಕೆಂದರೆ ಬೂರ್ಜ್ವಾ ಪ್ರಜಾಪ್ರಭುತ್ವವು ಬಂಡವಾಳಶಾಹಿಯ ಒಂದು ಸ್ಥಿತಿಯಾಗಿರುವ ಫ್ಯಾಸಿಸ್ಟ್ ವ್ಯವಸ್ಥೆಯ ಹಂತವನ್ನು ಈಗ ತಲುಪಿದೆ. ಈ ಎಚ್ಚರವು ಇಲ್ಲದಿದ್ದರೆ ಪ್ರಜಾಪ್ರಭುತ್ವವಾದಿ ಹೋರಾಟಗಳು ನೆರಳಿನ ಜೊತೆಗಿನ ಹೋರಾಟಗಳಾಗಿ ಬಿಡುತ್ತವೆ.

ಕರ್ನಾಟಕದಲ್ಲಿ ನಡೆದ ಮುಖ್ಯಮಂತ್ರಿ ಬದಲಾವಣೆಯ ಹಾಸ್ಯ ಪ್ರಕರಣವನ್ನು ಆನಂದಿಸುತ್ತಿರುವ ಪ್ರಜೆಗಳಿಗೆ ಇದನ್ನು ವಿವರಿಸುವುದು ಕಷ್ಟಸಾಧ್ಯವಾಗಿದೆ. ಒಂದು ಇಂಗ್ಲಿಷ್ ವಾಹಿನಿಯಲ್ಲಿ "ಕರ್ನಾಟಕದಲ್ಲಿ ನಾಟಕದ" ಮುಂದಿನ ದೃಶ್ಯವೇನು ಎಂದು ಪದೇ ಪದೇ ಕೇಳಲಾಯಿತು. ಪ್ರಗತಿಪರ, ಸುಸಂಸ್ಕೃತ ರಾಜ್ಯವೆಂದು ಕರೆಯಲಾಗುತ್ತಿದ್ದ ಆಧುನಿಕ ರಾಜ್ಯವೊಂದು ಹಗರಣಗಳಿಂದ ಹಗರಣಗಳತ್ತ ಸಾಗುತ್ತ ಇಡೀ ದೇಶದಲ್ಲಿ ಹಾಸ್ಯಾಸ್ಪದವಾಗುತ್ತಿದೆ. ಎಂಥಹ ಭಾಗ್ಯವಿದು, ಕನ್ನಡ ಮಕ್ಕಳದು!



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಹುಸಿ ಕಥನಗಳ ಮೋದಿ ಸರ್ಕಾರ

ಇದೊಂದು ಸತ್ಯೋತ್ತರ ಸರ್ಕಾರ



ಅಂದರೆ ವಸ್ತುನಿಷ್ಠ ಸಂಗತಿಗಳಿಗಿಂತ ಭಾವನಾತ್ಮಕ ಮತ್ತು ವೈಯಕ್ತಿಕ ನಂಬಿಕೆಗಳೇ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಹೆಚ್ಚು ಪ್ರಭಾವ ಬೀರುತ್ತವೆ ಎಂದು ಬಲವಾಗಿ ನಂಬಿರುವ ಈ ಸರಕಾರ ವಾಸ್ತವತೆ ಮತ್ತು ಸತ್ಯಾಂಶಗಳನ್ನು ಉಪೇಕ್ಷಿಸಿ ತನ್ನದೇ ಆದ ಕಥನಗಳನ್ನು ಕಟ್ಟುತ್ತಿದೆ. ಲಸಿಕೆಗಳು, ಅಥವ ಆಮ್ಲಜನಕ ಕೊರತೆಯಿಂದ ಸಾವುಗಳು ಅಥವಾ ಕೋವಿಡ್ ಸಾವುಗಳ ನಿಜವಾದ ಸಂಖ್ಯೆ – ಈ ಯಾವುದೇ ವಿಚಾರದಲ್ಲಿ ಮೋದಿ ಸರ್ಕಾರ ಮಾನವ ಜೀವಕ್ಕೆ ಕನಿಷ್ಠ ಗೌರವವನ್ನೂ ಕೊಡದಿರುವ ಅಸಹ್ಯ ಧೋರಣೆಯನ್ನು ತೋರಿಸುತ್ತದೆ. ಸಮಸ್ಯೆಯಿದೆ ಎಂದು ನಾವು ಗುರುತಿಸದಿದ್ದರೆ ಸಮಸ್ಯೆಯೇ ಇಲ್ಲವೆನ್ನುವುದು ಯಾವುದೇ ಸರ್ವಾಧಿಕಾರಶಾಹೀ ಸರ್ಕಾರದ ವಿಕೃತ ವಾದವಾಗಿರುತ್ತದೆ.



*** ಪ್ರಕಾಶ್ ಕಾರಟ್**

ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ವಾರದ ಕಲಾಪಗಳೇ ನರೇಂದ್ರ ಮೋದಿ ಸರ್ಕಾರದ ಗುಣವನ್ನು ಬಯಲು ಮಾಡಿದೆ. ಕೆಲವೇ ದಿನಗಳಲ್ಲಿ ಸರ್ಕಾರ ಸಂಸತ್ತಿನಲ್ಲಿ ಎರಡು ಹಸಿ ಸುಳ್ಳುಗಳನ್ನು ದಾಖಲಿಸಿತು. ಇಸ್ರೇಲ್‌ನ ಪೆಗಾಸಸ್ ಗೂಢಚರ್ಯೆ ತಂತ್ರಾಂಶವನ್ನು ಭಾರತದಲ್ಲಿ ಬೇಹುಗಾರಿಕೆಗೆ ಬಳಸಿಲ್ಲ. ಹಾಗೂ 'ಯಾವುದೇ ಅಧಿಕೃತ ಗೂಢಚರ್ಯೆ ನಡೆದೇ ಇಲ್ಲ' ಎಂದು ಮಾಹಿತಿ ಮತ್ತು ತಂತ್ರಜ್ಞಾನ ಸಚಿವರು ಘಂಟಾಘೋಷವಾಗಿ ಹೇಳಿದ್ದು ಮೊದಲ ಪ್ರಕರಣ. ಆಮ್ಲಜನಕ ಕೊರತೆಯಿಂದ ರೋಗಿಗಳು ಮೃತಪಟ್ಟಿರುವ ಬಗ್ಗೆ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಿಂದ ವರದಿ ಬಂದಿಲ್ಲ ಎಂದು ಆರೋಗ್ಯ ಖಾತೆ ರಾಜ್ಯ ಸಚಿವರು ರಾಜ್ಯ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುವಾಗ ಹೇಳಿದ್ದು ಎರಡನೆಯದು. ಈ ಎರಡು ಅಪ್ಪಟ ಸುಳ್ಳುಗಳು ಹಾಗೂ ಅವುಗಳ ಅಸಲಿ ಸ್ವರೂಪವು ಮೋದಿ ಸರ್ಕಾರದ ಸರ್ವಾಧಿಕಾರಶಾಹೀ ಧೋರಣೆ ಮತ್ತು ಸಂಸತ್ತು ಹಾಗೂ ಜನತೆಯ ಬಗ್ಗೆ ಹೊಂದಿರುವ ಅದರ ತಿರಸ್ಕಾರದ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ.

ವಾಸ್ತವತೆಯನ್ನು ನಿರಾಕರಿಸಿ ಅದರ ಬಗ್ಗೆ ಸುಳ್ಳು ಹೇಳುವುದು ಈ ಸರ್ಕಾರದ ಎಂದಿನ ನಡೆಯಾಗಿದೆ. ದೇಶ ಕೋವಿಡ್–ತಡೆ ಲಸಿಕೆಯ ಕೊರತೆಯನ್ನು ಎದುರಿಸುತ್ತಿರುವಾಗ, ಲಸಿಕೆ ಕೊರತೆ ಇಲ್ಲವೇ ಇಲ್ಲ ಎಂದು ಸರ್ಕಾರ ಹೇಳುತ್ತಿದೆ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಆರೋಪ ಮಾಡುತ್ತಿದೆ. ಕೇಂದ್ರ ಸರ್ಕಾರ ರಾಜಕೀಯ ಮಾಡುತ್ತಿದೆ ಅಥವ ಜನರಿಗೆ ಲಸಿಕೆ ಹಾಕುವಲ್ಲಿ ಶುದ್ಧ ಅದಕ್ಷತೆ ತೋರುತ್ತಿದೆ ಎಂದು ರಾಜ್ಯ ಸರ್ಕಾರಗಳು ದೂರುತ್ತಿವೆ.

ಕೊವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ಲಸಿಕೆ ಉತ್ಪಾದಿಸುವ ಕಂಪೆನಿಗಳು ಉತ್ಪಾದಿಸಿದ ಲಸಿಕೆಗಳ ಡೋಸ್ ಹಾಗೂ ಜನರಿಗೆ ಹಾಕಲು ಲಭ್ಯವಿರುವ ಲಸಿಕೆ ಬಗ್ಗೆ ಸರ್ಕಾರ ಸಂಸತ್ತಿನಲ್ಲಿ ಮೂರು ಭಿನ್ನವಾದ ಲೆಕ್ಕ ನೀಡಿದೆ. ವ್ಯಾಕ್ಸಿನ್ ತಯಾರಿಕೆ ವೇಗ ಹೆಚ್ಚಿಲ್ಲ ಹಾಗೂ ಜನರಿಗೆ ನೀಡಲು ಲಭ್ಯವಿರುವ ಲಸಿಕೆಯ ಪ್ರಮಾಣವನ್ನು ಕೇಂದ್ರ ಸರ್ಕಾರ ದೊಡ್ಡದು ಮಾಡಿ ತೋರಿಸುತ್ತಿದೆ ಎನ್ನುವುದು ವಾಸ್ತವ ಸಂಗತಿ.

ಕೊವಿಡ್ ಸೋಂಕಿನಿಂದ ಮೃತಪಟ್ಟವರ ಸಂಖ್ಯೆಯನ್ನು ವಾಸ್ತವಕ್ಕಿಂತ ಕಡಿಮೆ ಪ್ರಮಾಣದಲ್ಲಿ ತೋರಿಸಲಾಗುತ್ತಿದೆ ಎನ್ನುವುದನ್ನೂ ಸರ್ಕಾರ ನಿರಾಕರಿಸುತ್ತಿದೆ. ಭಾರತದಲ್ಲಿ ಸಾಂಕ್ರಾಮಿಕಕ್ಕೆ ಬಲಿಯಾದವರ ಸಂಖ್ಯೆ ಸರ್ಕಾರಿ ಮಾಹಿತಿಗಿಂತ ಕನಿಷ್ಠ ಹತ್ತು ಪಟ್ಟು ಹೆಚ್ಚಿದೆ ಎನ್ನುವುದನ್ನು ಅಧ್ಯಯನಗಳು ಸ್ಪಷ್ಟಪಡಿಸಿವೆ.

ನಂಬಲರ್ಹ ದತ್ತಾಂಶಗಳ ಕೊರತೆಯಿಂದ ಅಥವಾ ತಪ್ಪು ಮಾಹಿತಿಯಿಂದ ಸರ್ಕಾರ ಹೀಗೆ ಹೇಳುತ್ತಿಲ್ಲ ಎನ್ನುವುದಕ್ಕೆ ಕೋವಿಡ್ ಸಾಂಕ್ರಾಮಿಕತೆಯನ್ನು ಉತ್ತರ ಪ್ರದೇಶದ ಆದಿತ್ಯನಾಥ್ ಸರ್ಕಾರ ನಿರ್ವಹಿಸಿದ ಬಗೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದೇ ಸಾಕ್ಷಿಯಾಗಿದೆ. ಮುಂಗಾರು ಅಧಿವೇಶನ ಆರಂಭವಾಗುವುದಕ್ಕೂ ಕೆಲ ದಿನಗಳ ಮುಂಚೆ, ಜುಲೈ 15ರಂದು ವಾರಾಣಸಿಯಲ್ಲಿ ಮಾತನಾಡಿದ್ದ ಮೋದಿ, ಉತ್ತರ ಪ್ರದೇಶ ಸರ್ಕಾರದ ಕ್ರಮ 'ಸಾಟಿಯಿಲ್ಲದ್ದು' ಎಂದಿದ್ದರು.

ಉತ್ತರ ಪ್ರದೇಶದಲ್ಲಿ ಸಾಂಕ್ರಾಮಿಕತೆಯ ಎರಡನೇ ಅಲೆಯನ್ನು ಎದುರಿಸುವಲ್ಲಿ ಅಲ್ಲಿನ ಸರ್ಕಾರ ತೀವ್ರವಾಗಿ ವಿಫಲವಾಗಿದೆ. ಗಂಗಾ ನದಿಯಲ್ಲಿ ಶವಗಳು ತೇಲಿದ್ದು, ನದಿ ದಂಡೆಗಳಲ್ಲಿ ನೂರಾರು ಶವಗಳನ್ನು ಹೂತಿದ್ದು, ಒಂದಾದ ಮೇಲೆ ಒಂದು ಹಳ್ಳಿಯಲ್ಲಿ ಮಾರಕ ವೈರಸ್ ಕಾಡುತ್ತಿದ್ದರೂ ಚಿಕಿತ್ಸೆಯೇ ದೊರಕದ ಭೀಕರ ವರದಿಗಳು ಪ್ರಕಟವಾಗಿದ್ದವು. ಇವೆಲ್ಲವನ್ನು ಸಾಂಕ್ರಾಮಿಕತೆಗೆ ಆದಿತ್ಯನಾಥ್ ಸರ್ಕಾರದ 'ಅಭೂತಪೂರ್ವ' ಸ್ಪಂದನೆ ಎಂದು ಮೋದಿಯವರು ಹೊಗಳಿದ್ದಾರೆ.

ಮೋದಿಯ ಈ ಧೋರಣೆಯು ಇದೊಂದು ಸತ್ಯೋತ್ತರ ಸರ್ಕಾರ ಎಂಬುದನ್ನು ತೋರಿಸಿ ಕೊಟ್ಟಿದೆ. ವಾಸ್ತವತೆ ಮತ್ತು ಸತ್ಯಾಂಶಗಳನ್ನು ಉಪೇಕ್ಷಿಸಿ ತನ್ನದೇ ಆದ ಕಥನಗಳನ್ನು ಕಟ್ಟುತ್ತಿರುವ ಸರಕಾರ ಇದು. ಸತ್ಯೋತ್ತರ ಎಂಬುದು ವಸ್ತುನಿಷ್ಠ ಸಂಗತಿಗಳಿಗಿಂತ ಭಾವನಾತ್ಮಕ ಮತ್ತು ವೈಯಕ್ತಿಕ ನಂಬಿಕೆಗಳೇ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಹೆಚ್ಚು ಪ್ರಭಾವ ಬೀರುತ್ತವೆ ಎನ್ನುವುದನ್ನು ಸೂಚಿಸುವ ಪದ.

ಲಸಿಕೆಗಳು, ಅಥವ ಆಮ್ಲಜನಕ ಕೊರತೆಯಿಂದ ಸಾವುಗಳು ಅಥವಾ ಕೋವಿಡ್ ಸಾವುಗಳ ನಿಜವಾದ ಸಂಖ್ಯೆ –ಈ ಯಾವುದೇ ವಿಚಾರದಲ್ಲಿ ಮೋದಿ ಸರ್ಕಾರ ಮಾನವ ಜೀವಕ್ಕೆ ಕನಿಷ್ಠ ಗೌರವವನ್ನೂ ಕೊಡದಿರುವ ಅಸಹ್ಯ ಧೋರಣೆಯನ್ನು ತೋರಿಸುತ್ತದೆ. ಯಾವುದೇ ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರದಲ್ಲಿ ಹಿಂದೆಂದೂ ಕಂಡುಬಂದಿರದ ಮನೋಭಾವ ಇದಾಗಿದೆ.

ಸಂಸತ್ತಿನ ಅಧಿವೇಶನದ ಮೊದಲ ವಾರ ರಾಜಧಾನಿ ದೆಹಲಿಯ ಜಂತರ್ ಮಂತರ್‌ನಲ್ಲಿ 'ಕಿಸಾನ್ ಸಂಸತ್' ಆರಂಭವಾಯಿತು. ಸಂಸತ್ತು ಕಳೆದ ವರ್ಷ ಅಂಗೀಕರಿಸಿದ ಮೂರು ಹೊಸ ಕೃಷಿ ಕಾನೂನುಗಳಿಗೆ ರೈತರ ವಿರೋಧವನ್ನು ದಾಖಲಿಸಲು ಪ್ರತಿ ದಿನ ಈ ಕಿಸಾನ್ ಸಂಸತ್ ನಡೆಯುತ್ತಿದೆ. ರಾಷ್ಟ್ರ ರಾಜಧಾನಿ ದೆಹಲಿಯ ಗಡಿ ಭಾಗಗಳಲ್ಲಿ ಎಂಟು ತಿಂಗಳ ಸತತ ಪ್ರತಿಭಟನೆಗಳ ನಂತರ, ರೈತರದ್ದೇ ಆದ ಸಂಸತ್ತನ್ನು ನಡೆಸಲು ರೈತ ಸಂಘಟನೆಗಳು ನಿರ್ಧರಿಸಿವೆ. ಪೊಲೀಸರ ಬಹಳಷ್ಟು ನಿರ್ಬಂಧಗಳ ನಡುವೆಯೇ ಅದನ್ನು ನಡೆಸಲಾಗುತ್ತಿದೆ.

ಇಲ್ಲಿ ಕೂಡ ಬಿಜೆಪಿ ಸರಕಾರದ ಸ್ಪಂದನೆ ಉಪೇಕ್ಷೆಯಿಂದಲೇ ಕೂಡಿದೆ, ಸಮಸ್ಯೆಯೇ ಇಲ್ಲ, ಕೃಷಿ ಕ್ಷೇತ್ರ ಸುಗಮವಾಗಿ ಸಾಗುತ್ತಿದೆ ಹಾಗೂ ರೈತರು ಸುಖಿಗಳಾಗಿದ್ದಾರೆ ಎಂದೇ ಅದು ನಟಿಸುತ್ತಿದೆ. ಸಮಸ್ಯೆಯಿದೆ ಎಂದು ನಾವು ಗುರುತಿಸದಿದ್ದರೆ ಸಮಸ್ಯೆಯೇ ಇಲ್ಲವೆನ್ನುವುದು ಯಾವುದೇ ಸರ್ವಾಧಿಕಾರಶಾಹೀ ಸರ್ಕಾರದ ವಿಕೃತ ತರ್ಕವಾಗಿರುತ್ತದೆ.

ಸಾರ್ವಜನಿಕ ನೀತಿ ಹಾಗೂ ಕಾರ್ಯಾಂಗದ ನಿರ್ಧಾರಗಳಿಗೆ ಸಂಬಂಧಿಸಿ ಸಂಸತ್ತಿನಲ್ಲಿ ಯಾವುದೇ ರೀತಿಯಲ್ಲಿ ಉತ್ತರದಾಯಿಯಾಗಲು ಸರ್ಕಾರ ನಿರಾಕರಿಸುತ್ತಿರುವುದರಿಂದ ಒಂದು ವಿಚಿತ್ರ ಸನ್ನಿವೇಶ ಸೃಷ್ಟಿಯಾಗಿದೆ. ಫ್ರಾನ್ಸ್‌ನ ಒಂದು ನ್ಯಾಯಾಂಗ ಸಂಸ್ಥೆಯ ತನಿಖೆಯಿಂದಷ್ಟೇ ರಫೇಲ್ ವ್ಯವಹಾರದ ಸತ್ಯವನ್ನು ಭಾರತದ ಜನರು ತಿಳಿಯಬೇಕಾಗಿ ಬಂದಿದೆ. ಏಕೆಂದರೆ ರಫೇಲ್ ವ್ಯವಹಾರದಲ್ಲಿ ಯಾವುದೇ ತಪ್ಪು ನಡೆದಿಲ್ಲ. ಹಾಗಾಗಿ ತನಿಖೆಯ ಅಗತ್ಯವೇ ಇಲ್ಲ ಎಂದು ಮೋದಿ ಸರ್ಕಾರ ಮೊಂಡು ವಾದ ಮಾಡುತ್ತಲೇ ಇದೆ.

ಪೆಗಾಸಸ್ ಹಗರಣದ ಬಗ್ಗೆ ಫ್ರೆಂಚ್ ಸರ್ಕಾರ ತನಿಖೆ ನಡೆಸುತ್ತಿದೆ. ಇಸ್ರೇಲಿ ಕಂಪೆನಿ ಎನ್‌ಎಸ್‌ಒ ಉತ್ಪನ್ನವಾದ ಗೂಢಚರ್ಯೆ ತಂತ್ರಾಂಶದ ವ್ಯಾಪಾರ ಹಾಗೂ ಬಳಕೆಗೆ ಸಂಬಂಧಿಸಿದ ನಿಯಮಗಳ ಪರಾಮರ್ಶೆ ನಡೆಸುವುದಾಗಿ ಸ್ವತಃ ಇಸ್ರೇಲ್ ಸರ್ಕಾರವೇ ಪ್ರಕಟಿಸಿದೆ. ಆದರೆ ಭಾರತದಲ್ಲಿ ಮಾತ್ರ ಅಂಥ ಯಾವುದೇ ತನಿಖೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಇಸ್ರೇಲ್‌ನಿಂದ ಗೂಢಚರ್ಯೆ ತಂತ್ರಾಂಶದ ಖರೀದಿಗೆ ಯಾವುದೇ ಸರ್ಕಾರಿ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆಯೇ ಎನ್ನುವುದನ್ನು ಒಪ್ಪಿಕೊಳ್ಳಲು ಅದು ನಿರಾಕರಿಸುತ್ತಿದೆ.

ಮೋದಿ ಸರ್ಕಾರಕ್ಕೆ ಸತ್ಯವೆನ್ನುವುದು ಅಗತ್ಯಕ್ಕೆ ತಕ್ಕಂತೆ ತಿರುಚಿಸಿ ಕೊಳ್ಳಬಹುದಾದ ಒಂದು ಸರಕಾಗಿದೆ. ಹಿಂದುತ್ವ ಮತ್ತು ನವ–ಉದಾರವಾದಿ ಅಜೆಂಡಾಗಳಷ್ಟೇ ಅದರ ಅಚಲ ಅಂಶಗಳು. ಜನಸಂಖ್ಯೆ ನಿಯಂತ್ರಣ, ಎಲ್ಲ ಬಗೆಯ ಜಾನುವಾರು ಹತ್ಯಾ ನಿಷೇಧ, ಲವ್ ಜಿಹಾದ್ ಕಾಯ್ದೆಗಳು– ಇವೆಲ್ಲವನ್ನೂ ಬಿಜೆಪಿ ರಾಜ್ಯ ಸರ್ಕಾರಗಳು ಸತತವಾಗಿ ಒಂದಿಷ್ಟೂ ತಡೆಯಿಲ್ಲದಂತೆ ಅನುಸರಿಸುತ್ತಿವೆ.

ಕೇಂದ್ರ ಸರ್ಕಾರದ ಬಗ್ಗೆ ಹೇಳುವುದಾದರೆ, ದೊಡ್ಡ ಕಾರ್ಪೊರೇಟ್‌ಗಳು ಮತ್ತು ಸೂಪರ್–ಶ್ರೀಮಂತ ಬಿಲಿಯಾಧಿಪತಿಗಳನ್ನು ಕೊಬ್ಬಿಸುವುದೇ ಅದರ ಗುರಿಯಾಗಿದೆ. ಅದಕ್ಕಾಗಿ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ವಿನಾಶಕಾರಿ ಖಾಸಗೀಕರಣ ನೀತಿ ಅನುಸರಿಸುತ್ತಿದೆ; ದೊಡ್ಡ ಕಾರ್ಪೊರೇಟ್‌ಗಳ ಸಾಲಗಳನ್ನು ಮನ್ನಾ ಮಾಡುತ್ತಿದೆ; ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ ನಿಭಾಯಿಸಲು ಹಾಗೂ ಕೋವಿಡ್ ಸಾಂಕ್ರಾಮಿಕತೆ ಹಾಗೂ ಲಾಕ್‌ಡೌನ್–ಆರ್ಥಿಕ ಚಟುವಟಿಕೆಗಳ ಸ್ಥಗಿತತೆಯಿಂದ ಸಂತ್ರಸ್ತರಾದ ಜನರಿಗೆ ಪರಿಹಾರ ಒದಗಿಸಲು ಅಪಾರ ಹಣ ಬೇಕಾದರೂ ಕಾರ್ಪೊರೇಟ್ ಮತ್ತು ಸೂಪರ್–ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸಲು ನಿರಾಕರಿಸುತ್ತಿದೆ.

ಕೋವಿಡ್ ವೈರಸ್ ತನ್ನ ಹಾವಳಿ ಮುಂದುವರಿಸುತ್ತಿದ್ದಂತೆ ಹೆಚ್ಚೆಚ್ಚು ಜನರಿಗೆ, ಇದು ತಮ್ಮ ಬಗ್ಗೆ ಒಂದಿಷ್ಟೂ ಕಾಳಜಿಯಿಲ್ಲದ ಸರಕಾರ ಎಂಬ ಕಟು ಸತ್ಯದ ಅರಿವಾಗುತ್ತದೆ.

ಅನು: ವಿಶ್ವ

ಸರಕಾರ ಪೆಗಸಸ್ ಗೂಢಚರ್ಯೆ ತಂತ್ರಾಂಶವನ್ನು ಬಳಸಿದೆಯೇ?
ಎಂಬ ಪ್ರಶ್ನೆಗೆ
ಮಂತ್ರಿಗಳ ಉತ್ತರ:



ನೋಡಿ, ನಾವು ಬಳಸಿದ್ದೇವೆ ಎಂದು ನೀವು ಸಾಬೀತು ಮಾಡಲಾರಿರಿ

ಏನೇ ಆದರೂ, ನಮ್ಮ ಕಣ್ಗಾವಲು ಎಲ್ಲವೂ ಕಾನೂನುಬದ್ಧವೇ..

ಅಲ್ಲದೆ ನಾವು ಏನನ್ನೂ ಒಪ್ಪಿಕೊಂಡಿಲ್ಲ

ಮತ್ತು ತಾನೇನೂ ತಪ್ಪು ಮಾಡಿಲ್ಲ ಎಂದು ಎನ್.ಎಸ್.ಒ. ಹೇಳಿದೆ"


ಮತ್ತು ಹಲವು ದೇಶಗಳು ಪೆಗಸಿ??? ಬಳಸುತ್ತಿವೆ

ಮತ್ತು ಕಾಂಗ್ರೆಸ್ ಕೂಡ ಜನಗಳ ಮೇಲೆ ಗೂ?ಢಚಾರಿಕೆ ನಡೆಸಿದೆ..

ಆದ್ದರಿಂದ . ಏನೆಂದರೆ. ಯಾಕೆಂದರೆ..

ಮಂತ್ರಿಗಳ ಪೀಕಲಾಟ

ವ್ಯಂಗ್ಯಚಿತ್ರ: ಪೆನ್‌ಪೆನ್ಸಿಲ್‌ಡ್ರಾ ಫೇಸ್‌ಬುಕ್



ಆಮ್ಲಜನಕದ ಕೊರತೆಯಿಂದ ಸಾವುಗಳ

ಮಾಹಿತಿ ಇಲ್ಲಾ

ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಅಯೋಧ್ಯೆಯ ಟ್ರಸ್ಟ್ ನಲ್ಲಿ ಗೋಲ್‌ಮಾಲ್



ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಸ್ಥಾಪಿತವಾದ ಟ್ರಸ್ಟ್ ನ ನಿರ್ವಹಣೆಯನ್ನು ಮಾಡಲು ಸರಕಾರದಿಂದ ವಿಶೇಷವಾಗಿ ಆರಿಸಿದ ಮತ್ತು ರಾಮಮಂದಿರವನ್ನು ಕಟ್ಟುವ ಜವಾಬ್ದಾರಿ ಕೊಡಲಾದ ಟ್ರಸ್ಟಿಗಳು, ಮಂದಿರಕ್ಕಾಗಿ ಖರೀದಿಸುತ್ತಿರುವ ಜಮೀನಿನ ಬಗೆಗಿನ ಎಲ್ಲಾ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದಿರುವುದು ಮತ್ತು ಮಾರುಕಟ್ಟೆ ಬೆಲೆಗಿಂತ ಭಾರಿ ಹೆಚ್ಚಿನ ದರದಲ್ಲಿ ಖರೀದಿಸುವುದು ತೀರಾ ಅಸಾಧ್ಯ. ಧಾರ್ಮಿಕ ನಂಬಿಕೆಯ ಆಧಾರದಲ್ಲಿ ಜನರಿಂದ ಸಂಗ್ರಹಿಸಿದ ಹಣವನ್ನು ನಾಚಿಕೆಗೇಡು ರೀತಿಯಲ್ಲಿ ದುರುಪಯೋಗ ಮಾಡಲು ಹಲವು ಹಂತಗಳಲ್ಲಿ ಹಲವು ಪ್ರಭಾವಶಾಲಿಗಳು ಶಾಮೀಲಾಗಿರದೆ ಇದು ಅಸಾಧ್ಯವಾದ ಸಂಗತಿ.



ಸುಭಾಷಿಣಿ ಅಲಿ ಅನು: ಲವಿತ್ರ ವಸ್ತ್ರದ

ಉತ್ತರ ಪ್ರದೇಶದ ಯೋಗಿ ರಾಜ್ಯದಲ್ಲಿ ಅನೇಕ ಅಸಾಮಾನ್ಯ ಸಂಗತಿಗಳು ನಡೆಯುತ್ತಿವೆ: ಪ್ರತಿಪಕ್ಷಗಳ ಅಭ್ಯರ್ಥಿಗಳು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸದಂತೆ ತಡೆಯಲಾಗುತ್ತದೆ. ಹಳ್ಳಿಗಳಲ್ಲಿ ಕೊರೋನಾ ರೋಗಿಗಳಿಗೆ ಸರಿಯಾದ ವೈದ್ಯಕೀಯ ಸೌಲಭ್ಯದ ಕೊರತೆ ಇರುವ ಕಾರಣ ಬೇವಿನ ಮರದ ಕೆಳಗೆ ಕುಳಿತು ಆಮ್ಲಜನಕದ ಕೊರತೆ ನೀಗಿಸಲು ಹೇಳಲಾಗುತ್ತದೆ. ಅತ್ಯಂತ ಅಸಾಧಾರಣ ಸಂಗತಿ ಎಂದರೆ ರಾಮಮಂದಿರ ನಿರ್ಮಾಣದ ಹೊಣೆಯನ್ನು ವಹಿಸಿಕೊಂಡಿರುವ ಮತ್ತು ಇದಕ್ಕಾಗಿ ಸಾವಿರಾರು ಕೋಟಿ ಹಣವನ್ನು ಭಕ್ತರಿಂದ ಸಂಗ್ರಹಿಸಿರುವ ಟ್ರಸ್ಟ್ ನ ಸದಸ್ಯರು ಅಯೋಧ್ಯೆಯ ಭೂಖರೀದಿಗಳಲ್ಲಿ ಹಗರಣಗಳು ನಡೆದಿವೆ ಎಂಬುದು.

15 ನಿಮಿಷದಲ್ಲಿ ಭೂಮಿ ಬೆಲೆ 2 ಕೋಟಿ 18.5 ಕೋಟಿ !

ಜೂನ್ 13ರಂದು ಸಮಾಜವಾದಿ ಪಕ್ಷದ ಪವನ್ ಪಾಂಡೆ ಮತ್ತು ಆಪ್ ಪಕ್ಷದ ಸಂಜಯ್ ಸಿಂಗ್ ಅವರು ಪ್ರತ್ಯೇಕವಾದ ಪತ್ರಿಕಾಗೋಷ್ಠಿಗಳನ್ನು ನಡೆಸಿದರು. ಪತ್ರಿಕಾಗೋಷ್ಠಿಗಳಲ್ಲಿ ಅವರು ಅಯೋಧ್ಯೆಯಲ್ಲಿನ ಭೂಮಿಯನ್ನು ಎರಡು ಕೋಟಿಗೆ ಖರೀದಿ ಮಾಡಿದ 15 ನಿಮಿಷಗಳಲ್ಲಿ 18.5 ಕೋಟಿ ರೂಪಾಯಿಗೆ ರಾಮಜನ್ಮಭೂಮಿ ಟ್ರಸ್ಟ್ ಗೆ ಮಾರಾಟ ಮಾಡಿರುವ ದಾಖಲೆಗಳನ್ನು ತೋರಿಸಿದ್ದಾರೆ. ಸುಲ್ತಾನ್ ಅನ್ಸಾರಿ ಮತ್ತು ರವಿ ಮೋಹನ್ ತಿವಾರಿ ಮೊದಲು ಆ ಭೂಮಿಯನ್ನು ಹರೀಶ್ ಮತ್ತು ಕುಸುಮ್ ಪಾಠಕ್ ಎಂಬವರಿಂದ ಖರೀದಿ ಮಾಡಿ, ಮತ್ತೆ ಅದನ್ನು ರಾಮಜನ್ಮಭೂಮಿ ಟ್ರಸ್ಟ್ ಗೆ ಮಾರಾಟ ಮಾಡಿದರು. ಟ್ರಸ್ಟ್ ಗೆ ಮಾರಾಟ ಮಾಡುವಾಗ ಭೂಮಿಯ ಒಂದು ಚದರ ಅಡಿಗೆ 4123 ರೂಪಾಯಿಯಂತೆ ಮಾರಾಟ ಮಾಡಲಾಯಿತು. ಆ ವಲಯದ ಅಧಿಕೃತ ದರ ಒಂದು ಚದರ ಅಡಿಗೆ 763 ರೂಪಾಯಿ ಮಾತ್ರ ಎಂದು ಗಮನಿಸಬೇಕು. ಅಯೋಧ್ಯೆಯ ಬಿಜೆಪಿ ಮೇಯರ್ ರಿಷಿಕೇಶ್ ಉಪಾಧ್ಯಾಯ್ ಮತ್ತು ರಾಮಜನ್ಮಭೂಮಿ ಟ್ರಸ್ಟ್ ನ ಟ್ರಸ್ಟಿಯಾಗಿರುವ ಅನಿಲ್ ಮಿಶ್ರ ಇವರಿಬ್ಬರು ಈ ಎರಡೂ ಒಪ್ಪಂದಗಳಿಗೆ ಸಾಕ್ಷಿಯಾಗಿದ್ದರು. ಮೋಹನ್ ತಿವಾರಿಯವರು ರಿಷಿಕೇಶ್ ಉಪಾಧ್ಯಾಯರ ನಿಕಟವರ್ತಿಗಳು.

ಟ್ರಸ್ಟ್ ನ ಕಾರ್ಯದರ್ಶಿಗಳಾದ ಚಂಪಕ ರಾಯ್ ಅವರು ಹಗರಣದ ಆರೋಪಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸಿದರು. ಅನ್ಸಾರಿ ಮತ್ತು ತಿವಾರಿ ಅವರು 10 ವರ್ಷಗಳ ಹಿಂದೆ ಪಾಠಕ್ ಅವರೊಂದಿಗೆ ಮಾರಾಟ ಒಪ್ಪಂದ ಮಾಡಿಕೊಂಡಿದ್ದರು. ಇದರ ಮಧ್ಯೆ ಭೂಮಿಯ ಬೆಲೆ ಆಗಸಕ್ಕೆ ಏರಿದ್ದರಿಂದ ಅವರು ಇದರ ಲಾಭ ಪಡೆದರು ಅಷ್ಟೆ.

ಹರೀಶ್ ಮತ್ತು ಕುಸುಮ್ ಪಾಠಕ್ ಅವರ 'ಸಾಕೆತ್ ಗೋಟ್' ಕೃಷಿ–ಕಂಪನಿ ಒಂದು ಚಿಟ್ ಫಂಡ ನಂತಹ ಯೋಜನೆಯನ್ನು ರೂಪಿಸಿದ್ದು, ಅದು ಮೇಕೆ ಅಥವಾ ಹಣದ ರೂಪದಲ್ಲಿನ ಹೂಡಿಕೆಗಳ ಮೇಲೆ ಭಾರಿ ಆದಾಯವನ್ನು ನೀಡುವುದಾಗಿ ಹೇಳಿ ಸಾವಿರಾರು ಜನರನ್ನು ವಂಚಿಸಿತ್ತು. ಉತ್ತರಪ್ರದೇಶದ ಫೈಜಾಬಾದ್, ಅಯೋಧ್ಯ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಇವರ ಮೇಲೆ ಕೇಸುಗಳನ್ನು ಹಾಕಲಾಗಿದೆ. ಕಳೆದ ವರ್ಷ ಜನವರಿ ತಿಂಗಳಲ್ಲಿ ಅವರ ಮಗನನ್ನು ಬಂಧಿಸಲಾಗಿದೆ ಕೂಡ.

ಹಲವು ಕೇಸುಗಳಲ್ಲಿ ಪೋಲಿಸರಿಗೆ ಬೇಕಾಗಿರುವ ಈ ಅಪರಾಧ–ಆರೋಪಿ ಪಾಠಕ್ ದಂಪತಿ, ಎಲ್ಲಿ ಹುಡುಕಿದರೂ ಸಿಗುತ್ತಿಲ್ಲ ಎಂದು ಉತ್ತರ ಪ್ರದೇಶದ ಪೊಲೀಸರು ಹೇಳುತ್ತಿದ್ದರು. ಆದರೆ ಅವರು ಅಯೋಧ್ಯೆಯ ಕೋರ್ಟಿನಲ್ಲಿ ನಿಯಮಿತವಾಗಿ ಹಾಜರಾಗಿ ಹಲವು ಆಸ್ತಿ ವ್ಯವಹಾರಗಳನ್ನು ಪೂರ್ತಿಗೊಳಿಸಿದ್ದಾರೆ ಎಂಬುದನ್ನು ನಂಬುವುದು ಕಷ್ಟ, ಅದರೆ ನಿಜ.

ಮಾರ್ಚ್ 18ರ ಪೂರ್ತಿ ದಿನ ಪಾಠಕ್ ದಂಪತಿ ಕೋರ್ಟಿನಲ್ಲಿದ್ದು ಒಟ್ಟು ಐದು ಖಾಲಿ ನಿವೇಶನಗಳನ್ನು ಮಾರಾಟ ಮಾಡಿದರು. ಮೂರು ಖಾಲಿ ನಿವೇಶನಗಳನ್ನು ಅನ್ಸಾರಿ ಮತ್ತು ಮತ್ತು ತಿವಾರಿಗೆ ಎರಡು ಕೋಟಿ ರೂಪಾಯಿಗೆ ಮಾರಾಟ ಮಾಡಿ, ನಂತರ ಅವರು ಅದನ್ನು ಟ್ರಸ್ಟ್ ಗೆ 18.5 ಕೋಟಿ ರೂಪಾಯಿಗೆ ಮಾರಾಟ ಮಾಡಿದರು, ಇನ್ನುಳಿದ ಎರಡು ಖಾಲಿ ನಿವೇಶನಗಳ ಅಧಿಕೃತ ದರವು 4.97 ಕೋಟಿ ಇದ್ದು ಅವನ್ನು ಟ್ರಸ್ಟಗೆ ನೇರವಾಗಿ ಎಂಟು ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದರು.

ಈಗ ಪಾಠಕ್ ದಂಪತಿಗಳ ಈ ಐದು ಹಾಲಿ ನಿವೇಶನಗಳ ಖರೀದಿಯ ಬಗ್ಗೆಯೇ ಅನೇಕ ಪ್ರಶ್ನೆಗಳು ಉದ್ಭವವಾಗುತ್ತಿವೆ. ಅವರು 2017ರಲ್ಲಿ ಖರೀದಿ ಮಾಡಿದ ಜಾಗಗಳನ್ನು ನಾಲ್ಕು ಜನ ಅಣ್ಣ ತಮ್ಮಂದಿರಾದ ಜಾವೇದ್, ಫಿರೋಜ್, ಮೆಹಫೂಜ್ ಮತು ನೂರ್ ಅವರಿಂದ ಎರಡು ಕೋಟಿ ರೂಪಾಯಿಗಳಿಗೆ ಖರೀದಿ ಮಾಡಿದ್ದರು. ಈ ಜಾಗದ ಮಾರಾಟದ ಬಗ್ಗೆ ತಿವಾರಿ ಮತ್ತು ಅನ್ಸಾರಿ ಅವರೊಂದಿಗೆ ಹತ್ತು ವರ್ಷಗಳ ಹಿಂದೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ರಾಯ್ ಹೇಳಿಕೆ ಸುಳ್ಳು ಎಂದು ಸ್ಪಷ್ಟವಾಗುತ್ತದೆ. ಇದು ವಕ್ಫ್ ಜಾಗ ಆಗಿರುವುದರಿಂದ ಈ ಮಾರಾಟದಲ್ಲಿ ಮೋಸ ಆಗಿದೆ ಎಂದು ಆರೋಪಿಸಲಾಗಿದೆ. ವಕ್ಫ್ ಟ್ರಸ್ಟ್ ನ ವ್ಯವಸ್ಥಾಪಕರು (ಮುತಾವಲ್ಲಿ) ಈ ಮಾರಾಟವನ್ನು ಪ್ರಶ್ನಿಸಿದ್ದರಿಂದ, ಜಿಲ್ಲಾ ಆಡಳಿತ ಅದರ ಬಗೆಗಿನ ಕ್ರಮಗಳನ್ನು ತಡೆಹಿಡಿದಿದೆ. ಮೇ 2021 ರವರೆಗೆ ಮುತಾವಲ್ಲಿಯ ಪ್ರಕಾರ ಈ ಜಾಗದಲ್ಲಿ "ವಿವಾದಾತ್ಮಕ ಆಸ್ತಿ" ಎಂಬ ನೋಟಿಸನ್ನು ಹಾಕಲಾಗಿತ್ತು. ಆದರೆ ಈ ನೋಟಿಸನ್ನು ಪಾಠಕ್ ಅವರು ತೆಗೆದು ಹಾಕಿದ್ದಾರೆ.

ಭೂಖರೀದಿ ಹಗರಣಗಳ ಸರಮಾಲೆ

ಇದರ ಮಧ್ಯೆ ಈಗ ಮತ್ತೊಂದು ಪ್ರಶ್ನೆಗಳ ಸುಳಿಯಲ್ಲಿರುವ ಭೂವ್ಯವಹಾರ ಬೆಳಕಿಗೆ ಬಂದಿದೆ. ಅಯೋಧ್ಯೆಯ ಬಿಜೆಪಿ ಪಕ್ಷದ ಮೇಯರ್ ರಿಷಿಕೇಶ್ ಉಪಾಧ್ಯಾಯ ಅವರ ಸೋದರಳಿಯ ಮತ್ತು ಬಿಜೆಪಿ ಪಕ್ಷದ ಸಕ್ರಿಯ ಸದಸ್ಯರಾದ ದೀಪ್ ನಾರಾಯಣ್ ಅವರು, ಮಹಾಂತ್ ಮತ್ತು ದೇವೇಂದ್ರ ಪ್ರಸಾದಾಚಾರ್ಯ ಅವರಿಂದ 890 ಚದರ ಮೀಟರ್ ನಷ್ಟು ನಿವೇಶನವನ್ನು 20 ಲಕ್ಷ ರೂಪಾಯಿಗಳಿಗೆ ಫೆಬ್ರುವರಿ 20ರಂದು ಖರೀದಿ ಮಾಡಿದರು. ಈ ನಿವೇಶನವು ಪ್ರಸ್ತಾವಿತ ಹೊಸ ದೇವಸ್ಥಾನದ ಸ್ಥಳದ ಪಕ್ಕದಲ್ಲಿಯೇ ಇದೆ. ಇದೇ ನಿವೇಶನವನ್ನು ಮೇ 11ರಂದು ದೀಪ ನಾರಾಯಣ ವರು, ರಾಮಜನ್ಮಭೂಮಿ ಟ್ರಸ್ಟ್ ಗೆ 2.5 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದರು. ನಿವೇಶನದ ವಲಯ ಬೆಲೆಯು 35.6 ಲಕ್ಷ ರೂಪಾಯಿ ಇದೆ. ಈ ಮಾರಾಟದ ಪತ್ರಕ್ಕೆ ಸಹ ಅನಿಲ್ ಮಿಶ್ರ ಸಾಕ್ಷಿಯಾಗಿದ್ದರು. ಈ ದಾಖಲೆಗಳ ಬಗ್ಗೆ ವಿಚಾರಣೆ ನಡೆಸುವಾಗ ಮತ್ತೊಂದು ಮಾರಾಟ ಪತ್ರವು ಹೊರಬಂದಿತು. ಫೆಬ್ರವರಿ 20ರಂದು ದೀಪ ನಾರಾಯಣ ಅವರು ದೇವೇಂದ್ರ ಪ್ರಸಾದಾಚಾರ್ಯ ಅವರಿಂದ ಖರೀದಿ ಮಾಡಿದ ನಿವೇಶನವನ್ನು ರಾಮಜನ್ಮಭೂಮಿ ಟ್ರಸ್ಟ್‌ಗೆ ಒಂದು ಕೋಟಿ ರೂಪಾಯಿಗೆ ಮಾರಾಟ ಮಾಡಿದರು. ಈ ನಿವೇಶನದ ವಲಯ ದರವು 4000 ರೂ ಪ್ರತಿ ಚದರ ಮೀಟರ್ ಇದ್ದು, ಅದರ ಬೆಲೆ 27.08 ಲಕ್ಷ ಆಗುತ್ತದೆ ಆದರೆ ಅದನ್ನು ಒಂದು ಕೋಟಿಗೆ ಮಾರಾಟ ಮಾಡಿದರು. ಮತ್ತೊಮ್ಮೆ ಇದಕ್ಕೆ ಅನಿಲ್ ಮಿಶ್ರ ಅವರೇ ಸಾಕ್ಷಿಯಾಗಿದ್ದರು.

ದೇವೇಂದ್ರ ಪ್ರಸಾದ ಆಚಾರ್ಯರಿಂದ ಖರೀದಿ ಮಾಡಿ ಟಸ್ಟ್ ಗೆ ಮಾರಿದ ಜಮೀನು ವಾಸ್ತವವಾಗಿ ನಝುಲ್ ಭೂಮಿ ಅಥವಾ ಸರಕಾರದಿಂದ ಗುತ್ತಿಗೆ ಪಡೆದ ಸರಕಾರಿ ಜಮೀನು ಆಗಿದ್ದರಿಂದ ಅದನ್ನು ಮಾರಾಟ ಮಾಡಲು ಬರುವುದಿಲ್ಲ. ಆದ್ದರಿಂದ ಮಾರಾಟಕ್ಕೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಪ್ರಶ್ನೆಗಳ ಸುಳಿಯಲ್ಲಿರುವ ಈ ಜಮೀನು ಸರಕಾರದ್ದು ಎಂದು ಹೇಳುವ ದಾಖಲೆಗಳು ಸ್ಪಷ್ಟವಾಗಿವೆ. ಮಾರಾಟದ ಸಿಂಧುತ್ವದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪ್ರಶ್ನಿಸಿದಾಗ, ಇದರ ಬಗ್ಗೆ ಯಾರಾದರೂ ದೂರು ದಾಖಲಿಸಿದರೆ ಮಾತ್ರ ನಾವು ಅದರ ಬಗ್ಗೆ ವಿಚಾರಣೆ ನಡೆಸಬಹುದು. ಆದರೆ ಇಲ್ಲಿಯವರೆಗೆ ಯಾರು ಈ ಸಂಬಂಧಿತ ಯಾರೂ ದೂರು ನೀಡಿಲ್ಲ ಎಂದು ಹೇಳಿದರು.

ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಸ್ಥಾಪಿತವಾದ ಟ್ರಸ್ಟ್ ನ ನಿರ್ವಹಣೆಯನ್ನು ಮಾಡಲು ಸರಕಾರದಿಂದ ವಿಶೇಷವಾಗಿ ಆರಿಸಿದ ಮತ್ತು ರಾಮಮಂದಿರವನ್ನು ಕಟ್ಟುವ ಜವಾಬ್ದಾರಿ ಕೊಡಲಾದ ಟ್ರಸ್ಟಿಗಳು, ಮಂದಿರಕ್ಕಾಗಿ ಖರೀದಿಸುತ್ತಿರುವ ಜಮೀನಿನ ಬಗೆಗಿನ ಎಲ್ಲಾ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದಿರುವುದು ಮತ್ತು ಮಾರುಕಟ್ಟೆ ಬೆಲೆಗಿಂತ ಭಾರಿ ಹೆಚ್ಚಿನ ದರದಲ್ಲಿ ಖರೀದಿಸುವುದು ತೀರಾ ಅಸಾಧ್ಯ. ಧಾರ್ಮಿಕ ನಂಬಿಕೆಯ ಆಧಾರದಲ್ಲಿ ಜನರಿಂದ ಸಂಗ್ರಹಿಸಿದ ಹಣವನ್ನು ನಾಚಿಕೆಗೇಡು ರೀತಿಯಲ್ಲಿ ದುರುಪಯೋಗ ಮಾಡಲು ಹಲವು ಹಂತಗಳಲ್ಲಿ ಹಲವು ಪ್ರಭಾವಶಾಲಿಗಳು ಶಾಮೀಲಾಗಿರದೆ ಇದು ಅಸಾಧ್ಯವಾದ ಸಂಗತಿ.

ಹಗರಣಕೋರರಿಗೆ ರಕ್ಷಣೆ, ಹಗರಣ ಬಯಲು ಮಾಡಿದವರ ಮೇಲೆ ಕೇಸು

ರಾಮಜನ್ಮಭೂಮಿ ಟ್ರಸ್ಟ್ ವತಿಯಿಂದ ಮಾಡಲ್ಪಟ್ಟ ಅನೇಕ ವಿವಾದಿತ ಜಮೀನುಗಳ ಒಪ್ಪಂದದ ಬಗೆಗಿನ ಅನೇಕ ಅನುಮಾನಗಳು ಸಾರ್ವಜನಿಕವಾಗಿ ಬಯಲಾಗಿ ಬಹಳ ಸಮಯವಾಗಿದೆ. ಟ್ರಸ್ಟಿನ ಸ್ಥಾಪನೆ ಮತ್ತು ಕಾರ್ಯಗಳಲ್ಲಿ ಆಳವಾಗಿ ತೊಡಗಿಕೊಂಡಿರುವ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಈ ಹಗರಣಗಳ ಕುರಿತು ಚಕಾರವೆತ್ತಿಲ್ಲ. ಮಾತ್ರವಲ್ಲ, ಈ ಎಲ್ಲಾ ದುಷ್ಕೃತ್ಯಗಳ ಮಾಡಿರುವ ಟ್ರಸ್ಟ್ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದರೆ ಇಲ್ಲಿ ಮುಖ್ಯ ಆಪಾದಿತನಾಗಿರುವ ಚಂಪತ್ ರಾಯ್ ಮತ್ತು ಅವರ ಸಹೋದರರ ವಿರುದ್ಧ ಅವರದೇ ಜಿಲ್ಲೆಯಾದ ಬಿಜ್ನೋರ್ ನಲ್ಲಿ ಭೂಗಳ್ಳತನದ ದುಷ್ಕೃತ್ಯಗಳನ್ನು ಬಯಲು ಮಾಡಿದ ಹಿರಿಯ ಪತ್ರಕರ್ತ ನ ಮೇಲೆ ಸರಕಾರ ಮಿಂಚಿನ ವೇಗದಿಂದ ವರ್ತಿಸಿದೆ.

ಇತ್ತೀಚಿನ ಫೇಸ್ಬುಕ್ ನ ಒಂದು ಪೋಸ್ಟಲ್ಲಿ ಹಿರಿಯ ತನಿಖಾ ಪತ್ರಕರ್ತ ವಿನೀತ ನರೇನ್

ಪುಟ 14 ಕ್ಕೆ



ದೇವಾಲಯದ ಟ್ರಸ್ಟ್ ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಭಾರತದ ಸ್ವಾತಂತ್ರ್ಯಕ್ಕಾಗಿ 'ಮಾಡು ಇಲ್ಲವೇ ಮಡಿ' ಸಂಗ್ರಾಮದ ಮೂಲಕ "ಭಾರತ ಬಿಟ್ಟು ತೊಲಗಿ" ಎಂದು ಬ್ರಿಟಿಷ್ ಸಾಮ್ರಾಜ್ಯವಾದಿಗಳನ್ನು ಒತ್ತಾಯಿಸಿ ಹೋರಾಟ ಮಾಡಿದ ನಮ್ಮ ಜನರ ಆಶೋತ್ತರಗಳನ್ನು, ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ನಿರಾಕರಿಸಲು ಬಯಸುತ್ತಿದೆ. ಅದಕ್ಕಾಗಿ ಕೊವಿಡ್ ಸಾಂಕ್ರಾಮಿಕವನ್ನೂ ಒಂದು ಅವಕಾಶವಾಗಿ ದುರುಪಯೋಗಪಡಿಸಿಕೊಳ್ಳಲು ಕೂಡ ಹೇಸುತ್ತಿಲ್ಲ. ಇದನ್ನು ದೇಶದ ಸಂಪತ್ತನ್ನು ಸೃಷ್ಟಿಸುವ ರೈತರು ಮತ್ತು ಕಾರ್ಮಿಕರು ಒಟ್ಟುಗೂಡಿ ಪ್ರತಿರೋಧಿಸುತ್ತಿದ್ದಾರೆ.

ಆದ್ದರಿಂದ ಈ ಬಾರಿಯ ಆಗಸ್ಟ್ 9, ಖಂಡಿತವಾಗಿಯೂ ನಮ್ಮ ಸ್ವಾತಂತ್ರ್ಯ ಚಳುವಳಿಯ ಚೇತನವನ್ನು ಮತ್ತೆ ಬೆಳಗಿಸುವಲ್ಲಿ ಮತ್ತು ಸುಲಿಗೆಕೋರ ನವ-ಉದಾರವಾದಿ ನೀತಿಗಳಿಂದ ಹಾಗೂ ಬಿಜೆಪಿ ಸರ್ಕಾರದ ವಿನಾಶಕಾರಿ ವಿಭಜನಕಾರೀ ಕುತಂತ್ರಗಳಿಂದ ದೇಶವನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತೊಂದು ಮೈಲುಗಲ್ಲಾಗಲಿದೆ.

ಆಗಸ್ಟ್ 9



ಸುಲಿಗೆಕೋರ ನೀತಿಗಳಿಂದ ವಿಭಜನಕಾರೀ ಕುತಂತ್ರಗಳಿಂ

ಭಾರತ ಉಳಿಸಿ ದಿನ



ಡಾ.ಕೆ.ಹೇಮಲತಾ, ಅಧ್ಯಕ್ಷರು, ಸಿ.ಐ.ಟಿ.ಯು. ಅನು: ಟಿ.ಸುರೇಂದ್ರ ರಾವ್

ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಗಸ್ಟ್ 9 ಬಹುಮುಖ್ಯವಾದ ದಿನ. 1942 ರಲ್ಲಿ ಆ ದಿನ ನಮ್ಮ ದೇಶದ ನೂರಾರು ಸಾವಿರಾರು ಜನರು ಬೀದಿಗಿಳಿದು ಬ್ರಿಟಿಷ್ ಸಾಮ್ರಾಜ್ಯವಾದಿಗಳನ್ನು "ಭಾರತ ಬಿಟ್ಟು ತೊಲಗಿ" ಎಂದು ಒತ್ತಾಯ ಮಾಡಿದ ದಿನ. ಸ್ವಾತಂತ್ರ್ಯ ಗಳಿಸಲು 'ಮಾಡು ಇಲ್ಲವೆ ಮಡಿ' ಎಂಬ ಸಂಗ್ರಾಮಕ್ಕಾಗಿ ನೀಡಿದ ಕರೆಗೆ ಓಗೊಟ್ಟು ಹೋರಾಟಕ್ಕೆ ಇಳಿದ ದಿನವದು.

ದೇಶವು ಇಂದು ಸ್ವಾತಂತ್ರ್ಯದ 75 ನೇ ವರ್ಷಾಚರಣೆಗೆ ಸಿದ್ಧವಾಗುತ್ತಿದೆ. ನಮ್ಮ ಕಾರ್ಮಿಕರ, ರೈತರ ಹಾಗೂ ಇತರ ದುಡಿಯುವ ಜನರ ಪರಿಶ್ರಮದ ದುಡಿಮೆಯ ಫಲವಾಗಿ ಹಲವಾರು ಕ್ಷೇತ್ರಗಳಲ್ಲಿ ನಾವು ಮುನ್ನಡೆಯನ್ನು ಸಾಧಿಸಿದ್ದರೂ, ಅದರ ಪ್ರಯೋಜನ ಅವರಿಗೆ ದಕ್ಕಿಲ್ಲ. ಅದೂ ಅಲ್ಲದೆ, ಮೂರು ದಶಕಗಳ ಹಿಂದೆ ನಮ್ಮ ದೇಶದಲ್ಲಿ ಅಧಿಕೃತವಾಗಿ ಆರಂಭವಾದ ನವ-ಉದಾರವಾದಿ ಆಳ್ವಿಕೆಯ ಅಡಿಯಲ್ಲಿ, ದುಡಿಯುವ ಜನರು ತಮ್ಮ ಹೋರಾಟಗಳು ಮತ್ತು ತ್ಯಾಗ ಬಲಿದಾನಗಳ ಮೂಲಕ ಗಳಿಸಿದ್ದ ಅಲ್ಪಸ್ವಲ್ಪ ಲಾಭಗಳನ್ನೂ ಈಗ ಕಿತ್ತುಕೊಳ್ಳಲಾಗುತ್ತಿದೆ. ನಮ್ಮ ಸಾರ್ವಜನಿಕ ವಲಯದ ಉದ್ದಿಮೆಗಳ ಮೂಲಕ ಗಳಿಸಿದ ಉತ್ಪಾದನಾ ಸಾಮರ್ಥ್ಯ ಹಾಗೂ ಸ್ವಾವಲಂಬನೆಯನ್ನು ಹಾಳುಗೆಡವಲಾಗುತ್ತಿದೆ. ನಮ್ಮ ದೇಶದ ಸಂಪತ್ತಾಗಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ದೇಶೀಯ ಹಾಗೂ ವಿದೇಶಿ ಖಾಸಗಿ ಕಾರ್ಪೊರೇಟ್ ಗಳ ಕೈಗೊಪ್ಪಿಸಲಾಗುತ್ತಿದೆ.

ಈ ಪ್ರಕ್ರಿಯೆಯು ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ವೇಗ ಪಡೆದಿದೆ. ಅದು ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ಗರಿಷ್ಠ ಮಟ್ಟ ತಲುಪಿದೆ. ಮೋದಿ ಸರ್ಕಾರವು ಈ ಮಹಾಜಾಡ್ಯ ಹಾಗೂ ಅದರ ಜತೆಗಿನ ಲಾಕ್ಡೌನನ್ನು 'ದೈವದತ್ತ ಅವಕಾಶ'ವಾಗಿ ಬಳಸಿಕೊಂಡು ನವ-ಉದಾರವಾದಿ ನೀತಿಗಳನ್ನು ಇನ್ನೂ ವೇಗವಾಗಿ ಜಾರಿಮಾಡಿತು. ಈ ಅವಧಿಯಲ್ಲಿ, ಜನರು ನರಳುತ್ತಿರುವಾಗ, ಕೋಟ್ಯಾಂತರ ಜನರು ಉದ್ಯೋಗ ಮತ್ತು ಆದಾಯವನ್ನು ಕಳೆದುಕೊಂಡು ಹಸಿವು ದಾರಿದ್ರ್ಯದತ್ತ ತಳ್ಳಲ್ಪಟ್ಟಾಗ, ಅವರಿಗೆ ನೆರವು ನೀಡುವ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬದಲಿಗೆ, ದೇಶೀಯ ಮತ್ತು ವಿದೇಶಿ ಕಾರ್ಪೊರೇಟ್ ಕಂಪನಿಗಳು ದೇಶವನ್ನು ಹಾಗೂ ಜನರನ್ನು ಲೂಟಿ ಹೊಡೆಯಲು ಅವಕಾಶ ಒದಗಿಸಿತು. ಸಾಕಷ್ಟು ಔಷಧಿಗಳನ್ನು, ಆಮ್ಲಜನಕವನ್ನು ಖಾತ್ರಿಪಡಿಸುವ ಹಾಗೂ ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಿ ಎಲ್ಲಾ ಜನರಿಗೂ ಒದಗಿಸುವಂತಹ ಸಾರ್ವಜನಿಕ ಆರೋಗ್ಯ ಸೌಕರ್ಯಗಳನ್ನು ಬಲಪಡಿಸುವಲ್ಲಿನ ಅದರ ದಿವ್ಯ ನಿರ್ಲಕ್ಷ್ಯವು ತಪ್ಪಿಸಬಹುದಾಗಿದ್ದ ನಮ್ಮ ಲಕ್ಷಾಂತರ ಜನರ ಸಾವಿಗೆ ಹಾಗೂ ನರಳಿಕೆಗೆ ಕಾರಣವಾಯಿತು.

ಸರ್ಕಾರದ ಕ್ರೂರ ಹಠಮಾರಿತನ

ಇದೇ ಸಮಯದಲ್ಲಿ, ನಮ್ಮ ಸಣ್ಣ ರೈತರ ಮೇಲೆ ಅವಲಂಬಿತವಾಗಿರುವ ಕೃಷಿಯನ್ನು ಕಾರ್ಪೊರೇಟ್ ಕೃಷಿಯಾಗಿ ಬದಲಾಯಿಸಲು ಬೇಕಾದಂತಹ ಕೃಷಿ ಕಾನೂನುಗಳನ್ನು ಅಂಗೀಕರಿಸಲಾಯಿತು; ಕಾರ್ಮಿಕರ ಸಂಘಟನಾ ಹಕ್ಕುಗಳನ್ನು ಮತ್ತು ಸಾಮೂಹಿಕವಾಗಿ ಹೋರಾಟ ಮಾಡುವ ಹಕ್ಕುಗಳನ್ನು ಕಿತ್ತುಕೊಳ್ಳುವ ಕಾರ್ಮಿಕ ಸಂಹಿತೆಗಳನ್ನು ಅಂಗೀಕರಿಸಲಾಯಿತು. ಇಡೀ ಸಾರ್ವಜನಿಕ ವಲಯವನ್ನು ನಾಶಮಾಡಲಾಗುತ್ತಿದೆ.

ಈ ಸರ್ಕಾರದ ಕ್ರೂರ ಹಠಮಾರಿತನ ಮತ್ತು ಅಂತರರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಪೂರ್ಣ ಶರಣಾಗತಿಯಾಗುತ್ತಿರುವುದನ್ನು ಅದು ಜನರಿಗೆ ನೇರ ಹಣ ವರ್ಗಾವಣೆ ಹಾಗೂ ಉಚಿತ ಆಹಾರ ಧಾನ್ಯಗಳನ್ನು ಒದಗಿಸಲು ನಿರಾಕರಿಸುತ್ತಿರುವಾಗಲೇ, ತಮ್ಮ ಕಾರ್ಪೊರೇಟ್ ಬಂಟರುಗಳಿಗೆ ಭಾರೀ ಪ್ರಮಾಣದ ತೆರಿಗೆ ವಿನಾಯಿತಿ ಘೋಷಿಸುವುದರ ಮೂಲಕ ಪ್ರದರ್ಶಿಸಿದೆ. ಬಹುಪಾಲು ಮುಂದುವರಿದ ಬಂಡವಾಳಶಾಹಿ ದೇಶಗಳು ತಮ್ಮ ಆಂತರಿಕ ಬೇಡಿಕೆಯನ್ನು ಪುನರುಜ್ಜೀವಗೊಳಿಸಲು ಹಾಗೂ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲು, ನವ-ಉದಾರವಾದಕ್ಕೆ ಅದು ಅಪಥ್ಯವಾಗಿದ್ದರೂ, ಜನರಿಗೆ ನೇರ ನಗದು ವರ್ಗಾವಣೆ ಮಾಡಿವೆ. ಆದರೆ ಮೋದಿ ಸರ್ಕಾರ ಇದನ್ನು ಮಾಡಲು ಸಿದ್ಧವಿಲ್ಲ, ಬದಲಿಗೆ ಆರ್ಥಿಕತೆ ಮತ್ತೆ ಪುಟಿದೇಳುತ್ತಿದೆ ಎಂಬ ಸುಳ್ಳು ಪ್ರತಿಪಾದನೆ ಮಾಡುತ್ತಿದೆ.

ಈ ಅವಧಿಯಲ್ಲಿ 23 ಕೋಟಿ ಜನರು ಕನಿಷ್ಠ ವೇತನ ಮಟ್ಟದ ಬಡತನಕ್ಕಿಂತಲೂ ಕೆಳಗಿನ ಮಟ್ಟಕ್ಕೆ ನೂಕಲ್ಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಏಪ್ರಿಲ್ 2020 ರಲ್ಲಿ ಪ್ರತಿ ಗಂಟೆಗೆ 1,70,000 ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಹಸಿವು ಮತ್ತು ಬಡತನ ಹೆಚ್ಚಾಗುತ್ತಿದೆ. ಅಪೌಷ್ಟಿಕತೆ, ಅದರಲ್ಲೂ ಮಕ್ಕಳಲ್ಲಿ, ಅಪಾಯದ ಮಟ್ಟಕ್ಕೆ ಏರಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆಯು 6 ಕೋಟಿಗಳಿಂದ 13.4 ಕೋಟಿಗೆ ಹೆಚ್ಚಿದೆ ಎಂದು ಪಿಇಡಬ್ಲ್ಯು ಸಂಶೋಧನಾ ಕೇಂದ್ರವು ಅಂದಾಜು ಮಾಡಿದೆ. ನಮ್ಮ ಮಧ್ಯಮ ವರ್ಗದ 59.3% ಜನರು ಬಡತನಕ್ಕೆ ಜಾರಿದ್ದಾರೆ.

ಮತ್ತೊಂದೆಡೆ, ಲಾಕ್ಡೌನ್ ಅವಧಿಯಲ್ಲಿ

ಪುಟ 10 ನೋಡಿ



ಸಿಐಟಿಯು-ಎಐಕೆಎಸ್- ಎಐಎಡಬ್ಲ್ಯುಯು
'ಭಾರತ ಉಳಿಸಿ' ಜಂಟೀ ಪ್ರಚಾರಾಂದೋಲನ
ಜುಲೈ 25 ರಿಂದ ಆಗಸ್ಟ್ 8, 2021

ಆಗ್ರಹಗಳು

1. ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಮತ್ತು ಜನವಿರೋಧಿ ಕೃಷಿ ಕಾನೂನುಗಳನ್ನು ಹಾಗೂ ವಿದ್ಯುತ್ ತಿದ್ದುಪಡಿ ಮಸೂದೆ ರದ್ದಾಗಬೇಕು.
2. ಎಲ್ಲಾ ಬೆಳೆಗಳಿಗೆ ಸಿ2+50% ಕನಿಷ್ಠ ಬೆಂಬಲ ಬೆಲೆ ಮತ್ತು ಖರೀದಿ ಖಾತ್ರಿಗೊಳ್ಳಬೇಕು.
3. ಅಗತ್ಯ ವಸ್ತುಗಳ, ಪೆಟ್ರೋಲ್, ಡೀಸೆಲ್, ಅನಿಲ, ಖಾದ್ಯತೈಲ ಮುಂತಾದವುಗಳ ತೀವ್ರ ಬೆಲೆ ಏರಿಕೆಯನ್ನು ಹಿಂದಕ್ಕೆ ಹೋಗಬೇಕು.
4. ರಿಟ್ರೆಂಚ್‌ಮೆಂಟ್ ಅಥವಾ ಸಂಬಳ ಕಡಿತ ನಡೆಯಬಾರದು. ಕೋವಿಡ್ ಮಹಾಜಾಡ್ಯದ ಅವಧಿಯಲ್ಲಿನ ಉದ್ಯೋಗ ಹಾಗೂ ಸಂಬಳ ನಷ್ಟಕ್ಕೆ ಪರಿಹಾರ ಸಿಗಬೇಕು.ಎಲ್ಲಾ ವಲಸೆ ಹಾಗೂ ಅಸಂಘಟಿತ ವಲಯದ ಕಾರ್ಮಿಕರನ್ನು ನೋಂದಾಯಿಸಬೇಕು. ಹೆಚ್ಚು ಉದ್ಯೋಗ ಸೃಷ್ಟಿ ಯಾಗಬೇಕು. ಸರ್ಕಾರ ಹಾಗೂ ಸಾರ್ವಜನಿಕ ವಲಯದಲ್ಲಿನ ಎಲ್ಲಾ ಹುದ್ದೆಗಳನ್ನು ಈ ಕೂಡಲೆ ಭರ್ತಿ ಮಾಡಬೇಕು.
5. ತಾತ್ಕಾಲಿಕ, ಗುತ್ತಿಗೆ, ಸ್ಕೀಮ್ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರನ್ನೂ ಒಳಗೊಂಡಂತೆ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ವೇತನ ಹಾಗೂ ಸಾಮಾಜಿಕ ಭದ್ರತೆ ಖಾತ್ರಿಯಾಗಬೇಕು.
6. ದಿನಕ್ಕೆ ರೂ.600 ರಂತೆ ವಾರ್ಷಿಕ ಕನಿಷ್ಠ 200 ದಿನಗಳ ಕೆಲಸವನ್ನು ಖಾತ್ರಿಪಡಿಸಲು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ(ಮನರೇಗ) ಯೋಜನೆಗೆ ಬಜೆಟ್ ನೀಡಿಕೆಯನ್ನು ಹೆಚ್ಚಿಸಬೇಕು. ನಗರಪ್ರದೇಶ ಉದ್ಯೋಗ ಖಾತ್ರಿ ಯೋಜನೆ ಕಾಯಿದೆ ತನ್ನಿ. ಮನರೇಗದಲ್ಲಿ ಜಾತಿ ಆಧಾರಿತ ಉದ್ಯೋಗ ಹಾಗೂ ಕೂಲಿ ಪಾವತಿ ತರಬೇಕೆಂಬ ತಾರತಮ್ಯದ ಸಲಹಾ ಪ್ರಸ್ತಾಪವನ್ನು ಹಿಂದಕ್ಕೆ ಪಡೆಯಬೇಕು.
7. ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲಾ ಕುಟುಂಬಗಳಿಗೆ ಪ್ರತಿ ತಿಂಗಳು ರೂ.7,500 ನಗದು ವರ್ಗಾವಣೆ ಆಗಬೇಕು.
8. ಕೋವಿಡ್-19 ಸಾಂಕ್ರಾಮಿಕದ ಅವಧಿಗೆ ಪ್ರತಿಯೊಬ್ಬರಿಗೂ ತಿಂಗಳಿಗೆ 10 ಕೆ.ಜಿ.ಆಹಾರ ಧಾನ್ಯವನ್ನು ಕೊಡಬೇಕು.
9. ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆ ನೀಡುವುದರೊಂದಿಗೆ ಎಲ್ಲರಿಗೂ ಈ ಕೂಡಲೇ ಉಚಿತ ಹಾಗೂ ಸಾರ್ವತ್ರಿಕ ಲಸಿಕೆ ಹಾಕುವುದನ್ನು ಖಾತ್ರಿಪಡಿಸಬೇಕು. ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಿ ಮತ್ತು ವಿತರಣೆಯನ್ನು ಸರ್ಕಾರಿ ನಿಯಮಗಳಡಿ ತರುವುದರ ಮೂಲಕ ಒಂದು ನಿಗದಿತ ಸಮಯದೊಳಗಡೆ ಸಾರ್ವತ್ರಿಕ ಉಚಿತ ಲಸಿಕೆ ಹಾಕಬೇಕು. ಕಾರ್ಪೊರೇಟ್ ಪರ ಲಸಿಕೆ ನೀತಿಯನ್ನು ರದ್ದು ಮಾಡಬೇಕು ಸುಪ್ರೀಂಕೋರ್ಟ್ ಆದೇಶದಂತೆ ಕೋವಿಡ್ ಸಾವುಗಳಿಗೆ ಪರಿಹಾರ ಖಾತ್ರಿಪಡಿಸಬೇಕು.
10. ಆರೋಗ್ಯ ಕ್ಷೇತ್ರಕ್ಕೆ ಜಿಡಿಪಿಯ 6% ಹಣ ವಿನಿಯೋಗ ವಿರಬೇಕು. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಆರೋಗ್ಯ ಸೌಕರ್ಯಗಳನ್ನು ಬಲಪಡಿಸಿ, ಅಗತ್ಯ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಕ ಮಾಡಿ' ಕೋವಿಡ್ ಏರಿಕೆಯನ್ನು ಎದುರಿಸಲು ಸಾಕಷ್ಟು ಆಸ್ಪತ್ರೆ ಹಾಸಿಗೆಗಳನ್ನು, ಆಮ್ಲಜನಕವನ್ನು ಹಾಗೂ ವೈದ್ಯಕೀಯ ಸೌಲಭ್ಯವನ್ನು ಖಾತ್ರಿಪಡಿಸಬೇಕು;; ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡೇತರ ರೋಗಿಗಳಿಗೆ ಪರಿಣಾಮಕಾರಿಯಾದ ಚಿಕಿತ್ಸೆ ಖಾತ್ರಿಪಡಿಸಬೇಕು; ಆಶಾ ಹಾಗೂ ಅಂಗನವಾಡಿ ನೌಕರರನ್ನೂ ಒಳಗೊಂಡಂತೆ ಸಾಂಕ್ರಾಮಿಕದ ನಿರ್ವಹಣೆಯಲ್ಲಿ ನಿರತರಾಗಿರುವ ಮುಂಚೂಣಿಯ ಕಾರ್ಯಕರ್ತರು ಮುಂತಾದವರಿಗೆ ರಕ್ಷಾ ಕವಚಗಳ, ಉಪಕರಣಗಳ ಲಭ್ಯತೆಯನ್ನು, ಸಂಬಳ ಏರಿಕೆ ಮುಂತಾದವನ್ನು ಖಾತ್ರಿಪಡಿಸಬೇಕು. ಅವರೆಲ್ಲರಿಗೂ ಸಮಗ್ರ ವಿಮಾ ಸುರಕ್ಷತೆಯನ್ನು ಒದಗಿಸಬೇಕು.
11. ಸಾರ್ವಜನಿಕ ಉದ್ದಿಮೆಗಳ ಹಾಗೂ ಸರ್ಕಾರಿ ಇಲಾಖೆಗಳ ಖಾಸಗೀಕರಣ ನಿಲ್ಲಬೇಕು; ಕರಾಳ 'ಅಗತ್ಯ ರಕ್ಷಣಾ ಸೇವೆಗಳ ಸುಗ್ರೀವಾಜ್ಞೆ' (ಇ.ಎಸ್.ಡಿ.ಒ)ಯನ್ನು ಹಿಂಪಡೆಯಬೇಕು.

ಭಾರತ ಉಳಿಸಿ ದಿನ

ಪುಟ ೧ ರಿಂದ

ಭಾರತೀಯ ಬಿಲಿಯಾಧೀಶರುಗಳ ಸಂಪತ್ತು 35% ಹೆಚ್ಚಾಗಿದೆ. ಮಾರ್ಚ್ 2020 ರಲ್ಲಿ ದೇಶಾದ್ಯಂತ ಲಾಕ್ಡೌನ್ ಘೋಷಣೆ ಮಾಡಿದಾಗಿನಿಂದ ನಮ್ಮ ದೇಶದ ಮೇಲಿನ 100 ಬಿಲಿಯಾಧೀಶರುಗಳ ಸಂಪತ್ತು 12,97,822 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ. ಕೋವಿಡ್ ಸಮಯದಲ್ಲಿ ಮಾತ್ರವೇ, ನಮ್ಮ ದೇಶದ ಮೇಲಿನ 11 ಬಿಲಿಯಾಧೀಶರುಗಳ ಸಂಪತ್ತಿನ ಹೆಚ್ಚಳವು ಎಷ್ಟೆಂದರೆ 10 ವರ್ಷಗಳ ಕಾಲದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ವೆಚ್ಚವನ್ನು ಭರಿಸಬಹುದಾದಷ್ಟು. ಈ 11 ಬಿಲಿಯಾಧೀಶರುಗಳ ಸಂಪತ್ತಿನ ಹೆಚ್ಚಳದ ಮೇಲೆ ಶೇಕಡಾ 1ರಷ್ಟು ತೆರಿಗೆ ವಿಧಿಸಿದರೆ ಜನೌಷಧಿ ಯೋಜನೆಗೆ ನಿಗದಿಯಾಗಿರುವ ಹಣವನ್ನು 149 ಪಟ್ಟು ಹೆಚ್ಚಿಸುವ ಮೂಲಕ ನಮ್ಮ ಜನರಿಗೆ ಕೈಗೆಟುಕುವ ದರದಲ್ಲಿ ಔಷಧಿಗಳನ್ನು ಒದಗಿಸಬಹುದು.

ನಮ್ಮ ದೇಶದಲ್ಲಿ ಅನುಸರಿಸುತ್ತಿರುವ ನವ-ಉದಾರವಾದವು ಅಂತರರಾಷ್ಟ್ರೀಯ ಹಣಕಾಸು ಬಂಡವಾಳದಿಂದ ನಿರ್ದೇಶಿತವಾದ ಜಾಗತಿಕ ನವ-ಉದಾರವಾದದ ಅವಿಭಾಜ್ಯ ಅಂಗವಾಗಿದೆ. ಯಾವುದೇ ಕಡಿವಾಣವಿಲ್ಲದೆ ಕಾರ್ಮಿಕರನ್ನು ಶೋಷಣೆ ಮಾಡಲು ಅನುಕೂಲ ಮಾಡಿಕೊಡುವುದು ಮತ್ತು ಬಂಡವಾಳಶಾಹಿ ವರ್ಗದವರ ಲಾಭವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು, ಸಾರ್ವಜನಿಕ ಆಸ್ತಿಗಳನ್ನು, ಸೇವೆಗಳನ್ನು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಸಾರಾಸಗಟಾಗಿ ಖಾಸಗೀಕರಣ ಮಾಡುವ ಮೂಲಕ ಸಾರ್ವಜನಿಕ ಸಂಪತ್ತನ್ನು ದೊಡ್ಡ ಕಾರ್ಪೋರೇಟ್‌ಗಳಿಗೆ ವರ್ಗಾಯಿಸುವುದು ನವ-ಉದಾರವಾದದ ಮುಖ್ಯ ಉದ್ದೇಶವಾಗಿದೆ. ನವ-ಉದಾರವಾದದ ಆಗಮನದೊಂದಿಗೆ, ಶ್ರೀಮಂತರ ಮೇಲಿನ ತೆರಿಗೆ ಜಾಗತಿಕವಾಗಿ ಕಡಿಮೆಯಾಗಿದೆ. ಕಾರ್ಮಿಕ ವರ್ಗದ ಸಾಮೂಹಿಕ ಶಕ್ತಿಯಾಗಿರುವ ಕಾರ್ಮಿಕ ಸಂಘಟನೆಗಳು ಹಾಗೂ ಕಾರ್ಮಿಕರ ಮೇಲಿನ ದಾಳಿಗಳು ಹೆಚ್ಚಾಗಿವೆ.

ನವ-ಉದಾರವಾದಿ ಸುಧಾರಣೆಗಳ ದಿವಾಳಿತನ

ಆದರೆ ಕಾರ್ಮಿಕರ ಕೂಲಿ ಹಾಗೂ ಸೇವಾ ನಿಯಮಗಳ ಮೇಲೆ ಹಾಗೂ ಕಾರ್ಮಿಕ ಸಂಘಗಳ ಮೇಲಿನ ದಾಳಿಗಳ ಹೊರತಾಗಿಯೂ ಇವತ್ತಿನ ವ್ಯವಸ್ಥೆಯ ಬಿಕ್ಕಟ್ಟು ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವಲ್ಲಿ ಪರಿಣಾಮಕಾರಿಯಾಗಿಲ್ಲ ಎಂಬುದನ್ನು ಸಾಬೀತು ಮಾಡಿದೆ ಮತ್ತು ನವ-ಉದಾರವಾದಿ ಸುಧಾರಣೆಗಳ ದಿವಾಳಿತನವನ್ನು ಬಯಲು ಮಾಡಿದೆ. ಅಪಾರ ಪ್ರಮಾಣದ ಸಂಪತ್ತನ್ನು ಸೃಷ್ಟಿಸಿದ್ದಾಗ್ಯೂ, ಜನಸಮುದಾಯದ ಮೂಲ ಅಗತ್ಯಗಳನ್ನು ಹಾಗೂ ಆಸೆ-ಆಕಾಂಕ್ಷೆಗಳನ್ನು ಪೂರೈಸುವಲ್ಲಿ ಮತ್ತು ಒಂದು ಸಭ್ಯ ಹಾಗೂ ಘನತೆಯ ಬದುಕನ್ನು ನೀಡುವಲ್ಲಿ ಈ ಬಂಡವಾಳಶಾಹಿ ವ್ಯವಸ್ಥೆಯೇ ಅಸಮರ್ಥವಾಗಿದೆ ಎಂಬ ಸಂಗತಿ ಹೆಚ್ಚೆಚ್ಚು ಅರಿವಿಗೆ ಬರುತ್ತಿದೆ.

ಆದರೆ, ಜಾಗತಿಕವಾಗಿ ಅಪಖ್ಯಾತಿ ಹೊಂದಿರುವ ಅವೇ ನವ-ಉದಾರವಾದಿ ನೀತಿಗಳನ್ನು ಮುಂದುವರಿಸಲು ಮೋದಿ ಸರ್ಕಾರ ಹಠತೊಟ್ಟಿದೆ. ಅದು ತನ್ನ ಸರ್ವಾಧಿಕಾರಶಾಹಿ ಹಾಗೂ ನಿರಂಕುಶ ಕ್ರಮಗಳ ಮೂಲಕ ಎಲ್ಲಾ ವಿರೋಧಗಳನ್ನು ದಮನಮಾಡಿ ಈ ನೀತಿಗಳನ್ನು ಅನುಸರಿಸಲು ಬಯಸುತ್ತಿದೆ. ಕರಾಳ ಕಾಯಿದೆಗಳಾದ ರಾಜದ್ರೋಹ ಕಾಯಿದೆ, ಯುಎಪಿಎ (ಕಾನೂನುಬಾಹಿರ ಚಟುವಟಿಕೆ ಪ್ರತಿಬಂಧಕ ಕಾಯಿದೆ)ಗಳನ್ನು ಬಳಸಿ ಈ ನೀತಿಗಳ ವಿರುದ್ಧದ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕಲಾಗುತ್ತಿದೆ; ಮುಷ್ಕರ ನಿಷೇಧಿಸಲು ಅಗತ್ಯ ರಕ್ಷಣಾ ಸೇವೆಗಳ ಸುಗ್ರೀವಾಜ್ಞೆ ಹೊರಡಿಸಿರುವುದು ವಸಾಹತುಶಾಹಿಗಳ ಆಳ್ವಿಕೆಯನ್ನು ನೆನಪಿಗೆ ತರುತ್ತಿದೆ.

ಈ ಸರ್ಕಾರದ ನೇತಾರ ದೇಶಕ್ಕೆ ಸಮ ಎಂದು ಹೇಳುತ್ತಾ - ಸರಕಾರವನ್ನು ಮತ್ತು ಆತನನ್ನು ವಿರೋಧಿಸುವವರನ್ನು ಬೆದರಿಸಲು ಪ್ರಭುತ್ವ ಯಂತ್ರ ಹಾಗೂ ಆಡಳಿತಾಂಗದ ಹಲವಾರು ಅಂಗಗಳನ್ನು ಬಳಸಲಾಗುತ್ತಿದೆ. ಪತ್ರಕರ್ತರು, ಬುದ್ಧಿಜೀವಿಗಳು ಹಾಗೂ ಕಾರ್ಯಕರ್ತರನ್ನು ಜೈಲಿಗೆ ತಳ್ಳಲಾಗುತ್ತಿದೆ ಮತ್ತು ಜಾಮೀನು ನಿರಾಕರಿಸಲಾಗುತ್ತಿದೆ.

ಭಾರತದ ಸ್ವಾತಂತ್ರ್ಯಕ್ಕಾಗಿ 'ಮಾಡು ಇಲ್ಲವೇ ಮಡಿ' ಸಂಗ್ರಾಮದ ಮೂಲಕ "ಭಾರತ ಬಿಟ್ಟು ತೊಲಗಿ" ಎಂದು ಬ್ರಿಟಿಷ್ ಸಾಮ್ರಾಜ್ಯವಾದಿಗಳನ್ನು ಒತ್ತಾಯಿಸಿ ಹೋರಾಟ ಮಾಡಿದ ನಮ್ಮ ಜನರ ಆಶೋತ್ತರಗಳನ್ನು, ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ನವ-ಉದಾರವಾದಿ ನೀತಿಗಳನ್ನು ಹಠವಾರಿತನದಿಂದ ಅನುಸರಿಸುವ ಮೂಲಕ ನಿರಾಕರಿಸಲು ಬಯಸುತ್ತಿದೆ. ಆರ್ಥಿಕ ಶೋಷಣೆ ಹಾಗೂ ಸಾಮಾಜಿಕ ದಮನದಿಂದ ಮುಕ್ತವಾದ ಭವಿಷ್ಯದ ಕನಸನ್ನು ಅವರು ಕಂಡಿದ್ದರು. ಆತ್ಮನಿರ್ಭರ್ ಭಾರತ್, ಮೇಕ್ ಇನ್ ಇಂಡಿಯಾ ಮುಂತಾದ ಘೋಷಣೆಗಳ ಮರೆಯಲ್ಲಿ ದೇಶವನ್ನು ಮತ್ತು ಅದರ ಜನರನ್ನು ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ವಿದೇಶಿ ಏಕಸ್ವಾಮ್ಯ ಕಾರ್ಪೊರೇಟ್ ಕಂಪನಿಗಳನ್ನೂ ಒಳಗೊಂಡಂತೆ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಒತ್ತೆಯಿಡುತ್ತಿದೆ. ಅದು ನಮ್ಮ ಕಾರ್ಮಿಕರನ್ನು ವಸಾಹತು ಯುಗವನ್ನು ನೆನಪಿಸುವಂತಹ ಗುಲಾಮಗಿರಿಗೆ ಹಾಗೂ ಪರಿಸ್ಥಿತಿಗೆ ನೂಕುತ್ತಿದೆ.

ಕಾರ್ಮಿಕರು ಮತ್ತು ರೈತರ ಮುಖ್ಯ ಪಾತ್ರ

ಆದಕಾರಣ, ನಮ್ಮ ಭಾರತದ ಜನರು ಒಗ್ಗೂಡಿ ಮತ್ತೆ ಎದ್ದೇಳಬೇಕಿದೆ ಮತ್ತು ನಮ್ಮ ಆರ್ಥಿಕತೆ, ಸ್ವಾವಲಂಬನೆಯನ್ನು ಧ್ವಂಸಮಾಡುವ ಮತ್ತು ಜನರ ಮೇಲೆ ಕಷ್ಟಕೋಟಲೆಗಳನ್ನು ಹೇರುವ ವಿನಾಶಕಾರಿ ನೀತಿಗಳಿಂದ ಭಾರತವನ್ನು ಉಳಿಸಬೇಕಿದೆ. ಈ ವಿನಾಶದಿಂದ ದೇಶವನ್ನು ರಕ್ಷಿಸುವ ಹೋರಾಟದಲ್ಲಿ ದೇಶದ ಸಂಪತ್ತನ್ನು ಸೃಷ್ಟಿ ಮಾಡುವ ಕಾರ್ಮಿಕರು ಮತ್ತು ರೈತರು ಮುಖ್ಯ ಪಾತ್ರ ವಹಿಸಬೇಕಾಗಿದೆ.

ಈ ನವ-ಉದಾರವಾದಿ ನೀತಿಗಳು ಮತ್ತವುಗಳ ಪರಿಣಾಮಗಳ ವಿರುದ್ಧ ದೇಶದ ಕಾರ್ಮಿಕ ವರ್ಗವು ಕಳೆದ ಮೂರು ದಶಕಗಳಿಂದ ಹಿಂಸೆ ಮತ್ತು ಕಿರುಕುಳಗಳನ್ನು ಎದುರಿಸುತ್ತಾ ನಿರಂತರವಾಗಿ ಹೋರಾಡುತ್ತಿದೆ. ಈ ಅವಧಿಯಲ್ಲಿ, 20 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳು ಹಾಗೂ ಅಸಂಖ್ಯಾತ ವಲಯ ಮಟ್ಟದ ಮುಷ್ಕರಗಳು ಬಹುತೇಕ ಎಲ್ಲಾ ವಲಯದ ಕಾರ್ಮಿಕರನ್ನು ಒಳಗೊಂಡು ನಡೆದಿವೆ. ರೈತರು ಮತ್ತು ಕೃಷಿ ಕಾರ್ಮಿಕರು ಕಳೆದ ಒಂದು ವರ್ಷದಿಂದ ಕೃಷಿ ಕಾನೂನುಗಳ ವಿರುದ್ಧ, ಎಲ್ಲಾ ರೀತಿಯ ತೊಂದರೆಗಳನ್ನು ಮತ್ತು ಬಿಜೆಪಿ ಸರ್ಕಾರ ಹಾಗೂ ಅದರ



ಮೋದಿ ಸರ್ಕಾರವು ತನ್ನ ನವ-ಉದಾರವಾದಿ ಹಾದಿಯನ್ನು ಬಿಡಲು ಮೊಂಡುತನದಿಂದ ನಿರಾಕರಿಸುತ್ತಿರುವ ಸನ್ನಿವೇಶದಲ್ಲಿ ದೇಶದ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರು ಮತ್ತು ರೈತರು ತಮ್ಮ ಹೋರಾಟ ಇನ್ನೂ ತೀವ್ರಗೊಳ್ಳುವ ಮಟ್ಟಕ್ಕೆ, ಇನ್ನೂ ಎತ್ತರಕ್ಕೆ, ಧಿಕ್ಕರಿಸುವ ಹಾಗೂ ಪ್ರತಿರೋಧಿಸುವ ಹಂತಕ್ಕೆ ಕೊಂಡೊಯ್ಯಬೇಕಿದೆ. ಇದಕ್ಕೆ ಎರಡೂ ಧಾರೆಗಳ ಹೋರಾಟವನ್ನು ಸ್ವತಂತ್ರವಾಗಿ ಹಾಗೂ ಜಂಟಿಯಾಗಿ ತೀವ್ರಗೊಳಿಸಬೇಕಾದ ಅವಶ್ಯಕತೆ ಇದೆ.

ಸಾಕು ಮಾಧ್ಯಮದ (ಗೋದೀ ಮೀಡಿಯದ) ಅಪಪ್ರಚಾರವನ್ನು ಎದುರಿಸುತ್ತಾ ಧೀರೋದಾತ್ತ ಹೋರಾಟವನ್ನು ನಡೆಸುತ್ತಿದ್ದಾರೆ. ಕಾರ್ಮಿಕರ ಜಂಟಿ ವೇದಿಕೆಗಳು ಮತ್ತು ರೈತರ ಜಂಟಿ ವೇದಿಕೆಗಳು ತಮ್ಮ ಕಾರ್ಯಾಚರಣೆಗಳನ್ನು ಒಟ್ಟೊಟ್ಟಿಗೇ ಯತ್ನಿಸುತ್ತಿದ್ದಾರೆ ಮತ್ತು ಪರಸ್ಪರರ ಹೋರಾಟಗಳಿಗೆ ಸೌಹಾರ್ದವನ್ನು ಹಾಗೂ ಭೌತಿಕ ಬೆಂಬಲವನ್ನು ಕೊಡುತ್ತಿದ್ದಾರೆ.

ಆದರೆ, ಮೋದಿ ಸರ್ಕಾರವು ತನ್ನ ನವ-ಉದಾರವಾದಿ ಹಾದಿಯನ್ನು ಬಿಡಲು ಮೊಂಡುತನದಿಂದ ನಿರಾಕರಿಸುತ್ತಿರುವ ಕಾರಣ, ಸಿಐಟಿಯುನ 16 ನೇ ಸಮ್ಮೇಳನದ ಕರೆಯಂತೆ ನಮ್ಮ ಹೋರಾಟವನ್ನು ಇನ್ನೂ ತೀವ್ರಗೊಳಿಸಬೇಕಾದ ಅಗತ್ಯವಿದೆ ಮತ್ತು ಇನ್ನೂ ಎತ್ತರಕ್ಕೆ, ಧಿಕ್ಕರಿಸುವ ಹಾಗೂ ಪ್ರತಿರೋಧಿಸುವ ಹಂತಕ್ಕೆ ಕೊಂಡೊಯ್ಯಬೇಕಿದೆ. ಇದಕ್ಕೆ ಎರಡೂ ಧಾರೆಗಳ ಹೋರಾಟವನ್ನು ಸ್ವತಂತ್ರವಾಗಿ ಹಾಗೂ ಜಂಟಿಯಾಗಿ ತೀವ್ರಗೊಳಿಸಬೇಕಾದ ಅವಶ್ಯಕತೆ ಇದೆ.

ಈ ಕಣ್ಣೋಟದೊಂದಿಗೆ, ಕಾರ್ಮಿಕರ ಬೇಡಿಕೆಗಳು ಮಾತ್ರವಲ್ಲ ಜನಸಾಮಾನ್ಯರ ಪ್ರಮುಖ ಬೇಡಿಕೆಗಳ ಮೇಲೆ ಕೂಡ ಗಮನ ತೆಗೆದುಕೊಂಡು ಸಿಐಟಿಯು ಜೂನ್ 1 ರಿಂದ 10,2021 ರ ವರೆಗೆ ಹತ್ತು ದಿನಗಳ ಪ್ರಚಾರಾಂದೋಲನವನ್ನು ಕೈಗೆತ್ತಿಕೊಂಡಿತು. ಕೋವಿಡ್ ಸಂಬಂಧಿತ ಲಾಕ್ಡೌನ್, ಕರ್ಫ್ಯೂ ಮತ್ತಿತರ ನಿರ್ಬಂಧಗಳು ಇದ್ದಾಗ್ಯೂ ದೇಶಾದ್ಯಂತ ಲಕ್ಷಾಂತರ ಕಾರ್ಮಿಕರು ಈ ಪ್ರಚಾರಾಂದೋಲನದಲ್ಲಿ ಭಾಗವಹಿಸಿದ್ದಾರೆ. ಈಗ ಕೊವಿಡ್ ಪರಿಸ್ಥಿತಿಯು ದೇಶದ ಬಹಳ ಕಡೆ ಗಣನೀಯವಾಗಿ ಉತ್ತಮಗೊಳ್ಳುತ್ತಿರುವುದರಿಂದ ಮತ್ತು ನಿರ್ಬಂಧಗಳನ್ನು ಸಡಿಲಗೊಳಿಸುತ್ತಿರುವುದರಿಂದ, ಮೋದಿ ಸರ್ಕಾರದ ನೀತಿಗಳ ವಿರುದ್ಧ ಕಾರ್ಮಿಕರ ಆಕ್ರೋಶವನ್ನು ಬಿಂಬಿಸಲು ಇನ್ನೂ ದೊಡ್ಡ ರೀತಿಯ ಪ್ರಚಾರಾಂದೋಲನ ಹಾಗೂ ಹೋರಾಟಗಳನ್ನು ಹರಿಬಿಡಬೇಕಿದೆ. ಸರ್ಕಾರದ ಜನವಿರೋಧಿ, ರಾಷ್ಟ್ರವಿರೋಧಿ ನೀತಿಗಳನ್ನು ಎದುರಿಸಲು ಕಾರ್ಮಿಕ ಹೋರಾಟಗಳ ಬೆಂಬಲಕ್ಕೆ ನಿಲ್ಲುವ ಕಾರ್ಮಿಕರ ಬಹುದೊಡ್ಡ ಸಮೂಹವನ್ನು, ರೈತರು ಹಾಗೂ ಇತರ ದುಡಿಯುವ ಜನರ ವಿಭಾಗಗಳನ್ನು ಒಳಗೊಳ್ಳುವುದರ ಮೂಲಕ ಈ ಹೋರಾಟಗಳ ರಣರಂಗವನ್ನು ಬಲಪಡಿಸಬೇಕಿದೆ.


ದೇಶವ್ಯಾಪಿ ಪ್ರಚಾರಾಂದೋಲನ

ನವ-ಉದಾರವಾದಿ ನೀತಿಗಳ ವಿರುದ್ಧ, ಅವುಗಳ ವಿಧ್ವಂಸಕಾರೀ ಪರಿಣಾಮಗಳಿಂದ ದೇಶವನ್ನು ಉಳಿಸುವ ಸಲುವಾಗಿ ಹೋರಾಟವನ್ನು ಮುಂದುವರಿಸುವ ಹಾಗೂ ತೀವ್ರಗೊಳಿಸುವ ಈ ದೃಢ ನಿರ್ಧಾರವನ್ನು ಆಗಸ್ಟ್ 9, 2021 ರಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ದೊಂದಿಗೆ ಸಿಐಟಿಯು ಆಚರಿಸುವ "ಭಾರತ ಉಳಿಸಿ ದಿನ"ವು ಕೂಡ ಬಿಂಬಿಸುತ್ತದೆ. ಪ್ರಚಾರಾಂದೋಲನದ ಮೂಲಕ ಕೈಗೆತ್ತಿಕೊಂಡಿರುವ ಬೇಡಿಕೆಗಳು ಕೇವಲ ಕಾರ್ಮಿಕರ, ರೈತರ ಹಾಗೂ ಕೃಷಿ ಕಾರ್ಮಿಕರ ಬೇಡಿಕೆಗಳಲ್ಲ. ಬೆಲೆ ಏರಿಕೆ, ನಿರುದ್ಯೋಗ, ಉದ್ಯೋಗ ನಷ್ಟಗಳು, ಕೋವಿಡ್-19 ನಿಂದ ಅಸುನೀಗಿದವರ ಕುಟುಂಬಗಳಿಗೆ ಪರಿಹಾರ, ಸಾರ್ವತ್ರಿಕ ಲಸಿಕೆ ನೀಡಿಕೆ ಮುಂತಾದ ಬಹುತೇಕ ಎಲ್ಲಾ ಜನವಿಭಾಗಗಳ ಜ್ವಲಂತ ಸಮಸ್ಯೆಗಳೆಲ್ಲವನ್ನೂ ಬೇಡಿಕೆಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.

ಆಗಸ್ಟ್ 9 ರಂದು ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿನ ಬೃಹತ್ ಪ್ರತಿಭಟನೆಗಳಲ್ಲಿ ಮುಕ್ತಾಯವಾಗುವ ಹದಿನೈದು ದಿನಗಳ ದೀರ್ಘ ಕಾಲದ ಪ್ರಚಾರದ ಉದ್ದೇಶವು ಕಾರ್ಮಿಕರ ಹಾಗೂ ರೈತರ ಸಮಾನ ಸಮಸ್ಯೆಗಳ ಮೇಲೆ ತಳಮಟ್ಟದ ವರೆಗೂ ಜಂಟಿ ಕಾರ್ಯಾಚರಣೆಗಳನ್ನು ಬೆಳೆಸುವುದು ಮತ್ತು ಐಕ್ಯತೆಯನ್ನು ಬಲಪಡಿಸುವುದಾಗಿದೆ.

ಈ ಪ್ರಚಾರಾಂದೋಲನಕ್ಕೆ ತೀವ್ರತರದ ಸಿದ್ಧತೆ ಈಗಾಗಲೇ ಪ್ರಾರಂಭವಾಗಿದೆ. ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಈ ಮೂರೂ ಸಂಘಟನೆಗಳ ರಾಜ್ಯ ಮಟ್ಟದ ಪದಾಧಿಕಾರಿಗಳ ಜಂಟಿ ಸಭೆಗಳು ನಡೆದಿವೆ. ಈ ಸಭೆಗಳನ್ನು ಅನುಸರಿಸಿ ಜಿಲ್ಲಾ ಮಟ್ಟದ ಹಾಗೂ ಸಾಧ್ಯವಾದ ಕಡೆಗಳಲ್ಲಿ ಕೆಳಹಂತಗಳಲ್ಲೂ ಸಭೆಗಳನ್ನು ನಡೆಸಲಾಗುತ್ತಿದೆ. ಈ ಸಭೆಗಳಲ್ಲಿ ಪ್ರಚಾರಗಳು ನಡೆಯುವ ಹಳ್ಳಿಗಳ, ಪಟ್ಟಣಗಳ ಹಾಗೂ ಕೈಗಾರಿಕಾ ಕೇಂದ್ರಗಳ ವಿವರ, ವಿತರಿಸಬೇಕಾದ ಕರಪತ್ರಗಳ, ಪೋಸ್ಟರುಗಳ ಸಂಖ್ಯೆ, ಸಾಮಾಜಿಕ ಮಾಧ್ಯಮಗಳ ಬಳಕೆ, ಬೀದಿಬದಿ/ಗುಂಪು ಸಭೆಗಳ ಸಂಖ್ಯೆ ಮತ್ತು ಆಗಸ್ಟ್ 9 ರಂದು ಕಾರ್ಯಕ್ರಮ ಸಂಘಟಿಸುವ ವಿವರಗಳನ್ನೆಲ್ಲಾ ನಿಖರವಾಗಿ ಯೋಜಿಸಲಾಗಿದೆ. ಸ್ಥಳೀಯ ಜನರ ಬೇಡಿಕೆಗಳನ್ನೂ ಒಳಗೊಳ್ಳಲಾಗುತ್ತಿದೆ. ನಮ್ಮ ಸಮಾಜದಲ್ಲಿ ಬಹುಸಂಖ್ಯಾತರಾಗಿರುವ ಕಾರ್ಮಿಕರು ಮತ್ತು ರೈತರು ಸರ್ಕಾರದ ಜನವಿರೋಧಿ ಹಾಗೂ ರಾಷ್ಟ್ರವಿರೋಧಿ ನೀತಿಗಳ ವಿರುದ್ಧ ಜಂಟಿಯಾಗಿ ಹೋರಾಡುತ್ತಿದ್ದಾರೆ ಮತ್ತು ಮೋದಿ ಸರ್ಕಾರವು ಅನುಸರಿಸುತ್ತಿರುವ ನವ-ಉದಾರವಾದಿ ನೀತಿಗಳಿಗೆ ಪರ್ಯಾಯ ನೀತಿಗಳನ್ನು ಜನರ ಮುಂದೆ ಇಡಲಾಗುವುದು ಎಂಬ ಸಂದೇಶವನ್ನು ಸಾರುವುದು ಈ ಪ್ರಚಾರಾಂದೋಲನದ ಉದ್ದೇಶವಾಗಿದೆ. ಬಿಜೆಪಿಯ ವಿಭಜನಕಾರೀ ಕಾರ್ಯಸೂಚಿಗೆ ವಿರುದ್ಧವಾಗಿ ಜನರನ್ನು ಒಂದುಗೂಡಿಸುವುದು ಇದರ ಉದ್ದೇಶ.

ಕಾರ್ಮಿಕ ಸಂಘಗಳ ಜಂಟಿ ವೇದಿಕೆ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಕೂಡ ಆಗಸ್ಟ್ 9 ರಂದು ಪ್ರತಿಭಟನಾ ಮತಪ್ರದರ್ಶನಗಳಿಗೆ ಮತ್ತು ಅದಕ್ಕೂ ಮುಂಚೆ ಹದಿನೈದು ದಿನಗಳ ಕಾಲ ಇದೇ ರೀತಿಯ ಬೇಡಿಕೆಗಳ ಆಧಾರದಲ್ಲಿ ಪ್ರಚಾರಾಂದೋಲನಕ್ಕೆ ಕರೆ ನೀಡಿರುವುದು ಉತ್ತೇಜನಕಾರಿ ಸಂಗತಿಯಾಗಿದೆ. ಈ ಬಾರಿಯ ಆಗಸ್ಟ್ 9, ಖಂಡಿತವಾಗಿಯೂ ನಮ್ಮ ಸ್ವಾತಂತ್ರ್ಯ ಚಳುವಳಿಯ ಚೇತನವನ್ನು ಮತ್ತೆ ಬೆಳಗಿಸುವಲ್ಲಿ, ಮತ್ತು ಸುಲಿಗೆಕೋರ ನವ-ಉದಾರವಾದಿ ನೀತಿಗಳಿಂದ ಹಾಗೂ ಬಿಜೆಪಿ ಸರ್ಕಾರದ ವಿನಾಶಕಾರಿ ವಿಭಜನಕಾರೀ ಕುತಂತ್ರಗಳಿಂದ ದೇಶವನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತೊಂದು ಮೈಲುಗಲ್ಲಾಗಲಿದೆ. ಒಂದು ಜನಪರ ಪರ್ಯಾಯ ನೀತಿಗಳತ್ತ ಜನರು ಹೆಜ್ಜೆ ಹಾಕಲು ಇದು ದಾರಿ ಮಾಡಿಕೊಡುತ್ತದೆ. ೦



ಕಾರ್ಟೂನ್ ಕೃಪೆ: ಪಿ. ಮಹಮ್ಮದ್


ಇದಕ್ಕಾಗಿ ಅದನ್ನು ಸಹಿಸಿಕೋ!



ಸೆಂಟ್ರಲ್ ವಿಸ್ತಾ ವಿಕಾಸ ಮತ್ತು ಪೆಟ್ರೋಲ್-ಡೀಸೆಲ್-ಎಲ್‌ಪಿಜಿ ಬೆಲೆಯೇರಿಕೆ

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಕೇಂದ್ರ ಸರ್ಕಾರದ ನೀತಿಗಳಲ್ಲಿ ಭಾರಿ ಬದಲಾವಣೆ -ತೀವ್ರಗೊಂಡ ಕಾರ್ಮಿಕ ವರ್ಗದ ಹೋರಾಟ



15 ನೇ ಲೋಕಸಭಾ ಚುನಾವಣೆಗಳ ನಂತರ ಅಧಿಕಾರಕ್ಕೆ ಬಂದ ಯುಪಿಎ-2 ಸರಕಾರ ನೀತಿಗಳಲ್ಲಿ ಯುಪಿಎ-1 ಸರಕಾರಕ್ಕೆ ಹೋಲಿಸಿದರೆ ಭಾರೀ ಬದಲಾವಣೆಗಳು ಕಂಡುಬಂದವು. ಅವೆಲ್ಲ ದುಡಿಯುವ ಜನವಿರೋಧಿ ಬದಲಾವಣೆಗಳೇ ಆಗಿದ್ದವು. ಇವುಗಳು ವಿರುದ್ಧ ಕಾರ್ಮಿಕ ವರ್ಗದ ಐಕ್ಯ ಹೋರಾಟಗಳು ಹರಿದು ಬಂದವು. ಆಳುವ ವರ್ಗಗಳ ಕಾರ್ಮಿಕ ಸಂಘಗಳು ಮತ್ತು ಎಡ ಕಾರ್ಮಿಕ ಸಂಘಗಳು ಜಂಟಿ ವೇದಿಕೆಯಲ್ಲಿ ಒಗ್ಗೂಡಿ ಸಾಮೂಹಿಕ ಕ್ರಮಕ್ಕೆ ಕರೆ ನೀಡುವುದು ಅಂದಿನ ರಾಜಕೀಯ ಸಂದರ್ಭದಲ್ಲಿ ಐತಿಹಾಸಿಕ ಮಹತ್ವದ್ದಾಗಿತ್ತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

ಮೇ 2009 ರಲ್ಲಿ ಹೊಸ ಲೋಕಸಭಾ ಚುನಾವಣೆಗಳು ನಡೆದವು ಮತ್ತು ಯುಪಿಎ –2 ಸರ್ಕಾರ ಮನಮೋಹನ್ ಸಿಂಗ್ ಮತ್ತೆ ಪ್ರಧಾನಿಯಾಗಿ ರಚನೆಯಾಯಿತು. ದುರದೃಷ್ಟವಶಾತ್ ಲೋಕಸಭೆಯಲ್ಲಿ ಎಡ ಶಕ್ತಿಗಳು ದುರ್ಬಲಗೊಂಡವು. ನಂತರ ಹೊಸ ಕೇಂದ್ರ ಸರ್ಕಾರ ಕಾರ್ಮಿಕ ವರ್ಗದ ತೀವ್ರ ಸಂಕಟಗಳಿಗೆ ಕಾರಣವಾಗುವಂತೆ, ತಮ್ಮ ನವ ಉದಾರವಾದಿ ನೀತಿಗಳನ್ನು ತೀವ್ರಗೊಳಿಸಿತು.

ಕಾಂ. ಇ. ಬಾಲಾನಂದನ್ ಅವರ ನಿಧನ

ಭಾರತದ ಟ್ರೇಡ್ ಯೂನಿಯನ್ ಚಳವಳಿಯ ಪ್ರಮುಖ ನಾಯಕ ಮತ್ತು ಸಿಐಟಿಯು ಮಾಜಿ ಅಧ್ಯಕ್ಷರಾದ ಕಾಂ. ಇ.ಬಾಲಾನಂದನ್ ಅವರು 2009 ರ ಜನವರಿ 19 ರಂದು ಕೇರಳದ ಕೊಚ್ಚಿಯಲ್ಲಿರುವ ತಮ್ಮ ಮನೆಯಲ್ಲಿ ಕೊನೆಯುಸಿರೆಳೆದರು. ಅವರು ಮಾರಕ ಕಾಯಿಲೆ ಕ್ಯಾನ್ಸರ್ ನಿಂದ ಬಳಲುತ್ತಿದ್ದರು. ಅವರ ನಿಧನವು ಸಿಐಟಿಯುಗೆ ಮಾತ್ರವಲ್ಲದೆ ಭಾರತದ ಟ್ರೇಡ್ ಯೂನಿಯನ್ ಆಂದೋಲನಕ್ಕೆ ಸಂಪೂರ್ಣ ನಷ್ಟವನ್ನುಂಟುಮಾಡಿತು.

ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಫೆಡರೇಶನ್‌ಗಳ ರಾಷ್ಟ್ರೀಯ ಸಮಾವೇಶ

ಮೊರಾರ್ಜಿ ದೇಸಾಯಿ ಪ್ರಧಾನ ಮಂತ್ರಿಯಾಗಿದ್ದ ಜನತಾ ಸರ್ಕಾರದ ಆಡಳಿತದ ಅವಧಿಯಲ್ಲಿ ಸುಮಾರು 30 ವರ್ಷಗಳ ಹಿಂದೆ ಅತ್ಯಂತ ಕಾರ್ಮಿಕ ವರ್ಗ–ವಿರೋಧಿ ಭೂತಲಿಂಗಂ ಸಮಿತಿಯನ್ನು ರಚಿಸಿದಾಗ ದೆಹಲಿಯ ಬೋಟ್ ಕ್ಲಬ್‌ನಲ್ಲಿ ಕೇಂದ್ರೀಯ ಒಕ್ಕೂಟಗಳು ತಮ್ಮ ರಾಜಕೀಯ ಸಂಯೋಜನೆಗಳನ್ನು ಲೆಕ್ಕಿಸದೆ ಜಂಟಿ ಹೋರಾಟಗಳು ಮತ್ತು ಬೃಹತ್ ರ್‍ಯಾಲಿಯನ್ನು ಆಯೋಜಿಸಿದ್ದವು. ಅದೇ ಇತಿಹಾಸ ಯು.ಪಿ.ಎ. –2 ಸರ್ಕಾರದ ಅವಧಿಯಲ್ಲಿ ಪುನರಾವರ್ತನೆಯಾಯಿತು.

ಕೇಂದ್ರ ಕಾರ್ಮಿಕ ಸಂಘಗಳು ತಮ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಸೆಪ್ಟೆಂಬರ್ 14, 2009 ರಂದು ನವದೆಹಲಿಯ ಮಾವಲಂಕರ್ ಹಾಲ್‌ನಲ್ಲಿ ಜಂಟಿಯಾಗಿ ಐದು ಅಂಶಗಳ ಚಾರ್ಟರ್ ಮೇಲೆ ಸಮಾವೇಶವನ್ನು ಮತ್ತು ಅದನ್ನು ಅನುಸರಿಸಿ 28 ಅಕ್ಟೋಬರ್ 2009 ರಂದು ದೇಶಾದ್ಯಂತ ಪ್ರತಿಭಟನಾ ದಿನಾಚರಣೆ ಆಯೋಜಿಸುವುದರೊಂದಿಗೆ ದೇಶದ ಕಾರ್ಮಿಕ ವರ್ಗವು ಚಳುವಳಿಯ ಹೊಸ ಹಾದಿಯಲ್ಲಿ ಸಾಗಿತು.

ಈ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳ ನಾಯಕತ್ವವು 2009 ರ ಸೆಪ್ಟೆಂಬರ್ 17 ರಂದು ಪ್ರಧಾನ ಮಂತ್ರಿಯನ್ನು ಭೇಟಿಯಾಗಿ ಈ ಐದು ಅಂಶಗಳ ಬೇಡಿಕೆಗಳನ್ನು ಈಡೇರಿಸಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಲು ಒತ್ತಾಯಿಸಿತು. ಆದರೆ ಅದು ಯಾವುದೇ ಪರಿಣಾಮ ಬೀರಲಿಲ್ಲ. ನಂತರ ಡಿಸೆಂಬರ್ 16, 2009 ರಂದು ಸಂಸತ್ತು ಅಧಿವೇಶನದಲ್ಲಿದ್ದಾಗ ಬೃಹತ್ ಧರಣಿಯನ್ನು ಸಂಸತ್ತಿನ ಮುಂದೆ ನಡೆಸುವ ನಿರ್ಧಾರ ಬರಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ಅಧ್ಯಕ್ಷ ಎಂ ಕೆ ಪಂಥೆ, ಆಹಾರ ಧಾನ್ಯಗಳು ಮತ್ತು ಖಾದ್ಯ ತೈಲಗಳ ಬೆಲೆಗಳು ಅಭೂತಪೂರ್ವವಾಗಿ ಏರಿಕೆಯಾಗಲು ಮುಖ್ಯ ಕಾರಣ ಈ ಸರಕುಗಳ ಮುಂಗಡ ವ್ಯಾಪಾರವಾಗಿದೆ ಎಂದರು. ಕೇಂದ್ರ ಸರ್ಕಾರವು ಅಗತ್ಯ ಸರಕುಗಳ ಮುಂಗಡ ಮಾಡುವ ವಹಿವಾಟನ್ನು ತಡೆಯುವ ಬದಲು ರಾಜ್ಯ ಸರ್ಕಾರಗಳನ್ನು ದೂಷಿಸುತ್ತಿದೆ, ಅಕ್ರಮ–ದಾಸ್ತಾನು ಮತ್ತು ಮುಂಗಡ ವಹಿವಾಟನ್ನು ತಡೆಗಟ್ಟಲು ಕಾನೂನುಗಳನ್ನು ರೂಪಿಸಿ ಅವುಗಳನ್ನು ಸರಿಯಾಗಿ ಕಾರ್ಯಗತಗೊಳಿಸದಿದ್ದರೆ ಯಾವುದೇ ಉದ್ದೇಶ ಈಡೇರುವುದಿಲ್ಲ ಎಂದು ಅವರು ವಿಷಾದಿಸಿದರು.. ಅಸಂಘಟಿತ ವಲಯದ ಕಾರ್ಮಿಕರು ಒಟ್ಟು ಕಾರ್ಮಿಕ ವರ್ಗದ 93% ರಷ್ಟಿದ್ದಾರೆ, ಆದರೆ ಅವರ ಹಿತಾಸಕ್ತಿ ಕಾಪಾಡಲು ಯಾವುದೇ ಕಾರ್ಮಿಕ ಕಾನೂನು ಇಲ್ಲ ಎಂದು ಅವರು ಹೇಳಿದರು. ಶ್ರೀಮಂತರಿಗೆ ತೆರಿಗೆ ವಿಧಿಸುವ ಮೂಲಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ನಿಧಿಯನ್ನು ರಚಿಸುವಂತೆ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಸಮಾವೇಶವು ಜಂಟಿ ಘೋಷಣೆಯನ್ನು ಅಂಗೀಕರಿಸಿತು, ಘೋಷಣೆಯ ಆಧಾರದ ಮೇಲೆ ರಾಜ್ಯ ಮಟ್ಟದ ಜಂಟಿ ಸಮಾವೇಶಗಳಿಗೆ ಕರೆ ನೀಡಿತು ಮತ್ತು ಅಕ್ಟೋಬರ್ 28 ರಂದು ದೇಶಾದ್ಯಂತ ಜಂಟಿ ಸಜ್ಜುಗೊಳಿಸುವಿಕೆಯ ಮೂಲಕ ರಾಷ್ಟ್ರೀಯ ಪ್ರತಿಭಟನಾ ದಿನವನ್ನು ಆಚರಿಸಲು ಕರೆ ನೀಡಿತು.

ಹೋರಾಟಕ್ಕೆ ಎತ್ತಿಕೊಂಡ ವಿಷಯಗಳು: (1) ಆಹಾರ ಧಾನ್ಯಗಳು, ತರಕಾರಿಗಳು ಇತ್ಯಾದಿಗಳನ್ನು ಒಳಗೊಂಡಂತೆ ಅಭೂತಪೂರ್ವ ಮತ್ತು ಅನಿಯಂತ್ರಿತ ಬೆಲೆ ಏರಿಕೆ, (2) ಲಕ್ಷಾಂತರ ಕಾರ್ಮಿಕರ ನಿರಂತರ ಉದ್ಯೋಗ ನಷ್ಟ, ಆರ್ಥಿಕ ಹಿಂಜರಿತ ಮತ್ತು ಆರ್ಥಿಕ ಕುಸಿತ, (3) ಕನಿಷ್ಠ ವೇತನ, ಕೆಲಸದ ಸಮಯ ಇತ್ಯಾದಿ ಕಾರ್ಮಿಕ ಸಂಬಂಧಿತ ಕಾನೂನುಗಳ ಉಲ್ಲಂಘನೆ, (4) ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ಅಡಿ ಯೋಜನೆಗಳ ಅಸಮರ್ಪಕ ಸೌಲಭ್ಯಗಳು, (5)ಸಾರ್ವಜನಿಕ ರಂಗದ ಘಟಕಗಳ ಷೇರುಗಳ ಹೂಡಿಕೆ–ಹಿಂದೆಗೆತ

ಮೇ 2009 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ್ತೆ ಅಧಿಕಾರಕ್ಕೆ ಆಯ್ಕೆಯಾದ ಅಂದಿನ ಕೇಂದ್ರ ಸರ್ಕಾರದ ನೀತಿ ಪ್ರಕಟಣೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಈ ವಿಷಯಗಳು ಅತ್ಯಂತ ಮಹತ್ವದ್ದಾಗಿದ್ದವು.

ಈ ಸಮಸ್ಯೆಗಳನ್ನು ಐಎನ್‌ಟಿಯುಸಿ, ಬಿಎಂಎಸ್, ಎಚ್‌ಎಂಎಸ್, ಸಿಐಟಿಯು, ಎಐಟಿಯುಸಿ ಮತ್ತು ಇತರ ಎಡ ಕಾರ್ಮಿಕ ಸಂಘಗಳು ಜಂಟಿಯಾಗಿ ಎತ್ತಿದವು ಎಂಬುದು ಅತ್ಯಂತ ಮಹತ್ವದ್ದಾಗಿದೆ. ಆಳುವ ವರ್ಗಗಳ ಕಾರ್ಮಿಕ ಸಂಘಗಳು ಮತ್ತು ಎಡ ಕಾರ್ಮಿಕ ಸಂಘಗಳು ಜಂಟಿ ವೇದಿಕೆಯಲ್ಲಿ ಒಗ್ಗೂಡಿ ಸಾಮೂಹಿಕ ಕ್ರಮಕ್ಕೆ ಕರೆ ನೀಡುವುದು ಅಂದಿನ ರಾಜಕೀಯ ಸಂದರ್ಭದಲ್ಲಿ ಐತಿಹಾಸಿಕ ಮಹತ್ವದ್ದಾಗಿತ್ತು.

ಅಕ್ಟೋಬರ್ 28 ರಾಜ್ಯ ಮಟ್ಟದ ಜಂಟಿ ಸಮಾವೇಶಗಳು ಮತ್ತು ಪ್ರತಿಭಟನಾ ದಿನಾಚರಣೆಯನ್ನು ದೇಶದ ಎಲ್ಲಾ ಭಾಗಗಳಲ್ಲಿ ಯಶಸ್ವಿಯಾಗಿ ಮತ್ತು ಉತ್ಸಾಹದಿಂದ ಆಚರಿಸಲಾಯಿತು.

ಬಜೆಟ್ 2009– ಕುಖ್ಯಾತ ನವ–ಉದಾರವಾದದ ಮುಂದುವರಿಕೆ

2009–10ರ ಬಜೆಟ್ ಅದೇ ಅಪಖ್ಯಾತಿ ಪಡೆದ ನವ–ಉದಾರವಾದಿ ಮಾದರಿಯ ಮತ್ತೊಂದು ಅನುಸರಣೆಯಾಗಿತ್ತು. ಕೇಂದ್ರ ಬಜೆಟ್ 2009–10, ಸೆಪ್ಟೆಂಬರ್ 15, 2008 ರ ವಾಲ್ ಸ್ಟ್ರೀಟ್ ಕುಸಿತದಿಂದ ಬಂಡವಾಳಶಾಹಿಯ ಆಳವಾದ ಆರ್ಥಿಕ ಬಿಕ್ಕಟ್ಟಿನ ನಂತರ ಸಂಸತ್ತಿನಲ್ಲಿ ಮಂಡಿಸಲಾದ ಮೊದಲ ಬಜೆಟ್ ಆಗಿತ್ತು.

ಬಂಡವಾಳಶಾಹಿಯ ಆಳವಾದ ಆರ್ಥಿಕ ಬಿಕ್ಕಟ್ಟು ಬಂಡವಾಳಶಾಹಿಯ ನವ–ಉದಾರವಾದಿ ಆರ್ಥಿಕ ಮಾದರಿಯನ್ನು ಸಂಪೂರ್ಣವಾಗಿ ಅಪಖ್ಯಾತಗೊಳಿಸಿತು.

ಈ ಆಳವಾದ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ಸರ್ಕಾರವು ಅನುಸರಿಸಲಾಗುವ ಆರ್ಥಿಕ ಕ್ರಮಗಳ ಮಾರ್ಗಸೂಚಿಯನ್ನು ಬಜೆಟ್ ಪೂರ್ವ ಆರ್ಥಿಕ ಸಮೀಕ್ಷೆ ನೀಡಿತ್ತು.

ಆರ್ಥಿಕ ಸಮೀಕ್ಷೆಯು ಹೂಡಿಕೆ–ಹಿಂದೆಗೆತ, ವಿಮೆ ಮತ್ತು ಬ್ಯಾಂಕುಗಳಲ್ಲಿ ಎಫ್‌ಡಿಐ ಹೆಚ್ಚಳ, ಪಿಂಚಣಿ ಖಾಸಗೀಕರಣ, ಕಾರ್ಮಿಕರಿಗೆ 12 ಗಂಟೆಗಳ ಕೆಲಸ, ಸರ್ಕಾರದ ಅನುಮತಿ ಇಲ್ಲದೇ ಕಾರ್ಮಿಕರನ್ನು ರಿಟ್ರೆಂಚ್‌ಮಾಡುವ ಅವಕಾಶ, ಇತ್ಯಾದಿ ನೀತಿ ಕ್ರಮಗಳನ್ನು ಎತ್ತಿ ಹಿಡಿದಿತ್ತು, ಅದೇ ನೀತಿ ನಿರ್ದೇಶನಗಳನ್ನು ಅನುಸರಿಸಿ ಪ್ರಸ್ತುತ ಬಜೆಟ್ ತಯಾರಿಸಲಾಗಿತ್ತು.

ಸಾರ್ವಜನಿಕ ವಲಯದ ಹೂಡಿಕೆ–ಹಿಂದೆಗೆತ ಮಾಡುವುದು ಈ ಬಜೆಟ್‌ನ ಮುಖ್ಯ ಘೋಷಣೆಯಾಗಿತ್ತು. ಆಗ ಹಣಕಾಸು ಸಚಿವರಾಗಿದ್ದ, ಪ್ರಣಬ್ ಮುಖರ್ಜಿ ಅವರು ಹಿಂದೆ ರಾಜ್ಯಸಭೆಯಲ್ಲಿ ಫೆಬ್ರವರಿ 2001 ರಂದು ಬಾಲ್ಕೊ ಹೂಡಿಕೆ ಹಿಂದೆಗೆತದ ಪ್ರಸ್ತಾಪವನ್ನು ಬಿಜೆಪಿ ಸರ್ಕಾರವು ರೂಪಿಸಿದಾಗ ಅದನ್ನು ವಿರೋಧಿಸಿದ್ದರು. ಆ ಸಮಯದಲ್ಲಿ ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿದ್ದ ಪ್ರಣವ ಮುಖರ್ಜಿ, ಫಿಕ್ಕಿ, ಅಸ್ಸೋಚಾಮ್ ಮತ್ತು ಸಿಐಐ ಹೂಡಿಕೆ–ಹಿಂದೆಗೆತ ಮಾಡುವಂತೆ ಒತ್ತಾಯಿಸುತ್ತಿವೆ, ಆದರೆ ಜನರಲ್ಲವೆಂದು ಗಮನ ಸೆಳೆದಿದ್ದರು.

ಹೆಚ್ಚು ಖಂಡನೆ ಒಳಗಾದ ಹೊಸ ಪಿಂಚಣಿ ಯೋಜನೆಯನ್ನು ಅದರ ಮತ್ತಷ್ಟು ವಿಸ್ತರಣೆಯೊಂದಿಗೆ ಹಾಗೇ ಇಡಲಾಯಿತು. ಯು.ಎಸ್.ಎ.ಯಲ್ಲಿಯೇ ಸೆಪ್ಟೆಂಬರ್ 15, 2008 ರ ವಾಲ್ ಸ್ಟ್ರೀಟ್ ಕುಸಿತದ ನಂತರ ಒಂದು ಟ್ರಿಲಿಯನ್ ಡಾಲರ್ ಮೊತ್ತದ ಪಿಂಚಣಿ–ನಿಧಿ ನಾಶವಾಗಿದ್ದನ್ನು ಅಮೇರಿನ್ನರು ಅನುಭವಿಸಿದ್ದರೂ, ಉದ್ಯೋಗಿಗಳ ಕೊಡುಗೆಯ ಒಂದು ಭಾಗವನ್ನು ಒಳಗೊಂಡಂತೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದನ್ನು ಮುಂದುವರೆಸಲಾಯಿತು. ವಿಮೆ ಮತ್ತು ಬ್ಯಾಂಕ್ ಸಾರ್ವಜನಿಕ ವಲಯದಲ್ಲಿ ಉಳಿಯುತ್ತವೆ ಎಂದು ಬಜೆಟ್ ಹೇಳಿತು. ಆದರೆ ಹೆಚ್ಚಿದ ಎಫ್‌ಡಿಐಯಿಂದ ಅವುಗಳ ಸಾರ್ವಜನಿಕ ವಲಯದ ಪಾತ್ರವನ್ನು ದುರ್ಬಲಗೊಳಿಸಲಾಗುವುದಿಲ್ಲ ಎಂಬ ಭರವಸೆ ಇರಲಿಲ್ಲ.

ಬಜೆಟ್ ಪ್ರತಿ ವರ್ಷ 1,20,000 ಉದ್ಯೋಗವಿಲ್ಲದವರಿಗೆ ಉದ್ಯೋಗ ನೀಡುವ ಭರವಸೆ ನೀಡಿತು. ಆದರೆ ಹೇಗೆ ಎಂದು ತಿಳಿಸಲಿಲ್ಲ. ಈ ಬಿಕ್ಕಟ್ಟಿನಿಂದಾಗಿ ವಿವಿಧ ಕ್ಷೇತ್ರಗಳಲ್ಲಿ ಅದಾಗಲೇ ರಿಟ್ರೆಂಚಾದ ಕೆಲವು ಕೋಟಿ ಕಾರ್ಮಿಕರ ಬಗ್ಗೆ ಬಜೆಟ್ ಒಂದು ಮಾತನ್ನೂ ಆಡಲಿಲ್ಲ, ಅವರು ತಮ್ಮ ಉದ್ಯೋಗವನ್ನು ಮರಳಿ ಪಡೆಯುತ್ತಾರೆಯೇ ಎಂದು ಅದು ಉಚ್ಚರಿಸಲಿಲ್ಲ.

ಇದಲ್ಲದೆ, ನವ–ಉದಾರವಾದಿ ಆರ್ಥಿಕತೆಯ ಮುಂದುವರಿಕೆಯಾಗಿ, ಕಸ್ಟಮ್ ಸುಂಕವನ್ನು ಕಡಿಮೆ ಮಾಡುವ ಮೂಲಕ ವಿದೇಶಿ ಆಮದುಗಳಿಗೆ ಮಾರುಕಟ್ಟೆಯನ್ನು ತೆರೆಯಲಾಯಿತು.

ಜಿ.ಡಿ.ಪಿ. ಕಡಿಮೆಯಾದ ಪರಿಸ್ಥಿತಿಯಲ್ಲಿ, ರೋಗಗ್ರಸ್ತ ಸಾರ್ವಜನಿಕ ವಲಯಗಳನ್ನು ಪುನರುಜ್ಜೀವನಗೊಳಿಸಲು ಅಥವಾ ಸಾರ್ವಜನಿಕ ವಲಯದಲ್ಲಿ ಹೊಸ ಕೈಗಾರಿಕೆಗಳನ್ನು ನಿರ್ಮಿಸಲು ಯಾವುದೇ ಪ್ರಸ್ತಾಪಗಳಿರಲಿಲ್ಲ.

ತದ್ವಿರುದ್ಧವಾಗಿ, ಕಾರ್ಪೊರೇಟ್ ತೆರಿಗೆಯನ್ನು ಬದಲಾಗದೆ ಇರಿಸಲಾಯಿತು ಮತ್ತು ಕಡಿತಗೊಳಿಸಲಾಯಿತು. ಆದ್ದರಿಂದ ಕಂದಾಯ ಬಜೆಟ್ ಕೊರತೆಯು ಹೆಚ್ಚಾಗುವಂತಾಯಿತು.

ಅಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಾರ್ಮಿಕರು ರಿಟ್ರೆಂಚ್‌ಮೆಂಟ್ ಎದುರಿಸುವುದಿಲ್ಲವೆನ್ನುವ, ಯಾವುದೇ ಖಚಿತವಾದ ಭರವಸೆ ನೀಡಲಿಲ್ಲ. ಆದಾಯ–ತೆರಿಗೆ ವಿನಾಯಿತಿ ಮಿತಿಯಲ್ಲಿ ಸ್ವಲ್ಪ ಹೆಚ್ಚಳದಿಂದಾಗಿ ನೌಕರರು ಮತ್ತು ಕಾರ್ಮಿಕರು ಸ್ವಲ್ಪ ಸಂತೋಷವನ್ನು ಅನುಭವಿಸಬಹುದು. ಆದರೆ, ಅನಿಯಂತ್ರಿತ ಬೆಲೆ ಏರಿಕೆಯ ಸುರುಳಿಗಳ ಬಗ್ಗೆ ಏನನ್ನೂ ಹೇಳಲಿಲ್ಲ, ಆದರೂ ಬಜೆಟ್ ಹಣದುಬ್ಬರ ಶೂನ್ಯ ಮಟ್ಟಕ್ಕೆ ಬಂದಿದೆ ಎಂದಿತು. ಜನರ ಅನುಭವಕ್ಕಂತೂ ಇದು ಬಂದಿರಲಿಲ್ಲ.

ರೈತರಿಗೆ ಸ್ವಲ್ಪ ಪರಿಹಾರ ಘೋಷಿಸಲಾಗಿದ್ದರೂ, ಭಾರತದ ಕೃಷಿಯ ಬಿಕ್ಕಟ್ಟಿನ ಮೂಲ ಕಾರಣವನ್ನು ಪರಿಹರಿಸಲಿಲ್ಲ. ಬಡವರು ಬಡವಾರಗಿಯೇ ಉಳಿಯುವ, ಬಹುಶಃ ಇನ್ನಷ್ಟು ಬಡತನಕ್ಕೆ ತಳ್ಳಲ್ಪಡುವ ಪರಿಸ್ಥಿತಿ ಉಂಟಾಗುವಂತಿತ್ತು.

ಆದ್ದರಿಂದ, ಈ ನವ–ಉದಾರವಾದಿ ಬಜೆಟ್ ಕಾರ್ಮಿಕರಲ್ಲಿ ಯಾವುದೇ ವಿಶ್ವಾಸವನ್ನು ಹುಟ್ಟುಹಾಕಲಿಲ್ಲ, ಬದಲಿಗೆ ಅವರು ತಮ್ಮ ಜೀವನ ಮತ್ತು ಜೀವನೋಪಾಯದಲ್ಲಿ ಮತ್ತಷ್ಟು ಹಾನಿಗಳನ್ನು ಎದುರಿಸಲು ಸಿದ್ಧರಾಗಿರಬೇಕಿತ್ತು, ಏಕೆಂದರೆ ಆಳವಾದ ಆರ್ಥಿಕ ಬಿಕ್ಕಟ್ಟು ಮುಂದುವರಿಯುತ್ತದೆ ಮತ್ತು ಸರ್ಕಾರವು ಅದನ್ನು ನಿಭಾಯಿಸುವ ಕಾಳಜಿಯನ್ನು ಅಥವಾ ಸಾಮರ್ಥ್ಯವನ್ನು ಹೊಂದಿರಲಿಲ್ಲ.

26% ವಿದೇಶೀ ನೇರ ಬಂಡವಾಳಕ್ಕೆ ಅವಕಾಶ ನೀಡುವ ಪಿಂಚಣಿ ಮಸೂದೆ

ವಿವಿಧ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಹೆಚ್ಚಿಸುವ ಆತುರದಲ್ಲಿದ್ದ ಹೊಸ ಯುಪಿಎ ಸರ್ಕಾರವು, ಸಂಸತ್ತಿನ ಮುಂದೆ ಬಾಕಿ ಉಳಿದಿದ್ದ ಮತ್ತು ಚುನಾವಣಾ ಸರಣಿಯಿಂದಾಗಿ ಅಂಗೀಕರಿಸಲಾಗದಿದ್ದ ಮಸೂದೆಗಳು ಮತ್ತು ನಿಬಂಧನೆಗಳನ್ನು, ಅಂದರೆ. ಪಿಂಚಣಿ, ಬ್ಯಾಂಕಿಂಗ್, ವಿಮೆ, ನವರತ್ನ ಕಂಪನಿಗಳ ಹೂಡಿಕೆ–ಹಿಂದೆಗೆತ, ಇತ್ಯಾದಿಗಳನ್ನು ಕೈಗೆತ್ತಿಕೊಂಡಿತು. ಮತ್ತು ಈಗ, ಹೊಸ ಸರ್ಕಾರವು ಪಿಂಚಣಿ ವಲಯದಲ್ಲಿ ಎಫ್‌ಡಿಐಯನ್ನು 26% ವರೆಗೆ ಅನುಮತಿಸುವ ಉಪಕ್ರಮದೊಂದಿಗೆ ಮುಂದುವರಿಯಿತು. ವಿಮಾ ವಲಯದಲ್ಲಿ ಕಾಲಕಾಲಕ್ಕೆ ಮಾಡಿದ ಎಫ್.ಡಿ.ಐ. ಮಿತಿಯನ್ನು 49% ವರೆಗೆ ಏರಿಸಲು ಅನುಮತಿಸಲಾಯಿತು. ಪ್ರಪಂಚದ ಬಹುತೇಕ ಎಲ್ಲ ದೇಶಗಳ ಜೀವನ, ಜೀವನೋಪಾಯ ಮತ್ತು ಅಂದರೆ, ಆರ್ಥಿಕತೆಯನ್ನು ಛಿದ್ರಗೊಳಿಸಿದ ಭೀಕರ ಬಂಡವಾಳಶಾಹಿ ಬಿಕ್ಕಟ್ಟಿನಿಂದ ಯಾವುದೇ ಪಾಠ ಕಲಿಯಲು ಸರ್ಕಾರ ನಿರಾಕರಿಸಿತು. ವಿಮೆ, ಪಿಂಚಣಿ ಮತ್ತು ಬ್ಯಾಂಕಿಂಗ್‌ನ ಕ್ಷೇತ್ರಗಳಲ್ಲಿ ವಿದೇಶಿ ಆಟಗಾರರಿಗೆ ಅವಕಾಶ ನೀಡುವ ವಿಪರೀತ ಆತುರ ಪ್ರದರ್ಶಿಸಿತು.

ಹೂಡಿಕೆ–ಹಿಂದೆಗೆತ ವಿರುದ್ಧ ವಿಮಾ ನೌಕರರ ಪ್ರತಿಭಟನೆ

ಲೈಫ್ ಇನ್ಶುರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಲ್.ಐ.ಸಿ.) ನೌಕರರು ಲೋಕಸಭೆಯಲ್ಲಿ

ಪುಟ 14 ನೋಡಿ

ಪೆಗಸಸ್ ಗೂಢಚಾರಿಕೆ ಹಗರಣ: ವಿಚಾರಣೆ ನಡೆಸುವುದಾಗಿ ಸುಪ್ರಿಂ ಕೋರ್ಟ್

ಪೆಗಸಸ್ ಗೂಢಚಾರಿಕೆ ಹಗರಣದ ಬಗ್ಗೆ ಹಾಲಿ ಅಥವ ನಿವೃತ್ತ ಸುಪ್ರಿಂ ಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಮತ್ತು ಕೇಂದ್ರ ಸರಕಾರ ತಾನಾಗಲೀ ಅಥವ ತನ್ನ ಯಾವುದೇ ಸಂಸ್ಥೆಯಾಗಲೀ ಈ ಇಸ್ರೇಲೀ ಗೂಢಚರ್ಯೆ ತಂತ್ರಾಂಶದ ಪರವಾನಿಗೆ ಪಡೆದಿದೆಯೇ ಎಂದು ತಿಳಿಸುವಂತೆ ನಿರ್ದೇಶನ ನೀಡಬೇಕು ಎಂದು ಪ್ರಖ್ಯಾತ ಮತ್ತು ಹಿರಿಯ ಪತ್ರಕರ್ತರಾದ ಎನ್.ರಾಮ್ ಹಾಗೂ ಶಶಿ ಕುಮಾರ್ ಸುಪ್ರಿಂ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದು ಅದನ್ನು ಸುಪ್ರಿಂ ಕೋರ್ಟ್ ಮುಂದಿನ ವಾರ ವಿಚಾರಣೆಗೆ ತಗೊಳ್ಳುವ ಸಂಭವವಿದೆ ಎಂದು ವರದಿಯಾಗಿದೆ.

ಈ ಮಿಲಿಟರಿ ಮಟ್ಟದ ಸಾಮೂಹಿಕ ಗೂಢಚಾರಿಕೆ ತಂತ್ರಾಂಶ ಹಲವು ಮೂಲಭೂತ ಹಕ್ಕುಗಳನ್ನು ಕಡಿತಗೊಳಿಸುತ್ತದೆ, ಪ್ರಜಾಪ್ರಭುತ್ವದ ಸ್ತಂಭಗಳಂತಿರುವ ಸ್ವತಂತ್ರ ಸಂಸ್ಥೆಗಳಲ್ಲಿ ನುಸುಳಿ, ದಾಳಿ ಮಾಡಿ ಅಸ್ಥಿರಗೊಳಿಸುವಂತೆ ಕಾಣುತ್ತದೆ. ಎಂದಿರುವ ಈ ಅರ್ಜಿ, ಭಾರತ ಸರಕಾರ ಈ ಅಪಾಯಕಾರೀ ತಂತ್ರಾಂಶವನ್ನು ಪಡೆದಿಲ್ಲ ಎಂದು ದೃಢವಾಗಿ ನಿರಾಕರಿಸದಿರುವುದು ಹಾಗೂ ಈ ಅತ್ಯಂತ ಗಂಭೀರ ಆಪಾದನೆಗಳ ಬಗ್ಗೆ ಯಾವುದೇ ವಿಶ್ವಾಸಾರ್ಹ, ಸ್ವತಂತ್ರ ತನಿಖೆಗೆ ಕ್ರಮ ಕೈಗೊಳ್ಳದಿರುವುದು ಆತಂಕಕಾರಿ ಎಂದು ಹೇಳಿದೆ.

ಇದು ಸಂವಿಧಾನದ ಕಲಮು 19ರ ಅಡಿಯಲ್ಲಿ ವಾಕ್ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಪರಿಣಾಮಕಾರಿ ಚಲಾವಣೆಗೆ ಗಂಭಿರ ಅಡ್ಡಿ ಉಂಟು ಮಾಡಿದೆ.

ಸರಕಾರ ಕಾನೂನಾತ್ಮಕವಾಗಿ ಟೆಲಿಗ್ರಾಫ್ ಕಾಯ್ದೆಯ ಸೆಕ್ಷನ್ 5(2) ಅಡಿಯಲ್ಲಿ ಕಣ್ಗಾವಲು ನಡೆಸಬಹುದು. ಆದರೆ ಇಲ್ಲಿ ಅದನ್ನು ಸಂಪೂರ್ಣವಾಗಿ ಬದಿಗೊತ್ತಲಾಗಿದೆ. ಸಾರ್ವಜನಿಕ ತುರ್ತು ಪರಿಸ್ತಿತಿಯಲ್ಲಿ ಅಥವ ಸಾರ್ವಜನಿಕ ಸುರಕ್ಷಿತತೆಗಾಗಿ ಮಾತ್ರ ಇದನ್ನು ಸಮರ್ಥಿಸಿಕೊಳ್ಳಲು ಸಾಧ್ಯ.

"ಇದೊಂದು ತುರ್ತು ವಿಷಯ, ಭಾರತದಲ್ಲಿ ಮಾತ್ರವಲ್ಲ, ಅಂತರ್ರಾಷ್ಟ್ರೀಯವಾಗಿಯೂ ಅಲೆಗಳನ್ನು ಎಬ್ಬಿಸಿದೆ.." ಎಂದು ಈ ಪತ್ರಕರ್ತರುಗಳ ವಕೀಲರಾದ ಕಪಿಲ್ ಸಿಬಲ್ ಹೇಳಿದಾಗ ಮುಖ್ಯ ನ್ಯಾಯ ಮೂರ್ತಿಗಳು ಮುಂದಿನ ವಾರದಲ್ಲಿ ಒಂದು ದಿನ ಇದನ್ನು ಎತ್ತಿಕೊಳ್ಳುತ್ತೇವೆ ಎಂದಿರುವುದಾಗಿ ವರದಿಯಾಗಿದೆ.

ಇದಲ್ಲದೆ ಇನ್ನೂ ಎರಡು ಅರ್ಜಿಗಳು ಈ ವಿಷಯದಲ್ಲಿ ಸುಪ್ರಿಂ ಕೋರ್ಟಿನ ಸಮ್ಮುಖ ಇವೆ.

ಸಿಪಿಐ(ಎಂ)ನ ರಾಜ್ಯಸಭಾ ಸದಸ್ಯರಾದ ಜಾನ್ ಬ್ರಿಟ್ಟಾಸ್ ಪತ್ರಕರ್ತರು, ರಾಜಕಾರಣಿಗಳು ಮತ್ತು ಸಕ್ರಿಯ ಕಾರ್ಯಕರ್ತರುಗಳ ಮೇಲೆ ಈ ಗೂಢಚಾರಿಕೆಯ ವರದಿಗಳ ಬಗ್ಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಭಾರತ ಸರಕಾರದ ಮಾಹಿತಿ ತಂತ್ರಜ್ಞಾನ ಮಂತ್ರಿ ಆಶ್ವಿನಿ ವೈಷ್ಣವ್ ಸಂಸತ್ತಿನಲ್ಲಿ ನೀಡಿರುವ ಹೇಳಿಕೆ ಈ ತಂತ್ರಾಂಶದಿಂದ ಗೂಢಚಾರಿಕೆ ಮಾಡಲಾಗಿದೆಯೇ ಎಂಬುದನ್ನು ದೃಢಪಡಿಸಲೂ ಇಲ್ಲ, ನಿರಾಕರಿಸಲೂ ಇಲ್ಲ. ಇನ್ನೊಂದೆಡೆಯಲ್ಲಿ ಈ ತಂತ್ರಾಂಶದ ಒಡೆಯರಾದ ಎನ್‌ಎಸ್‌ಓ ದ ಹೇಳಿಕೆಯನ್ನು ಕಣ್ಣುಮುಚ್ಚಿ ಯಾವ ತನಿಖೆಯೂ ಇಲ್ಲದೆ ಒಪ್ಪಿಕೊಂಡಿದೆ. ಆರೋಪಗಳು ಬಹಳ ಗಂಭೀರ ಸ್ವರೂಪದ್ದಾಗಿದ್ದರೂ ಸರಕಾರ ಈ ಬಗ್ಗೆ ಕಾಳಜಿಯನ್ನೇ ತೋರುತ್ತಿಲ್ಲ. ಇದರಿಂದಾಗಿ ನಿರ್ವಾಹವಿಲ್ಲದೆ ನ್ಯಾಯಾಲಯದ ಬಳಿ ಬರಬೇಕಾಗಿ ಬಂದಿದೆ ಎಂದು ಈ ಅರ್ಜಿಯಲ್ಲಿ ಹೇಳಲಾಗಿದೆ.

ತನಿಖೆಗೆ ಒತ್ತಾಯ –14 ಪಕ್ಷಗಳ ಸಭೆಯ ನಿರ್ಧಾರ

ಈ ವಿಷಯ ಸಂಸತ್ತಿನ ಮುಂಗಾರು ಅಧಿವೇಶನದ ಆರಂಭದಿಂದಲೂ ಕಲಾಪಗಳನ್ನು ಬಹಳವಾಗಿ ತಟ್ಟಿದ್ದು, ಈ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಲು ನಿರ್ಧರಿಸಿವೆ. ಜುಲೈ 28ರಂದು ನಡೆದ ಸಭೆಯಲ್ಲಿ ಕಾಂಗ್ರೆಸ್, ಡಿಎಂಕೆ, ಎನ್‌ಸಿಪಿ, ಶಿವಸೇನೆ, ಆರ್‌ಜೆಡಿ, ಎಸ್‌ಪಿ, ಸಿಪಿಐ(ಎಂ), ಸಿಪಿಐ,ಆರ್‌ಎಸ್‌ಪಿ ನ್ಯಾಷನಲ್ ಕಾನ್ಫರೆನ್ಸ್, ಎಎಪಿ, ಐಯುಎಂಎಲ್, ಕೆಸಿಎಂ ಮತ್ತು ವಿಸಿಕೆ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಟಿಎಂಸಿ ಪ್ರತಿನಿಧಿ ಈ ಸಭೆಯಲ್ಲಿ ಇಲ್ಲದಿರುವುದು ಹಲವರ ಹುಬ್ಬೇರಿಸಿದೆ ಎನ್ನಲಾಗಿದೆ.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ಉಚಿತ ಲಸಿಕೆಗೆ ಹಣ ಕೊಡಿ! ಹಲೋ, ಪೆಗಸಸ್‌ಗೆ ಹಣ ಯಾರು ಕೊಡುತ್ತಾರೆ?

ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಫೇಸ್‌ಬುಕ್

ಪೆಟ್ರೋಲಿಯಂ ತೆರಿಗೆಗಳ ಬಹುದೊಡ್ಡ ಭಾಗವನ್ನು ಉಚಿತ ಲಸಿಕೆಗಾಗಿ ಖರ್ಚು ಮಾಡಲಾಗಿದೆಯಂತೆ!

ಹೀಗೆಂದು ಕೇಂದ್ರ ಪೆಟ್ರೋಲಿಯಂ ಮಂತ್ರಿಗಳು ಹೇಳಿದ್ದಾರೆ. ಪೆಟ್ರೋಲಿಯಂ ಉತ್ಪನ್ನಗಳ ದರಗಳು ಸತತವಾಗಿ ಏರುತ್ತಿದ್ದರೂ, ಅವು ಜನಗಳ ಮೇಲೆ ವಿಪರಿತ ಹೊರೆಗಳನ್ನೂ ಹಾಕುತ್ತಿರುವುದು ಸ್ಪಷ್ಟವಾಗಿದ್ದರೂ ಕೇಂದ್ರ ಸರಕಾರ ತಾನು ಏರಿಸಿದ ಸುಂಕಗಳನ್ನು ಇಳಿಸಬೇಕೆಂಬ ಸತತ ಬೇಡಿಕೆಗೆ ಕಿವುಡಾಗಿ ಕೂತಿರುವ ಹಿನ್ನೆಲೆಯಲ್ಲಿ, 2020–21ರಲ್ಲಿ ಈ ಸರಕಾರ ಈ ತೆರಿಗೆಗಳಿಂದಲೇ 3.4ಲಕ್ಷ ಕೋಟಿ ರೂ,ಗಳಷ್ಟು ಆದಾಯವನ್ನು ಪೇರಿಸಿಕೊಂಡಿದೆ ಎಂದು ಸಂಸತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ತಿಳಿಸಿದೆ.

ಬಹುಶಃ ತನ್ನ ಉತ್ತರದಿಂದ ತನೇ ಮುಜುಗರಗೊ<ಡ ಮಂತ್ರಿಗಳು, ಇದರಲ್ಲಿ ದೊಡ್ಡ ಭಾಗವನ್ನು ಉಚಿತ ಲಸಿಕೆ ಕೊಡಲು ಮತ್ತು ಗರೀಬ್ ಕಲ್ಯಾಣ ಯೋಜನಾದ ಮೂಲಕ ಬಡವರಿಗೆ ಪರಿಹಾರ ಒದಗಿಸಲು ಬಲಸಲಾಗಿದೆ ಎಂದಿದ್ದಾರೆ.

ಹಾಗಿದ್ದರೆ ಬಜೆಟಿನಲ್ಲಿ ಲಸಿಕೆಗೆಂದು ಕೊಡಲಾದ 30 ಸಾವಿರ ಕೋಟಿ ರೂ. ಏನಾಯಿತು ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿದೆ.

ಇದಕ್ಕೆ ಸ್ವಲ್ಪವೇ ಮೊದಲು ಕೇಂದ್ರ ಸರಕಾರ ಇದುವರೆಗೆ ಲಸಿಕೆಗೆಂದು ಖರ್ಚು ಮಾಡಿರುವುದು 9725ಕೋಟಿ ರೂ. ಮಾತ್ರ ಎಂದು ವರದಿಯಾಗಿತ್ತು. ಇದರಲ್ಲಿ ಲಸಿಕೆಗೆಂದು 8071 ಕೋಟಿಯಾದರೆ, ಅದನ್ನು ಹಂಚಲು, ಕೊಡಲು ಮಾಡಿದ ಖರ್ಚು 1654ಕೋಟಿ ರೂ. ಅಂದರೆ ಬಜೆಟ್‌ನಲ್ಲಿ ಕೊಟ್ಟ ಹಣದ ಮೂರನೇ ಒಂದರಷ್ಟು ಮಾತ್ರ.

ಹೀಗಿರುವಾಗ ಈ 3.4ಲಕ್ಷ ಕೋಟಿ ರೂ.ಗಳನ್ನು ಲಸಿಕೆಗೆ ಖರ್ಚುಮಾಡಲಾಗಿದೆ ಎಂದರೆ ಅರ್ಥವೇನಿರಬಹುದು?

ಜನಗಳು ಪಡೆಯುತ್ತಿರುವ ಲಸಿಕೆಗಳು ನಿಜವಾಗಿಯೂ ಉಚಿತವೇ? ಅಥವ ಪೆಟ್ರೋಲ್–ಡೀಸೆಲ್– ಅಡುಗೆ ಅನಿಲಕ್ಕೆ ತೆರುವ ತೆರಿಗೆಗಳ ಮೂಲಕ ತೆರುತ್ತಿದ್ದಾರೆಯೇ? ಗೊತ್ತಿಲ್ಲ.

ಈ ನಡುವೆ ಎರಡೂ ಡೋಸ್ ಲಸಿಕೆಗಳನ್ನು ಪಡೆದವರ ಪ್ರಮಾಣ 10%ವನ್ನೂ ತಲುಪಿಲ್ಲ ಎಂದು ವರದಿಯಾಗಿದೆ.

ಕೋವಿಡ್ ನಿಯಂತ್ರಣ ವಿಫಲವಾಗಿದೆ ಎಂದು ಯೋಜಿತ ಅಭಿಯಾನ: ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್

ಕೋವಿಡ್–19 ನಿಯಂತ್ರಿಸಲು ಕೇರಳ ರಾಜ್ಯವು ವಿಫಲವಾಗಿದೆ ಎಂದು ಬಿಂಬಿಸಲು ಯೋಜಿತ ಅಭಿಯಾನಗಳನ್ನು ನಡೆಸಲಾಗುತ್ತಿದೆ ಎಂದು ರಾಜ್ಯದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಆರೋಪಿಸಿದ್ದಾರೆ. ರಾಜ್ಯವು ಕೋವಿಡ್ ನಿಯಂತ್ರಣಕ್ಕೆ ಬಹಳಷ್ಟು ಪ್ರಯತ್ನಗಳನ್ನು ನಡೆಸುತ್ತಿದೆ ಎಂದು ಅವರು ಹೇಳಿದ್ದಾರೆ.

ಸುದ್ದಿಸಂಸ್ಥೆ 'ಎಎನ್‌ಐ' ಜೊತೆ ಮಾತನಾಡುತ್ತ ಅವರು, 'ಕೇರಳದ ವಿರುದ್ಧ ಯೋಜಿತ ಅಭಿಯಾನಗಳು ನಡೆಯುತ್ತಿವೆ. ನಮ್ಮಲ್ಲಿ ಉತ್ತಮ ರಕ್ಷಣಾ ಕಾರ್ಯವಿಧಾನವಿದೆ ಎಂದು ವಿವಿಧ ರಾಜ್ಯಗಳ ತಜ್ಞರೇ ಹೇಳುತ್ತಿದ್ದಾರೆ. ಕೇರಳದ ಶೇಕಡಾ 42 ಜನರು ಪ್ರತಿಕಾಯಗಳನ್ನು ಹೊಂದಿದ್ದಾರೆಂದು ಐಸಿಎಂಆರ್ ನಡೆಸಿದ ಸಿರೊಪ್ರೆವೆಲೆನ್ಸ್ ಅಧ್ಯಯನದಿಂದ ತಿಳಿದುಬಂದಿದೆ. ಕೋವಿಡ್ ತಡೆಗಟ್ಟುವ ಕಾರ್ಯವಿಧಾನವೂ ನಮ್ಮಲ್ಲಿ ಉತ್ತಮವಾಗಿದೆ ಎಂಬುದನ್ನು ತಜ್ಞರು ತಿಳಿಸಿದ್ದಾರೆ' ಎಂದು ಅವರು ಹೇಳಿದರು.

ನಿರ್ಬಂಧಗಳನ್ನು ಸಡಿಲಿಸಿದ ಸಮಯ ಒಟ್ಟು ಪಾಸಿಟಿವಿಟಿ ಪ್ರಮಾಣ ಸುಮಾರು 12%ದಷ್ಟಿತ್ತು, ಆದರೆ ರಾಜ್ಯದ ಆಡಳಿತ ವ್ಯವಸ್ಥೆ ಕೋವಿಡ್ ನಿಯಂತ್ರಣಕ್ಕೆ ವಿಫಲವಾಗಿದೆ ಎಂದು ಬಿಂಬಿಸುವ ಯತ್ನಗಳು ನಡೆಯುತ್ತಿವೆ. ಕೇರಳದ ಪ್ರಸಕ್ತ ವ್ಯವಸ್ಥೆ ಬಹಳಷ್ಟು ಉತ್ತಮವಾಗಿದೆ ಎಂದು ತಜ್ಞರು ಹೇಳುತ್ತಿದ್ದಾರೆ. ರಾಜ್ಯದ ಜನಸಂಖ್ಯಾ ಸಾಂದ್ರತೆ ಅಧಿಕವಾಗಿದೆ ಎಂಬ ಸಂಗತಿಯತ್ತ ಅವರ ಗಮನ ಸೆಳೆದರು.

ಕೋವಿಡ್–19ರ ಡೆಲ್ಟಾ ರೂಪಾಂತರಿ ರಾಜ್ಯದಲ್ಲಿ ಪ್ರಕರಣಗಳ ಏರಿಕೆಗೆ ಕಾರಣ, ರಾಜ್ಯದಲ್ಲಿ ಕೋವಿಡ್–19 ಪರೀಕ್ಷೆಗಳನ್ನು ವ್ಯಾಪಕವಾಗಿ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು. "ಬುಧವಾರ 1.96 ಲಕ್ಷ ಪರೀಕ್ಷೆಗಳು ಹಾಗೂ ಗುರುವಾರ 1.63 ಲಕ್ಷಕ್ಕೂ ಅಧಿಕ ಪರೀಕ್ಷೆಗಳನ್ನು ನಡೆಸಲಾಗಿದೆ. ಎಲ್ಲಾ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಸಂಪರ್ಕಿತರನ್ನು ಪರೀಕ್ಷೆಗೊಳಪಡಿಸಲಾಗುತ್ತಿದೆ" ಎಂದು ಅವರು ಹೇಳಿದರು.

ಐಸಿಎಂಆರ್ ನಡೆಸಿದ ಸಮೀಕ್ಷೆ ಪ್ರಕಾರ ಕೇರಳದ 44.4% ಜನಸಂಖ್ಯೆಯಲ್ಲಿ ಕೋವಿಡ್–19 ಪ್ರತಿಕಾಯಗಳಿವೆ ಇದು ಸೋಂಕಿನಿಂದ ಅಥವಾ ಲಸಿಕೆ ನೀಡಿಕೆಯಿಂದ ಆಗಿದೆ. ರಾಜ್ಯದಲ್ಲಿ ಯಾವುದೇ ಸೋಂಕಿತರು ಆಕ್ಸಿಜನ್ ಅಥವಾ ಹಾಸಿಗೆ ಕೊರತೆಯಿಂದ ಸತ್ತಿಲ್ಲ ಎಂದು ಅವರು ನೆನಪಿಸಿದ್ದಾರೆ.

ಈಗ ದೇಶದ ಸಕ್ರಿಯ ಪ್ರಕರಣಗಳ ಪೈಕಿ 37.1%ದಷ್ಟು ಈ ರಾಜ್ಯದಿಂದಲೇ ಇದ್ದರೂ ಭಾರತದ ಇತರ ಭಾಗಗಳವರು ಈ ಬಗ್ಗೆ ಆತಂಕ ಪಡಬೇಕಾಗಿಲ್ಲ, ಬದಲಾಗಿ ಅದು ಬಾರತದ ಇತರ ಭಾಗಗಳಿಗೆ ಒಂದು ಮಾದರಿಯಾಗಬಲ್ಲದು ಎಂದು ದೇಶದಲ್ಲಿ ವೈರಾಣುಶಾಸ್ತ್ರದ ಕ್ಷೇತ್ರದಲ್ಲಿ ಅತ್ಯಂತ ಗೌರವಾನ್ವಿತ ಪಾಧ್ಯಾಪಕರೂ, ಕೊವಿಡ್ ಕಾರ್ಯಕಾರಿ ಗುಂಪಿನ ಸದಸ್ಯರೂ ಆಗಿರುವ ಪ್ರೊ. ಗಗನ್‌ದೀಪ್ ಕಾಂಗ್ ಹೇಳಿದ್ದಾರೆ. ಅವರ ಪ್ರಕಾರ ಕೇರಳದಲ್ಲಿ ಸೋಂಕಿತರ ಸಂಖ್ಯೆ ಒಟ್ಟು ಚಿತ್ರದ ಸಣ್ಣ ಭಾಗವಷ್ಟೇ.

ಅವರೂ ಇದಕ್ಕೆ ಸಾಕ್ಷಿಯಾಗಿ ಮೇಲೆ ಹೇಳಿದ ಐಸಿಎಂಆರ್‌ನ ಸಿರೊಪ್ರೆವೆಲೆನ್ಸ್ ಅಧ್ಯಯನವನ್ನು ಉಲ್ಲೇಖಿಸಿದ್ದಾರೆ. ಇಲ್ಲಿ ಸೀರೋ ಪಾಸಿಟಿವಿಟಿ ಎನ್ನುವುದು ಕಡಿಮೆ ಇದೆಯೆಂದರೆ, ಜನಗಳನ್ನು ಸೋಕಿನಿಂದ ರಕ್ಷಿಸುವಲ್ಲಿ ಇಲ್ಲಿ ಅತ್ಯುತ್ತಮ ಕೆಲಸ ನಡೆದಿದೆಯೆಂದು ಅರ್ಥ ಎಂದು ಅವರು ಹೇಳುತ್ತಾರೆ.

ಎರಡನೆಯದಾಗಿ, ಇಲ್ಲಿ ಅತೀಹೆಚ್ಚು ಪ್ರಮಾಣದಲ್ಲಿ ಸೋಂಕು ತಪಾಸಣೆ ನಡೆಯುತ್ತಿದೆ, ಅಲ್ಲದೆ ಈ ತಪಾಸಣೆಗಳು ಸೋಂಕಿನ ಪ್ರಮಾಣ ಹೆಚ್ಚಿರುವ ಸ್ಥಳಗಳಲ್ಲಿ ನಡೆಯುತ್ತಿವೆ.

ದೇಶದ ಇತರೆಡೆಗಳವರು ಗಮನಿಸದ ಇನ್ನೆರಡು ಸಂಗತಿಗಳೆಂದರೆ, ಇಲ್ಲಿ 20%ಕ್ಕಿಂತ ಹೆಚ್ಚು ಜನಗಳಿಗೆ ಪೂರ್ಣ ಲಸಿಕೆ ದೊರೆತಿದೆ. ಈ ವೇಳೆಗೆ ರಾಷ್ಟ್ರೀಯ ಸರಾಸರಿ ಕೇವಲ 7.5% ಎಂಬುದನ್ನು ಗಮನಿಸಬೇಕು. ಮತ್ತು ಸಾವಿನ ಪ್ರಮಾಣ 0.5%, ರಾಷ್ಟ್ರೀಯ ಪ್ರಮಾಣ ಇದರ ಸುಮಾರು ಮೂರು ಪಟ್ಟು, ಅಂದರೆ 1.3%. ಆದ್ದರಿಂದ ಸೋಮಕಿತರ ಸಂಖ್ಯೆ ಹೆಚ್ಚಿದ್ದರೂ ಆಸ್ಪತ್ರೆ ಬೆಡ್‌ಗಳು, ಐಸಿಯುಗಳು, ವೆಂಟಿಲೇಟರುಗಳ ಕೊರತೆಯ ಸಮಸ್ಯೆಇಲ್ಲ, ಇನ್ನೂ 50%ದಷ್ಟು ಖಾಲಿ ಇವೆ ಎಂದೂ ಪ್ರೊ.ಗಗನದೀಪ್ ಕಾಂಗ್ ಹೇಳಿದ್ದಾರೆ.

1969ರ ಬ್ಯಾಂಕ್ ರಾಷ್ಟ್ರೀಕರಣ



ರಾಷ್ಟ್ರೀಕರಣದ ಸಮಯದಲ್ಲಿ ಅನೇಕ ಪ್ರಗತಿಪರ ಕಾಂಗ್ರೆಸಿಗರು ಹೇಳಿದ್ದಂತೆ ಬ್ಯಾಂಕ್ ರಾಷ್ಟ್ರೀಕರಣವು ಒಂದು ಸಮಾಜವಾದಿ ಕ್ರಮವಾಗಿರಲಿಲ್ಲ, ಅಥವಾ, ತೀವ್ರ ಎಡಪಂಥೀಯ ಟೀಕಾಕಾರರು ಹೇಳಿದ್ದಂತೆ ಅದೊಂದು ಬಂಡವಾಳಗಾರರಿಗೂ ಅನುಕೂಲವಾಗದ ಕ್ಷುಲ್ಲಕ ಕ್ರಮವೂ ಆಗಿರಲಿಲ್ಲ. ಅದು ವಸಾಹತುಶಾಹಿಯಿಂದ ಬಿಡಿಸಿಕೊಂಡ ನಂತರ ಸಾಮ್ರಾಜ್ಯಶಾಹಿಯಿಂದ ಸಾಕಷ್ಟು ಸ್ವಾಯತ್ತತೆ ಉಳಿಸಿಕೊಳ್ಳುವ ನಿಯಂತ್ರಣಗಳ ನೀತಿಗಳ ಕಾರ್ಯತಂತ್ರದ ಒಂದು ಅವಶ್ಯಕತೆಯಾಗಿತ್ತು. ಅಂತರರಾಷ್ಟ್ರೀಯ ಹಣಕಾಸು ಬಂಡವಾಳವು ಜಾಗತಿಕ'ವಾಗಿ ಮೇಲುಗೈ ಪಡೆಯುತ್ತಿದ್ದಂತೆಯೇ ಈ ಕಾರ್ಯತಂತ್ರ ದುರ್ಬಲಗೊಂಡು ಖಾಸಗೀಕರಣದ ಕೂಗು ಎದ್ದಿದೆ. ತಮ್ಮ ಹಿಂದಿನ ಸಾಮ್ರಾಜ್ಯಶಾಹಿ ಯಜಮಾನರ ಮುಂದೆ ದೈನ್ಯದಿಂದ ಕೈಯೊಡ್ಡಿ ನಿಲ್ಲುವ ವಸಾಹತುಶಾಹಿಯ ನಂತರದ "ವಿಫಲ" ಪ್ರಭುತ್ವಗಳ ಸಾಲಿನಲ್ಲಿ ಭಾರತವೂ ಸೇರಬಾರದು ಎಂದಾದರೆ, ಕೃಷಿ ಕಾನೂನುಗಳಿಗೆ ವಿರೋಧದೊಂದಿಗೆ, ಬ್ಯಾಂಕುಗಳ ಖಾಸಗೀಕರಣದ ವಿರೋಧದ ಹೋರಾಟ ಮಹತ್ವ ಪಡೆಯುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ. ನಾಗರಾಜ್**

1969ರ ಜುಲೈ 19 ರಂದು ದೇಶದ 14 ಪ್ರಮುಖ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಲಾಗಿತ್ತು. ಈ ರಾಷ್ಟ್ರೀಕೃತ ಬ್ಯಾಂಕುಗಳನ್ನು, 52 ವರ್ಷಗಳ ನಂತರ ಖಾಸಗೀಕರಿಸುವ ಬಗ್ಗೆ ಈಗ ಚರ್ಚೆಗಳು ನಡೆಯುತ್ತಿವೆ. ಈ ಚರ್ಚೆಗಳಲ್ಲಿ, ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಿದ್ದೇಕೆ ಎಂಬ ಪ್ರಶ್ನೆ ಉದ್ಭವಿಸುವುದು ಸಹಜವೇ. ಈ ಪ್ರಶ್ನೆಗೆ ಒಂದು ಸಾಧಾರಣವಾದ ಉತ್ತರವನ್ನು ಹೇಳುವುದಾದರೆ, ಕೆಲವು ನಿರ್ದಿಷ್ಟ ಅನುಕೂಲಗಳು ಲಭಿಸುವ ಕಾರಣದಿಂದಾಗಿ ಬ್ಯಾಂಕ್ ರಾಷ್ಟ್ರೀಕರಣ ಮಾಡಲಾಗಿತ್ತು. ಅದು ಸರಿಯಾದ ಕ್ರಮವೂ ಹೌದು ಮತ್ತು ಸೂಕ್ತವಾದ ಕ್ರಮವೂ ಹೌದು. ಬ್ಯಾಂಕ್ ರಾಷ್ಟ್ರೀಕರಣ–ಖಾಸಗೀಕರಣಗಳ ಬಗ್ಗೆ ಚರ್ಚೆ ಮಾಡುವಾಗ, ರಾಷ್ಟ್ರೀಕರಣದ ಒಟ್ಟಾರೆ ಉದ್ದೇಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ಏಕೆಂದರೆ, ರಾಷ್ಟ್ರೀಕರಣದ ಹಿಂದಿದ್ದ ಉದ್ದೇಶ ಮತ್ತು ದೃಷ್ಟಿಕೋನ ಇವುಗಳ ಪ್ರಸ್ತಾಪವಿಲ್ಲದೆ ಬ್ಯಾಂಕ್ ಖಾಸಗೀಕರಣವನ್ನು ಚರ್ಚಿಸುವುದು ಸಾಧ್ಯವಿಲ್ಲ.


THE TIMES OF INDIA

14 TOP BANKS ARE NATIONALISED

Ordinance follows unanimous Cabinet decision

'Syndicate' in disarray as Morarji goes

ರಾಷ್ಟ್ರೀಕರಣದ ಸಮಯದಲ್ಲಿ ಅನೇಕ ಪ್ರಗತಿಪರ ಕಾಂಗ್ರೆಸಿಗರು ಹೇಳಿದ್ದಂತೆ ಬ್ಯಾಂಕ್ ರಾಷ್ಟ್ರೀಕರಣವು ಒಂದು ಸಮಾಜವಾದಿ ಕ್ರಮವಾಗಿರಲಿಲ್ಲ, ಅಥವಾ, ತೀವ್ರ ಎಡಪಂಥೀಯ ಟೀಕಾಕಾರರು ಹೇಳಿದ್ದಂತೆ ಅದೊಂದು ಬಂಡವಾಳಗಾರರಿಗೂ ಅನುಕೂಲವಾಗದ ಕ್ಷುಲ್ಲಕ ಕ್ರಮವೂ ಆಗಿರಲಿಲ್ಲ. ಲೆನಿನ್ ತನ್ನ ಸಾಮ್ರಾಜ್ಯಶಾಹಿ ಸಿದ್ಧಾಂತವನ್ನು ಅಭಿವೃದ್ಧಿಪಡಿಸುವಲ್ಲಿ ವ್ಯಾಪಕವಾಗಿ ಬಳಸಿಕೊಂಡ 'ಡೆರ್ ಫಿನಾನ್ಜ್ ಕ್ಯಾಪಿಟಲ್'(ಹಣಕಾಸು ಬಂಡವಾಳವು) ಗ್ರಂಥದ ಲೇಖಕರೂ ಮತ್ತು ಪ್ರಸಿದ್ಧ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞರೂ ಆದ ರುಡಾಲ್ಫ್ ಹಿಲ್ಫರ್‌ಡಿಂಗ್, ಅರ್ಧ ಡಜನ್ ಉನ್ನತ ಜರ್ಮನ್ ಬ್ಯಾಂಕ್‌ಗಳನ್ನು ರಾಷ್ಟ್ರೀಕರಿಸಿದರೆ, ಜರ್ಮನ್ ಬಂಡವಾಳಶಾಹಿಯ ಬೆನ್ನು ಮುರಿಯುತ್ತದೆ ಎಂದು ವಾದಿಸಿದ್ದರು. ಆದರೆ, ಅದು ನಿರಾಧಾರ ಆಶಾವಾದ. ರಾಷ್ಟ್ರೀಕೃತ ಬ್ಯಾಂಕುಗಳನ್ನು ಬಂಡವಾಳಶಾಹಿಯ ಅಡಿಯಲ್ಲಿ ಬಳಸುವ ವಿಧಾನಕ್ಕಿಂತ ಭಿನ್ನವಾಗಿ ಬಳಸದ ಹೊರತು, ಅವುಗಳನ್ನು ರಾಷ್ಟ್ರೀಕರಣ ಮಾಡುವುದರಿಂದಲೇ ಬಂಡವಾಳಶಾಹಿಯು ಬೆನ್ನನ್ನು ಮುರಿಯಲಾಗದು. ಬಂಡವಾಳಶಾಹಿಯ ಬೆನ್ನು ಮುರಿಯಲೇಬೇಕು ಎಂದಾದರೆ, ಕೇವಲ ಆರು ಬ್ಯಾಂಕುಗಳನ್ನು ಸ್ವಾಧೀನಪಡಿಸಿಕೊಂಡರಷ್ಟೇ ಸಾಲದು; ರಾಷ್ಟ್ರೀಕರಣವು ಅದಕ್ಕಿಂತಲೂ ಹೆಚ್ಚು ವ್ಯಾಪಕವಾಗಿರಬೇಕಾಗುತ್ತದೆ.

ಆದರೆ, ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದರೂ, ಮಾಡದಿದ್ದರೂ ಬಂಡವಾಳಗಾರರಿಗೇನೂ ವ್ಯತ್ಯಾಸವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬರುವುದು ತಪ್ಪಾಗುತ್ತದೆ. ತಮ್ಮ ಒಡೆತನದ ಬ್ಯಾಂಕ್‌ಗಳು ಸಂಗ್ರಹಿಸುವ ಅಗಾಧ ಆರ್ಥಿಕ ಸಂಪನ್ಮೂಲಗಳನ್ನು(ಠೇವಣಿಗಳನ್ನು) ತಮ್ಮ ವ್ಯವಹಾರಗಳಿಗೆ ಬಳಸಿಕೊಳ್ಳುವ ಅವಕಾಶಗಳು ತಪ್ಪುವುದು ಖಂಡಿತಾ ಅವರಿಗೊಂದು ಹಿನ್ನಡೆ, ಅದನ್ನು ಅವರು ಉಗ್ರವಾಗಿ ಪ್ರತಿರೋಧಿಸುತ್ತಾರೆ.

ವಸಾಹತುಶಾಹಿಯಿಂದ ಬಿಡಿಸಿಕೊಂಡ ನಂತರ ಮೂರನೇ ಜಗತ್ತಿನ ಹಲವು ದೇಶಗಳ ಮಾದರಿಯಲ್ಲಿ, ಭಾರತವೂ ಸಹ ತನ್ನ ನಿಯಂತ್ರಣ ನೀತಿಗಳ ಕಾರ್ಯತಂತ್ರದ ಒಂದು ಅವಶ್ಯಕತೆಯಾಗಿ ಬ್ಯಾಂಕ್ ರಾಷ್ಟ್ರೀಕರಣವನ್ನು ಕೈಗೊಂಡಿತ್ತು. ವಸಾಹತುಶಾಹಿ–ವಿರೋಧಿ ಹೋರಾಟದ ನಾಯಕತ್ವದಲ್ಲಿದ್ದ ಬೂರ್ಜ್ವಾ ವರ್ಗವನ್ನು ಅಲುಗಾಡಿಸಲಾಗದ ದೇಶಗಳಲ್ಲಿ ಆ ಹೋರಾಟದಿಂದಲೇ ನಿಯಂತ್ರಣ ನೀತಿಗಳ ಕಾರ್ಯತಂತ್ರವು ಬೆಳೆದು ಬಂದಿತು. ಹಾಗಾಗಿ, ವಸಾಹತು ವ್ಯವಸ್ಥೆಯನ್ನು ಕಳಚಿಹಾಕಿದ ನಂತರದ ಅಭಿವೃದ್ಧಿ ಕಾರ್ಯತಂತ್ರವು ಸಮಾಜವಾದವನ್ನು ನಿರ್ಮಿಸುವ ಗುರಿ ಹೊಂದಿರಲಿಲ್ಲ; ಬದಲಿಗೆ, ಸಾಮ್ರಾಜ್ಯಶಾಹಿಯಿಂದ ಸ್ವಲ್ಪಮಟ್ಟಿನ ಅಂತರ ಕಾಯ್ದುಕೊಂಡು ಸ್ವಾಯತ್ತತೆಯಿರುವ ಮತ್ತು ಅದಕ್ಕಾಗಿಯೇ ದೇಶದೊಳಗೆ ಸಾಕಷ್ಟು ವ್ಯಾಪಕ ನೆಲೆಯಿರುವ ಒಂದು ಬಂಡವಾಳಶಾಹಿಯನ್ನು ಕಟ್ಟುವ ಗುರಿ ಹೊಂದಿತ್ತು. ರೈತ ಕೃಷಿ ಮತ್ತು ಕಿರು ಉತ್ಪಾದನೆಯನ್ನು ಅತಿಕ್ರಮಿಸುವ ಮತ್ತು ನಾಶಪಡಿಸುವ ತನ್ನ ಎಂದಿನ ಚಾಳಿಗೆ ಬದಲಾಗಿ, ತನ್ನ ನಾಳೆಯ ಶ್ರೇಯೋಭಿವೃದ್ಧಿಯ ಸಲುವಾಗಿ ಬಂಡವಾಳಶಾಹಿಯು, ದೇಶದ ರೈತ ಕೃಷಿ ಮತ್ತು ಕಿರು–ಉತ್ಪಾದನೆಯನ್ನು ತಕ್ಕ ಮಟ್ಟಿಗೆ ರಕ್ಷಿಸಿತು ಮತ್ತು ಉತ್ತೇಜಿಸಿತು.

ಇದೇ ವಿವರಣೆಯನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಭಿವೃದ್ಧಿಯ ಈ ಕಾರ್ಯತಂತ್ರವು ಸಮಾಜವಾದವನ್ನು ನಿರ್ಮಿಸುವ ಗುರಿ ಹೊಂದಿರಲಿಲ್ಲವಾದರೂ, ಅದು ನಿರ್ಮಿಸಲು ಸಹಾಯ ಮಾಡುತ್ತಿದ್ದ ಬಂಡವಾಳಶಾಹಿಯು ರೂಢ ಬಂಡವಾಳಶಾಹಿಯೂ ಆಗಿರಲಿಲ್ಲ. ಈ ಕಾರ್ಯತಂತ್ರದ ಮುಖ್ಯ ಲಕ್ಷಣವೆಂದರೆ, ವಿದೇಶಿ ಮಹಾನಗರೀಯ ಬಂಡವಾಳದಿಂದ ಸ್ವಲ್ಪ ಮಟ್ಟಿನ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವುದು ಮತ್ತು ಹೊರಗಿನ ಬಂಡವಾಳಶಾಹಿ ವಲಯದ ಅತಿಕ್ರಮಣದ ವಿರುದ್ಧ ಕಿರು ಉತ್ಪಾದನೆಗೆ ಮತ್ತು ರೈತ ಕೃಷಿಗೆ ಒಂದು ಮಟ್ಟದ ರಕ್ಷಣೆ ಒದಗಿಸುವುದು. ಈ ಬಂಡವಾಳಶಾಹಿಯು ಬೆಳೆದು ಬರುತ್ತಿರುವಾಗ ಅದರೊಳಗೆ ರೈತ ಮತ್ತು ಭೂಮಾಲೀಕ ಬಂಡವಾಳಶಾಹಿಯ ಮಿಶ್ರಣದ ಬಂಡವಾಳಶಾಹಿ ಪ್ರವೃತ್ತಿಯೂ ಇತ್ತು. ಇದೆಲ್ಲವನ್ನೂ ಕಾರ್ಯರೂಪಕ್ಕೆ ತರುವಲ್ಲಿ, ಪ್ರಭುತ್ವವು ಒಬ್ಬ ಹೂಡಿಕೆದಾರನಾಗಿ, ನಿಬಂಧಕನಾಗಿ ಮತ್ತು ನಿಯಂತ್ರಕನಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡದ್ದು ಗಮನಾರ್ಹವಾಗಿತ್ತು. ರೂಢ ಬಂಡವಾಳಶಾಹಿಯೊಂದಿಗೆ ಹೊಂದಿದ್ದ ಭಿನ್ನತೆಯಿಂದಾಗಿ, ಅಭಿವೃದ್ಧಿಯ ಈ ಕಾರ್ಯತಂತ್ರವನ್ನು ಜವಾಹರಲಾಲ್ ನೆಹರು ಅವರ "ಸಮಾಜವಾದಿ ಮಾದರಿಯ ಸಮಾಜ ನಿರ್ಮಾಣ" ಎಂಬ ಪದಗುಚ್ಛದಿಂದ ಹಿಡಿದು ಮಿಖೆಲ್ ಕಲೆಕಿ ಅವರ "ಮಧ್ಯಂತರ ಆಳ್ವಿಕೆ" ಎಂಬ ಪದಗುಚ್ಛದ ವರೆಗೆ ಅನೇಕ ಹೆಸರುಗಳಿಂದ ಕರೆಯಲಾಗಿದೆ. ಎಡಪಂಥೀಯ ವಿಮರ್ಶೆಯ ಪ್ರಕಾರ, ಈ ಕಾರ್ಯತಂತ್ರವು ರೂಢ ಬಂಡವಾಳಶಾಹಿಗಿಂತ ಭಿನ್ನವಾಗಿಲ್ಲ ಎಂದಲ್ಲ, ಈ ವಿದ್ಯಮಾನವು ನಿರಂತರವಾಗಲು ಸಾಧ್ಯವಿಲ್ಲ, ಇಂದಲ್ಲ ನಾಳೆ ಅದು ರೂಢ ಬಂಡವಾಳಶಾಹಿಯಾಗಿ ರೂಪಾಂತರಗೊಳ್ಳುತ್ತದೆ (ಇದು ನಿಜಕ್ಕೂ ಸಂಭವಿಸುತ್ತಿದೆ).

ನಿರ್ಣಾಯಕವಾದ ಒಂದು ಅಂಶವೆಂದರೆ, ರೂಢ ಬಂಡವಾಳಶಾಹಿಯತ್ತ ಸಾಗುವ ಚಲನೆಯಲ್ಲಿ, ಅಭಿವೃದ್ಧಿ ಕಾರ್ಯತಂತ್ರದ ಭಾಗವಾಗಿ ವಿದೇಶಿ ಮಹಾನಗರೀಯ ಬಂಡವಾಳಕ್ಕೆ ಎದುರಾಗಿ ಹೊಂದಿರುವ ಅಷ್ಟೊ ಇಷ್ಟೊ ಸ್ವಾಯತ್ತತೆಯನ್ನೂ ತ್ಯಾಗಮಾಡಬೇಕಾಗುತ್ತದೆ. ಅಂದರೆ, ಇದರರ್ಥ, ಸಾಮ್ರಾಜ್ಯಶಾಹಿಯೊಂದಿಗೆ ತಳುಕು ಹಾಕಿಕೊಂಡು ಅಸಮತ್ವಗಳನ್ನು ಬೆಳೆಸುವ ಅಭಿವೃದ್ಧಿಯ ದಿಕ್ಪಥವನ್ನು ಅನುಸರಿಸಬೇಕಾಗುತ್ತದೆ, ಇದು ವಸಾಹತುಶಾಹಿ–ವಿರೋಧಿ ಹೋರಾಟದ ಹೆಬ್ಬಯಕೆಯಾಗಿದ್ದ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯನ್ನು ಹಾಳುಗೆಡವುತ್ತದೆ.

ನಿಯಂತ್ರಣ ನೀತಿಗಳ ಕಾರ್ಯತಂತ್ರವನ್ನು ನಿರೂಪಿಸಿದ ನಂತರ, ಬ್ಯಾಂಕ್ ರಾಷ್ಟ್ರೀಕರಣವು ಸ್ವಲ್ಪ ತಡವಾಗಿ ಜಾರಿಗೆ ಬಂದರೂ ಸಹ, ಇದು ಆ ಕಾರ್ಯತಂತ್ರಕ್ಕೆ ನಿರ್ಣಾಯಕ ಅಂಶವಾಗಿತ್ತು. ಸಾಲ ನೀಡಿಕೆ ಎಂಬುದು ಬಂಡವಾಳದ ಮೇಲಿನ ನಿಯಂತ್ರಣವನ್ನು ತೋರಿಸುತ್ತದೆ. ಆದ್ದರಿಂದ ಬ್ಯಾಂಕ್ ಸಾಲಗಳು ಬೇರೆ ಬೇರೆ ಸಾಮಾಜಿಕ ಗುಂಪುಗಳಿಗೆ, ಪ್ರದೇಶಗಳಿಗೆ ಮತ್ತು ವಿವಿಧ ವಲಯಗಳಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ವಿತರಣೆಯಾಗುತ್ತವೆ ಎಂಬುದು ದೇಶವು ಅನುಸರಿಸುತ್ತಿರುವ ಅಭಿವೃದ್ಧಿಯ ದಿಕ್ಪಥದ ಸ್ವರೂಪ ಎಂಥದ್ದು ಎಂಬುದನ್ನು ತಿಳಿಸುತ್ತವೆ. ರೂಢ ಬಂಡವಾಳಶಾಹಿ ಆಳ್ವಿಕೆಗಳಿಗಿಂತ ಭಿನ್ನವಾಗಿ, ನಿಯಂತ್ರಣ ನೀತಿಗಳ ಆಳ್ವಿಕೆಯಲ್ಲಿ, ಪ್ರಭುತ್ವಕ್ಕೆ ಬಂಡವಾಳಶಾಹಿಯನ್ನು ನಿಯಂತ್ರಿಸುವಲ್ಲಿ ಒಂದು ನಿರ್ಣಾಯಕ್ ಪಾತ್ರವಿರುವುದರಿಂದ, ಹಾಗೂ ಕಿರು ಉತ್ಪಾದನೆ ಮತ್ತು ರೈತ ಕೃಷಿಯನ್ನು ರಕ್ಷಿಸುವ ಸಲುವಾಗಿ, ವಿದೇಶಿ ಮಹಾನಗರೀಯ ಬಂಡವಾಳದ ಎದುರು ದೇಶದ ಬಂಡವಾಳಶಾಹಿಯು ತಕ್ಕ ಮಟ್ಟಿನ ಸ್ವಾಯತ್ತತೆ ಹೊಂದಿರುವುದರಿಂದ, ಸಾಲ ವಿತರಣೆಯ ಮೇಲೆ ಹತೋಟಿಯು ಒಂದು ಪ್ರಮುಖ ನೀತಿ ಸಾಧನವಾಗುತ್ತದೆ. ಈ ಸಾಧನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದಾದರೆ ಬ್ಯಾಂಕ್ ರಾಷ್ಟ್ರೀಕರಣವು ಅವಶ್ಯವಾಗುತ್ತದೆ. ವಾಸ್ತವವಾಗಿ, ಸಾಲ ವಿತರಣೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು ಕೆಲ ಕಾಲ ಬ್ಯಾಂಕುಗಳ ಮೇಲೆ "ಸಾಮಾಜಿಕ ನಿಯಂತ್ರಣ" ನೀತಿಯನ್ನು ಪ್ರಯೋಗಿಸಿತು. ಈ ಪ್ರಯೋಗವು ಫಲ ನೀಡದ ಕಾರಣದಿಂದಾಗಿ ಮತ್ತು ನಿಯಂತ್ರಣದ ಏಕೈಕ ಪರಿಣಾಮಕಾರಿ ಸಾಧನವೆಂದರೆ ರಾಷ್ಟ್ರೀಕರಣವೇ ಎಂಬುದನ್ನು ಮನಗಂಡ ಸರ್ಕಾರವು ಬ್ಯಾಂಕ್ ರಾಷ್ಟ್ರೀಕರಣಕ್ಕೆ ಮುಂದಾಯಿತು.

1969ರ ಬ್ಯಾಂಕ್ ರಾಷ್ಟ್ರೀಕರಣ ಮತ್ತು ತದನಂತರದ 1980ರ ಸಣ್ಣ ಖಾಸಗಿ ಬ್ಯಾಂಕುಗಳ ಎರಡನೇ ಸುತ್ತಿನ ರಾಷ್ಟ್ರೀಕರಣವು ದೇಶದ ಮೇಲೆ ಗಾಢವಾದ ಪರಿಣಾಮ ಬೀರಿದೆ. ರಾಷ್ಟ್ರೀಕರಣವು ಕೃಷಿ ಮತ್ತು ಕಿರು ಉತ್ಪಾದನೆಗೆ ಸಾಂಸ್ಥಿಕ ಸಾಲಗಳು ಲಭ್ಯವಾಗುವಂತೆ ಮಾಡಿತು, ಲೇವಾದೇವಿದಾರರು ರೈತರ ಮೇಲೆ ಹೊಂದಿದ್ದ ಹಿಡಿತವನ್ನು ಸಡಿಲಗೊಳಿಸಿತು, ದೇಶಾದ್ಯಂತ ಬ್ಯಾಂಕಿಂಗ್ ಜಾಲವನ್ನು ಹರಡಿತು, ಮತ್ತು, ಉತ್ಪಾದಕ ಬಂಡವಾಳ ಮತ್ತು ಸಟ್ಟಾಕೋರ ಬಂಡವಾಳಗಳ ನಡುವೆ ಒಂದು ಗೋಡೆಯನ್ನು ನಿರ್ಮಿಸುವ ಮೂಲಕ ರೂಢ ಬಂಡವಾಳಶಾಹಿಯ ಆಳ್ವಿಕೆಯಲ್ಲಿ ಸಟ್ಟಾ ವ್ಯಾಪಾರದ ಚಟುವಟಿಕೆಗಳಿಗೆ ಸಾಮಾನ್ಯವಾಗಿ ದೊರೆಯುತ್ತಿದ್ದ ಸಾಲಗಳು ದೊರೆಯದಂತೆ ನೋಡಿಕೊಳ್ಳಲು ಪ್ರಯತ್ನಿಸಿತು. ರೈತಾಪಿ ವರ್ಗದ ಬಲಾಢ್ಯರಿಗೆ ಬ್ಯಾಂಕ್ ಸಾಲಗಳ ಸಿಂಹಪಾಲು ಸಿಕ್ಕಿತು, ನಿಜ. ಆದರೆ, ಸಾಂಸ್ಥಿಕ ಸಾಲಗಳ ವಿತರಣೆಯು ಸಾಮಾಜಿಕವಾಗಿ ಹಿಂದೆಂದಿಗಿಂತಲೂ ಹೆಚ್ಚು ವ್ಯಾಪಕವಾಯಿತು. ವಾಸ್ತವವಾಗಿ, ಇಡೀ ಬಂಡವಾಳಶಾಹಿ ಜಗತ್ತಿನಲ್ಲೇ ಎಲ್ಲೂ ಇಲ್ಲದಷ್ಟು ಹೆಚ್ಚು ವ್ಯಾಪಕವಾಯಿತು. ಹಸಿರು ಕ್ರಾಂತಿಯ ಪರಿಸರ ಪರಿಣಾಮಗಳ ಬಗ್ಗೆ ಏನೇ ಭಿನ್ನಾಭಿಪ್ರಾಯಗಳಿರಲಿ, ವಿದೇಶಿ ಮಹಾನಗರೀಯ ಬಂಡವಾಳಶಾಹಿ ಶಕ್ತಿಗಳು ಪಾಲಿಸುವ "ಆಹಾರ ಸಾಮ್ರಾಜ್ಯಶಾಹಿ"ಯ ಹಿಡಿತದಿಂದ ಭಾರತವನ್ನು ಮುಕ್ತಗೊಳಿಸುವುದು, ಹಸಿರು ಕ್ರಾಂತಿ ಇಲ್ಲದೆ ಸಂಭವಿಸಲು ಸಾಧ್ಯವಿರಲಿಲ್ಲ ಮತ್ತು ರಾಷ್ಟ್ರೀಕರಣವಿಲ್ಲದೆ ಈ ಹಸಿರು ಕ್ರಾಂತಿಯು ಸಂಭವಿಸುವುದು ಸಾಧ್ಯವಿರಲಿಲ್ಲ.

ಅಂತರರಾಷ್ಟ್ರೀಯ ಹಣಕಾಸು ಬಂಡವಾಳವು ಜಾಗತಿಕವಾಗಿ ಮೇಲುಗೈ ಪಡೆಯುತ್ತಿದ್ದಂತೆಯೇ ನಿಯಂತ್ರಣಗಳ ನೀತಿ–ಕಾರ್ಯತಂತ್ರವನ್ನು ದುರ್ಬಲಗೊಳಿಸಲಾಯಿತು. ಜಾಗತಿಕ ಹಣಕಾಸು ಬಂಡವಾಳದೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದ ಭಾರತದ ಹಿರಿ ಬೂರ್ಜ್ವಾವರ್ಗವು ವಿದೇಶಿ

ಪುಟ 14 ನೋಡಿ



ಕೆಲ ಕಾಲ ಬ್ಯಾಂಕುಗಳ ಮೇಲೆ "ಸಾಮಾಜಿಕ ನಿಯಂತ್ರಣ" ನೀತಿಯನ್ನು ಪ್ರಯೋಗಿಸಿತು. ಈ ಪ್ರಯೋಗವು ಫಲ ನೀಡದ ಕಾರಣದಿಂದಾಗಿ ಮತ್ತು ನಿಯಂತ್ರಣದ ಏಕೈಕ ಪರಿಣಾಮಕಾರಿ ಸಾಧನವೆಂದರೆ ರಾಷ್ಟ್ರೀಕರಣವೇ ಎಂಬುದನ್ನು ಮನಗಂಡ ಸರ್ಕಾರವು ಬ್ಯಾಂಕ್ ರಾಷ್ಟ್ರೀಕರಣಕ್ಕೆ ಮುಂದಾಯಿತು.

ಕಿರು ಉತ್ಪಾದನೆಯ ಮೇಲೆ ಮತ್ತು ರೈತ ಕೃಷಿಯ ಮೇಲೆ ಅತಿಕ್ರಮಣ, ನಿಬಂಧನೆ ಮತ್ತು ನಿಯಂತ್ರಣ ಹೊಣೆಯಿಂದ ಪ್ರಭುತ್ವದ ನಿರ್ಗಮನದ ತತ್ವಕ್ಕೆ ಅಮಟಿಕೊಂಡಿರುವ ಆಳ್ವಿಕೆಯ ಅಡಿಯಲ್ಲಿ ಖಾಸಗೀಕರಣದ ಕೂಗು ಗಟ್ಟಿಗೊಂಡಿದೆ.



ಅಯೋಧ್ಯೆಯ ಟ್ರಸ್ಟ್ ನಲ್ಲಿ ಗೋಲ್‌ಮಾಲ್.........

ಪುಟ 8 ರಿಂದ

ಅವರು, ಚಂಪತ್ ರಾಯ್ ತನ್ನ ಸಹೋದರರಿಗೆ, ಅನಿವಾಸಿ ಭಾರತೀಯರಾದ ಅಲ್ಕಾ ಲಾಹೋಟಿ ಒಡೆತನದ ಗೋಶಾಲೆಯ ಸಾವಿರ ಚದರ ಮೀಟರ್ ಭೂಮಿಯನ್ನು ಕಸಿದುಕೊಳ್ಳಲು ಸಹಾಯ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಅಲ್ಕಾ ಅವರು ಸಹ ಬಿಜೆಪಿಯ ಬಹುದೊಡ್ಡ ಬೆಂಬಲಿಗರು. ಅತಿಕ್ರಮಣ ಮಾಡಿದ ಜಾಗವನ್ನು ಖಾಲಿ ಮಾಡಿಸಲು ಲಹೋಟಿ ಯವರು 2018ರಿಂದ ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಉತ್ತರಪ್ರದೇಶದ ಮುಖ್ಯಮಂತ್ರಿಗಳಾದ ಯೋಗಿ ಆದಿತ್ಯನಾಥ್ ಅವರಲ್ಲಿ ಸಹಾಯಕ್ಕಾಗಿ ಮನವಿ ಕೂಡ ಮಾಡಿದ್ದಾರೆ.

ಆರೋಪದ ಬಗ್ಗೆ ತಿಳಿದ ತಕ್ಷಣ ಚಂಪತ್ ರಾಯ್ ಅವರ ಸಹೋದರರಲ್ಲಿ ಒಬ್ಬರಾದ ಸಂಜಯ ಬನ್ಸಲ್ ಅವರು ವಿನೀತ್ ನರೇನ್, ಲಾಹೋಟಿ ಮತ್ತು ಇನ್ನೊಬ್ಬ ವ್ಯಕ್ತಿಯ ವಿರುದ್ಧ ಪೊಲೀಸರಲ್ಲಿ ಕೇಸು ದಾಖಲಿಸಿದರು. ದೂರು ನೀಡಿದ ಅರ್ಧ ದಿನದಲ್ಲಿ ಪೊಲೀಸರು ಈ ಮೂವರ ಮೇಲೆ ಒಟ್ಟು 18 ಆರೋಪಗಳ ಪಟ್ಟಿಮಾಡಿ "ಧರ್ಮದ ಹೆಸರಲ್ಲಿ ದ್ವೇಷವನ್ನು ಹೆಚ್ಚಿಸುತ್ತಿದ್ದಾರೆ" ಎಂದು ಹೇಳಿ ಎಫ್.ಐ.ಆರ್. ದಾಖಲಿಸಿದ್ದಾರೆ. ಬಿಜೆಪಿ ಬೆಂಬಲಿಗರಿಗೆ ದುಷ್ಕೃತ್ಯ ಮಾಡಲು ಯಾವುದೇ ಹೆದರಿಕೆಯಿಲ್ಲ. ಸರಕಾರ ಯಾವುದೇ ಸಂದರ್ಭದಲ್ಲಿ ತಮ್ಮ ಬೆನ್ನಿಗಿದೆ ಎಂಬ ಸಂಪೂರ್ಣ ಭರವಸೆ ಅವರಿಗೆ ಇದೆ. ಆದರೆ ಸರಕಾರದ ಟೀಕಾಕಾರರು ವಿರೋಧಿಗಳ ವಿರುದ್ಧ ತಕ್ಷಣದ ಪ್ರತೀಕಾರ ಕೈಗೊಳ್ಳಲಾಗುತ್ತದೆ. ಇದು ಬಿಜೆಪಿ ಸರಕಾರ ಸಾಮಾನ್ಯವಾಗಿ ಮಾಡುವ ಕೆಲಸದ ವಿಧಾನ.

ಟ್ರಸ್ಟ್ ನಲ್ಲೇ ಅನುಮಾನಗಳು

ಅಯೋಧ್ಯೆಯಿಂದ ಹೊಡೆಯುತ್ತಿರುವ ಭೂಹಗರಣಗಳ ಭ್ರಷ್ಟಾಚಾರದ ಘಾಟಿನಿಂದಾಗಿ ಅನೇಕರು ಟ್ರಸ್ಟ್ ನ ಕಾರ್ಯವಿಧಾನದ ವಿರುದ್ಧ ಮಾತಾಡಲು ಶುರು ಮಾಡಿದ್ದಾರೆ. ಪತ್ರಿಕೆಗಳಲ್ಲಿ ಬಂದ ವರದಿಗಳ ಪ್ರಕಾರ ಟ್ರಸ್ಟ್ ನ ಅಧ್ಯಕ್ಷರಾದ ಮಹಾಂತ್ ನೃತ್ಯ ಗೋಪಾಲ ದಾಸ್ ಅವರ ಪ್ರತಿನಿಧಿ ಮಹಾಂತ ಕಮಲ ನಯನ ದಾಸ್ ಅವರು, ಕಳೆದ ಒಂದು ವರ್ಷದಿಂದ ಟ್ರಸ್ಟ್ ನ ಎಲ್ಲಾ ಚಟುವಟಿಕೆಗಳ ಬಗ್ಗೆ ಟ್ರಸ್ ನ ಅಧ್ಯಕ್ಷರನ್ನು ಕತ್ತಲಲ್ಲಿ ಇಟ್ಟಿದ್ದಾರೆ. ಲಿಖಿತವಾಗಿ ಅಥವಾ ಮೌಖಿಕವಾಗಿ ಅವರಿಗೆ ಯಾವುದೇ ವರದಿಗಳನ್ನು ನೀಡಿಲ್ಲ, ಎಂದು ಹೇಳಿದ್ದಾರೆ. ವ್ಯವಹಾರಗಳ ಬಗ್ಗೆ ಮಾಹಿತಿ ಪಡೆಯಲು ಚಂಪತ ರಾಯ್ ಅವರನ್ನು ಕರೆ ಮಾಡಿದಾಗ ಅವರು ತಮ್ಮ ಯಾವುದೇ ಕರೆಗಳಿಗೆ ಉತ್ತರಿಸಿಲ್ಲ ಎಂದು ಹೇಳಿದ್ದಾರೆ. ಟ್ರಸ್ಟ್ ನ ಇನ್ನಿಬ್ಬರು ಸದಸ್ಯರಾದ ನಿರ್ಮೋಹಿ ಅಖಾಡದ ದಿನೇಂದ್ರ ದಾಸ್ ಮತ್ತು ಕಾಮೇಶ್ವರ್ ಚೌಪಾಲ್ ಕೂಡ ಟ್ರಸ್ಟ್ ಗೆ ಖರೀದಿಸಲಾದ ಜಮೀನಿನ ವ್ಯವಹಾರದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳಿದ್ದಾರೆ.

ಮಹಾಂತ ಧರಂದಾಸ್, ಮಹಾಂತ ಸುರೇಶ್ ದಾಸ್ ಮತ್ತು ಮಹಾಂತ ಸೀತಾರಾಮ್ ದಾಸರಂತಹ ಅಯೋಧ್ಯೆಯ ಅನೇಕ ಮಹಾಂತರು ಸೇರಿ ಅಯೋಧ್ಯೆಯಲ್ಲಿ ಒಂದು ಪತ್ರಿಕಾಗೋಷ್ಠಿ ನಡೆಸಿದರು. ಟ್ರಸ್ಟ್ ನ ವಿರುದ್ಧದ ವಂಚನೆಯ ಆರೋಪದ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಇವರೆಲ್ಲ ರಾಮಜನ್ಮಭೂಮಿ ಭೂವಿವಾದದ ಪ್ರಕರಣದಲ್ಲಿ ಭಾಗಿಯಾಗಿದ್ದವರು ಎಂದು ಗಮನಿಸಬೇಕು.

ಟ್ರಸ್ಟ್ ನ ಈ ಭೂಹಗರಣಗಳ ವರದಿಗಳು ಪತ್ರಿಕೆಯ ಮುಖಪುಟ ಅಥವಾ ಸುದ್ದಿವಾಹಿನಿಯ ಅಗ್ರ ಚರ್ಚೆಗಳಲ್ಲಿ ಬರದಂತೆ, ಉತ್ತರ ಪ್ರದೇಶದ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಗಳ 'ಮಾಧ್ಯಮ ನಿರ್ವಹಣೆ'ಯು ಖಚಿತಪಡಿಸಿದೆ. ಮಾಧ್ಯಮಗಳು ಟ್ರಸ್ಟ್ ನ ಭೂಹಗರಣಗಳಿಂದ ಗಮನ ಬೇರಡೆಗೆ ಸೆಳೆಯಲು. ಎಲ್ಲಾ ಸುದ್ದಿವಾಹಿನಿಗಳು ಹಿಂದೂಗಳನ್ನು ಇಸ್ಲಾಂ ಧರ್ಮಕ್ಕೆ ಮತಾಂತರಿಸಿದ, ಮುಸ್ಲಿಮರಿಂದ ಕುಟುಂಬ ಯೋಜನೆಯ ನಿರಾಕರಣೆಯ. ಬಲವಂತ ಅಥವಾ ಸ್ವಿಚ್ಛೆಯ ಅಂತರ್ಧರ್ಮೀಯ ಮದುವೆಗಳು, ಇವುಗಳ ಸುತ್ತಲೇ ಗಿರಕಿ ಹೊಡೆಯುತ್ತಿವೆ. ಮುಂಬರುವ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಗಳಿಗಾಗಿ ಕೋಮುವಾದ ಮತ್ತು ಅಯೋಧ್ಯೆಯಲ್ಲಿ ಎಲ್ಲಾ ವಂಚನೆಗಳ ಅಂಶಗಳಿಂದ ಜನಸಾಮಾನ್ಯರ ಗಮನವನ್ನು ಸರಿಸಲು ಬಿಜೆಪಿ ತನ್ನೆಲ್ಲಾ ಕುತಂತ್ರಗಳನ್ನು ಬಳಸುತ್ತಿರುವುದು ಇದರಿಂದ ಗೊತ್ತಾಗುತ್ತದೆ. ಅಯೋಧ್ಯೆಯಲ್ಲಿನ ಸಂಘಪರಿವಾರದ ಅನುಯಾಯಿಗಳಿಂದ ನಡೆಯುತ್ತಿರುವ ನಾಚಿಕೆಗೇಡಿನ ಗೋಲ್ ಮಾಲ್ ಗಳ ಬಗ್ಗೆ ಏಳುತ್ತಿರುವ ಪ್ರಶ್ನೆಗಳನ್ನು ಮತ್ತು ಮಾತಾಡುತ್ತಿರುವ ಧ್ವನಿಗಳನ್ನು ಅಡಗಿಸಲು ಬಿಜೆಪಿಯಿಂದ ಸಾಧ್ಯವಾಗುವುದೇ, ಎಂಬುದು ಮುಂಬರುವ ದಿನಗಳಲ್ಲಿ ರಾಜಕೀಯ ಬೆಳವಣಿಗೆಗೆ ನಿರ್ಣಾಯಕವಾಗಿದೆ.

2009ರ ನಂತರ-ತೀವ್ರಗೊಂಡ ಕಾರ್ಮಿಕ ವರ್ಗದ ಹೋರಾಟ

ಪುಟ 11 ರಿಂದ

31 ಜುಲೈ 2009 ರಂದು ಮಂಡಿಸಿದ ಎಲ್.ಐ.ಸಿ. ಕಾಯ್ದೆ(ತಿದ್ದುಪಡಿ) ಮಸೂದೆಯ ವಿರುದ್ಧ ಆಗಸ್ಟ್ 5, 2009 ರಂದು ಎರಡು ಗಂಟೆಗಳ ವಾಕ್– ಔಟ್ ಮುಷ್ಕರದಲ್ಲಿ ಬೃಹತ್ ಸಂಖ್ಯೆಯಲ್ಲಿ ಪಾಲ್ಗೊಂಡರು. ಅಖಿಲ ಭಾರತ ವಿಮಾ ನೌಕರರ ಸಂಘ (ಎಐಐಇಎ) ಈ ಕರೆಯನ್ನು ನೀಡಿತ್ತು. 1994 ರಲ್ಲಿ ಸಲ್ಲಿಸಿದ ಮಲ್ಹೋತ್ರಾ ಸಮಿತಿ ವರದಿಯ ಶಿಫಾರಸುಗಳ ಪ್ರಕಾರ ತನ್ನ ಪಾಲನ್ನು ಖಾಸಗೀಕರಣ ಮಾಡಲು ಸಹಾಯಕವಾಗುವಂತೆ, ಸರ್ಕಾರದ ಬಂಡವಾಳವನ್ನು ಆಗಿದ್ದ 5 ಕೋಟಿ ರೂ.ಗಳಿಂದ 100 ಕೋಟಿ ರೂ.ಗೆ ಹೆಚ್ಚಿಸಲು ಮಸೂದೆ ಪ್ರಯತ್ನಿಸಿತು. ಪಾಲಿಸಿದಾರರ ಪಾಲನ್ನು ಹೆಚ್ಚುವರಿ ಮೌಲ್ಯದ ಅಸ್ತಿತ್ವದಲ್ಲಿರುವ 95 ಶೇಕಡಾದಿಂದ ಶೇಕಡಾ 90 ಕ್ಕೆಇಳಿಸಲು ಪ್ರಯತ್ನಿಸಿತು ಅಂದರೆ ಪಾಲಿಸಿದಾರರಿಗೆ ಪಾವತಿಸಬೇಕಾದ ಬೋನಸ್ ಕಡಿಮೆಯಾಗುತ್ತದೆ. ಎಲ್‌ಐಸಿ ಮಾರಿದ ಪಾಲಿಸಿಗಳ ಮೇಲಿನ ಸಾರ್ವಭೌಮ ಖಾತರಿಯನ್ನು ಹಿಂಪಡೆಯಲು ಮಸೂದೆಯು ಅವಕಾಶ ನೀಡಿತ್ತು.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಂಪೂರ್ಣ ಮುಷ್ಕರ

2009 ರ ಆಗಸ್ಟ್ 6 ಮತ್ತು 7 ರಂದು ದೇಶಾದ್ಯಂತ ಬ್ಯಾಂಕಿಂಗ್ ವಲಯವು ಸತತವಾಗಿ ಸ್ತಂಭಿತವಾಯಿತು, ಏಕೆಂದರೆ ದೇಶಾದ್ಯಂತ ಬ್ಯಾಂಕುಗಳ 10 ಲಕ್ಷ ನೌಕರರು ಮತ್ತು ಅಧಿಕಾರಿಗಳು ಯುನೈಟೆಡ್ ಫೋರಮ್ ಆಫ್ ಬ್ಯಾಂಕ್ ಯೂನಿಯನ್ಸ್ (ಯುಎಫ್‌ಬಿಯು), ಭಾರತದ ಬ್ಯಾಂಕಿಂಗ್ ಉದ್ಯಮದಲ್ಲಿ ಕೆಲಸ ಮಾಡುವ ನೌಕರರ ಮತ್ತು ಅಧಿಕಾರಿಗಳ ಒಂಬತ್ತು ಅಖಿಲ ಭಾರತ ಸಂಘಗಳ ಐಕ್ಯ ವೇದಿಕೆಯ ಕರೆಯ ಮೇರೆಗೆ ಮುಷ್ಕರ ಕೈಗೊಂಡರು. ಮುಷ್ಕರದ ಬೇಡಿಕೆಗಳು :

(1) ನವೆಂಬರ್ 2007 ರಿಂದ ಬಾಕಿ ಉಳಿದಿದ್ದ ವೇತನ ರಚನೆಯ ಪರಿಷ್ಕರಣೆ (2) ಪ್ರಸ್ತುತ ಅಂಶದಾಯಿ (ಕಂಟ್ರಿಬ್ಯೂಟರಿ) ಭವಿಷ್ಯ ನಿಧಿ (ಸಿಪಿಎಫ್) ಯ ವ್ಯಾಪ್ತಿಯಲ್ಲಿರುವ ನೌಕರರು ಮತ್ತು ಅಧಿಕಾರಿಗಳಿಗೆ ಸಿಪಿಎಫ್‌ಗೆ ಬದಲಾಗಿ ಪಿಂಚಣಿ ಆಯ್ಕೆ ಮಾಡಲು ಅವಕಾಶವನ್ನು ವಿಸ್ತರಿಸುವುದು (3)ನಿಧನರಾದ ನೌಕರರ ರಕ್ತಸಂಬಂಧಿಗಳಿಗೆ ಸಹಾನುಭೂತಿಯ ನೇಮಕಾತಿ / ಆರ್ಥಿಕ ಸಹಾಯಕ್ಕಾಗಿ ಯೋಜನೆಯನ್ನು ಪರಿಚಯಿಸುವುದು. ಅದಕ್ಕೆ ಈ ಹಿಂದೆ ಭಾರತೀಯ ಬ್ಯಾಂಕುಗಳ ಸಂಘ (ಐ.ಬಿ.ಎ.) ಮತ್ತು ಯು.ಎಫ್.ಬಿ.ಯು. ನಡುವೆ ಒಪ್ಪಿಗೆ ಸೂಚಿಸಲಾಗಿತ್ತು.

16 ಡಿಸೆಂಬರ್ 2009 ರಂದು ಸಂಸತ್ತಿನ ಮುಂದೆ ಬೃಹತ್ ಧರಣಿ

ಕೇಂದ್ರ ಕಾರ್ಮಿಕ ಸಂಘಗಳು 9.10.2009 ರಂದು ನವದೆಹಲಿಯ ಐಎನ್‌ಟಿಯುಸಿ ಕಚೇರಿಯಲ್ಲಿ ಸಭೆ ಸೇರಿದವು. 2009 ರ ಡಿಸೆಂಬರ್ 16 ರಂದು ದೇಶಾದ್ಯಂತ ಸಂಸತ್ತು, ರಾಜ್ಯ ರಾಜಧಾನಿಗಳು ಮತ್ತು ಕೈಗಾರಿಕಾ ಕೇಂದ್ರಗಳ ಮುಂದೆ ಬೃಹತ್ ಧರಣಿಯನ್ನು ನಡೆಸಲು ಸರ್ವಾನುಮತದಿಂದ ನಿರ್ಧರಿಸಿದ್ದವು. ಈ ಎಲ್ಲಾ ಕಾರ್ಯಕ್ರಮಗಳು. ಈ ರೀತಿಯ ಜಂಟಿ ಟ್ರೇಡ್ ಯೂನಿಯನ್ ಚಳುವಳಿ ದೇಶದ ಟ್ರೇಡ್ ಯೂನಿಯನ್ ಆಂದೋಲನದಲ್ಲಿ ಒಂದು ಐತಿಹಾಸಿಕ ಬೆಳವಣಿಗೆಯಾಗಿತ್ತು.

ಸೆಣಬು ಕಾರ್ಮಿಕರ ಐಕ್ಯ ಮುಷ್ಕರ

2002 ರಲ್ಲಿ ಸಹಿ ಹಾಕಿದ ಸೆಣಬು ಗಿರಣಿ ಕಾರ್ಮಿಕರ ದ್ವಿಪಕ್ಷೀಯ ಒಪ್ಪಂದವು ಜಾರಿಯಾಗದ ಕಾರಣ, ಸೆಣಬು ಕಾರ್ಮಿಕರ ಅಸಂತೋಷ ಹೆಚ್ಚುತ್ತಲೇ ಇತ್ತು. 2002 ರ ನಂತರ, ಸೆಣಬು ಕಾರ್ಮಿಕರು ಆ 2002 ರ ಒಪ್ಪಂದದ ವಿಷಯಗಳ ಅನುಷ್ಠಾನಕ್ಕಾಗಿ 4 ಬಾರಿ ಐಕ್ಯಮುಷ್ಕರಗಳನ್ನು ಆಯೋಜಿಸಬೇಕಾಯಿತು. ಸೆಣಬು ಗಿರಣಿ ಕಾರ್ಮಿಕರ ಕಳೆದ ಜಂಟಿ–ಮುಷ್ಕರ 2009 ರ ಡಿಸೆಂಬರ್ 14 ರಿಂದ 2010 ರ ಫೆಬ್ರವರಿ 12 ರವರೆಗೆ – ಒಟ್ಟು 61 ದಿನಗಳ ಕಾಲ ನಡೆಯಿತು.

ಈ 61 ದಿನಗಳ ಸುದೀರ್ಘ ಮುಷ್ಕರದಿಂದ ಬಾಕಿ ಇರುವ ಸಮಸ್ಯೆಗಳ ಇತ್ಯರ್ಥ ಕುರಿತು ಒಪ್ಪಂದವಾದ ವಿಷಯಗಳು ಸಂಕ್ಷಿಪ್ತವಾಗಿ ಈ ಕೆಳಗಿನಂತಿವೆ:

ಎ) ಕಾರ್ಮಿಕರು ಪ್ರದೇಶವಾರು ತುಟ್ಟಿಭತ್ಯೆ ಯನ್ನು 6 ಕಂತುಗಳಲ್ಲಿ ಪಡೆಯುತ್ತಾರೆ. ಕಾರ್ಮಿಕರಿಗೆ ತುಟ್ಟಿಭತ್ಯೆ ಬೆಲೆ ಸೂಚ್ಯಂಕದ ಪ್ರತಿ ಪಾಯಿಂಟ್ ಏರಿಕೆಗೆ ರೂ.1.90 ರಂತೆ;

ಬಿ) 2002 ರ ಒಪ್ಪಂದದ ಪ್ರಕಾರ ಈ ಹಿಂದೆ 100 ರೂ. ಪಡೆದ ಹೊಸದಾಗಿ ನೇಮಕಗೊಂಡ ಕಾರ್ಮಿಕರಿಗೆ ಈಗ 157 ರೂ. ಸಿಗುತ್ತದೆ.

ಸಿ) ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳ ಪ್ರಕಾರ ಕಾರ್ಮಿಕರಿಗೆ ಗ್ರ್ಯಾಚುಟಿ ಸಿಗುತ್ತದೆ. ನಿವೃತ್ತರಾಗಬೇಕಿದ್ದ ಕಾರ್ಮಿಕರನ್ನು, ಅವರ ನಿವೃತ್ತಿ ಸಮಯವನ್ನು ಮುಟ್ಟುವವರೆಗಿನ ಆ ಅವಧಿಗೆ ಮತ್ತೆ ನೇಮಕ ಮಾಡಲಾಗುತ್ತದೆ.

ಇದು ಸೆಣಬಿನ ಗಿರಣಿ ಕಾರ್ಮಿಕರ ಒಗ್ಗಟ್ಟಿನ ಮತ್ತು ಸುದೀರ್ಘ ಮುಷ್ಕರದ ಮಹತ್ವದ ಸಾಧನೆಯಾಯಿತು.

1969ರ ಬ್ಯಾಂಕ್ ರಾಷ್ಟ್ರೀಕರಣ

ಪುಟ 13 ರಿಂದ

ಮಹಾನಗರೀಯ ಬಂಡವಾಳಶಾಹಿಯಿಂದ ತುಸು ದೂರ ಉಳಿದು ಸ್ವಾಯತ್ತ ಪಥ ಅನುಸರಿಸುವ ತನ್ನ ಯೋಜನೆಯನ್ನು ಕೈಬಿಟ್ಟಿತು. ನವ–ಉದಾರ ನೀತಿಗಳ ಆಳ್ವಿಕೆಯನ್ನು ಅಂಗೀಕರಿಸುವುದರೊಂದಿಗೆ, ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸುವಂತೆ ಒಂದು ಒಕ್ಕೊರಲಿನ ಕೂಗು ಕೇಳಿಸಲಾರಂಭಿಸಿತು. ಈ ಕೂಗಿನ ನೇತೃತ್ವವನ್ನು ಸಾಮ್ರಾಜ್ಯಶಾಹಿ ಅಮೇರಿಕಾದ ಪ್ರತಿನಿಧಿಗಳಾದ ಲ್ಯಾರಿ ಸಮ್ಮರ್ಸ್ ಮತ್ತು ಟಿಮ್ ಗೀತ್ನರ್ ಮುಂತಾದವರು ವಹಿಸಿದರು. ಅವರ ಸ್ಥಳೀಯ ಬೆಂಬಲಿಗರು ರಾಷ್ಟ್ರೀಕೃತ ಬ್ಯಾಂಕ್‌ಗಳ ಲಾಭದಾಯಕತೆಯ ಪ್ರಶ್ನೆಗಳನ್ನು ಎತ್ತಲಾರಂಭಿಸಿದರು. ಇವು ಸಂಪೂರ್ಣವಾಗಿ ಸರಿಯಲ್ಲದ ಪ್ರಶ್ನೆಗಳು. ಏಕೆಂದರೆ, ಬ್ಯಾಂಕ್ ರಾಷ್ಟ್ರೀಕರಣದ ಉದ್ದೇಶವೇ ರಾಷ್ಟ್ರೀಕೃತ ಬ್ಯಾಂಕ್‌ಗಳು ಖಾಸಗೀ ಬ್ಯಾಂಕ್‌ಗಳಿಗಿಂತ ಭಿನ್ನವಾಗಿ ಕಾರ್ಯಾಚರಣೆ ನಡೆಸಬೇಕು ಎಂಬುದಾಗಿತ್ತು.

ನವ ಉದಾರವಾದದ ಸಾರ–ಸತ್ವವೆಂದರೆ ರೂಢ ಬಂಡವಾಳಶಾಹಿಯನ್ನು ಅದರಲ್ಲಿ ಅಂತರ್ಗತವಾಗಿರುವ ಸ್ವಯಂಸ್ಫೂರ್ತತೆಯ ಪ್ರವೃತ್ತಿಗಳೊಂದಿಗೆ ಉತ್ತೇಜಿಸುವುದು. ಈ ರೀತಿಯ ಬಂಡವಾಳಶಾಹಿಯನ್ನು ಉತ್ತೇಜಿಸಿದ ಪರಿಣಾಮಗಳು ನಮ್ಮ ಮುಂದಿವೆ: ಕಿರು ಉತ್ಪಾದನೆಯ ಮೇಲೆ ಮತ್ತು ರೈತ ಕೃಷಿಯ ಮೇಲೆ ಅತಿಕ್ರಮಣ, ನಿಬಂಧನೆ ಮತ್ತು ನಿಯಂತ್ರಣ ಹೊಣೆಯಿಂದ ಪ್ರಭುತ್ವದ ನಿರ್ಗಮನ ಮತ್ತು ಆದಾಯಗಳ ಮತ್ತು ಸಂಪತ್ತಿನ ಅಸಮಾನತೆಗಳ ಅಪಾರ ಹೆಚ್ಚಳ. ರೈತರ ಸಂಕಷ್ಟಗಳು ಆತ್ಮಹತ್ಯೆಗಳ ಮೂಲಕ ವ್ಯಕ್ತಗೊಂಡಿವೆ. ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಂತಹ ಅಗತ್ಯ ಸೇವೆಗಳನ್ನು ಒದಗಿಸುವ ಜವಾಬ್ದಾರಿಯಿಂದ ಪ್ರಭುತ್ವವು ಹಿಂದೆ ಸರಿಯುತ್ತಿದೆ. ದೇಶದ ಒಟ್ಟು ಆದಾಯದಲ್ಲಿ ಜನಸಂಖ್ಯೆಯ ಮೇಲ್ತುದಿಯ ಶೇ. ಒಂದರಷ್ಟು ಮಂದಿಯ ವರಮಾನದ ಪಾಲು 1982ರಲ್ಲಿ ಶೇಕಡ 6ರಿಂದ 2013–14ರ ವೇಳೆಗೆ ಶೇಕಡ 22ಕ್ಕೆ(ಒಂದು ಶತಮಾನದಲ್ಲೇ ಅತಿ ಹೆಚ್ಚು) ಏರಿದೆ. ಇವೆಲ್ಲವೂ ಬಂಡವಾಳಶಾಹಿಯನ್ನು ಉತ್ತೇಜಿಸಿದ ಸೂಚಕಗಳಾಗಿವೆ. ಬ್ಯಾಂಕುಗಳ ಖಾಸಗೀಕರಣದ ಬೇಡಿಕೆಯು ಈ ಕಾರ್ಯಸೂಚಿಯ ಒಂದು ಭಾಗವಾಗಿದೆ.

ನವ ಉದಾರವಾದವು ಮುಂದುವರಿಯುತ್ತಿದ್ದಂತೆಯೇ, ಅದರ ಕಾರ್ಯಸೂಚಿಯು ಹೆಚ್ಚು ಹೆಚ್ಚು ಸ್ಪಷ್ಟವೂ ಮತ್ತು ಹೆಚ್ಚು ಹೆಚ್ಚು ಲಜ್ಜೆಗೆಟ್ಟದ್ದೂ ಆಗುತ್ತಿದೆ. ಕೊರೊನಾ ಸಾಂಕ್ರಾಮಿಕದ ಮರೆಯಲ್ಲಿ ನಡೆಸಿದ ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಯು ಇದನ್ನು ಪ್ರತಿಬಿಂಬಿಸುತ್ತದೆ. ಅದೇ ರೀತಿಯಲ್ಲಿ, ಮೂರು ಕೃಷಿ ಕಾನೂನುಗಳು ರೈತ ಕೃಷಿಯನ್ನು ಬಂಡವಾಳಶಾಹಿ ಅತಿಕ್ರಮಣಕ್ಕೆ ತೆರೆದಿಡುವ ಮೂಲಕ ರೈತ ಕೃಷಿಯನ್ನು ನಾಶಪಡಿಸುತ್ತವೆ. ವಾಸ್ತವವಾಗಿ, ಸರಕು ಮತ್ತು ಸೇವಾ ತೆರಿಗೆಯಿಂದ ಹಿಡಿದು ನೋಟು ರದ್ದತಿಯವರೆಗೆ ಮತ್ತು ಕೃಷಿ ಕಾನೂನುಗಳ ಜಾರಿಯೂ ಸೇರಿದಂತೆ ಮೋದಿ ಸರ್ಕಾರವು ಕೈಗೊಂಡ ಪ್ರತಿಯೊಂದು ಪ್ರಮುಖ ಆರ್ಥಿಕ ಕ್ರಮದ ಮೂಲಕ ನೆಟ್ಟ ಬಾಣ ಮತ್ತು ಇಟ್ಟ ಗುರಿ, ಕಿರು ಉತ್ಪಾದನಾ ವಲಯದ ವಿರುದ್ಧವೇ. ನವಉದಾರವಾದಿ ಕಾರ್ಯಸೂಚಿಗೆ ಅನುಗುಣವಾಗಿರುವ ಇವೆಲ್ಲವೂ ಬಂಡವಾಳದ ಆದಿಮ ಸಂಚಯ ಪ್ರಕ್ರಿಯೆಯ ಮುಂದುವರಿಕೆಯೇ. ಬ್ಯಾಂಕ್‌ಗಳ ಖಾಸಗೀಕರಣದ ಮೂಲಕ, ಕೃಷಿ ವಲಯಕ್ಕೆ ಹೋಗುತ್ತಿದ್ದ ಅಷ್ಟೊ ಇಷ್ಟೊ ಸಾಂಸ್ಥಿಕ ಸಾಲಗಳನ್ನು ನಿರಾಕರಿಸಲಾಗುತ್ತದೆ (ನವ ಉದಾರ ಆಳ್ವಿಕೆಯಲ್ಲಿ ಈಗಾಗಲೇ ಕೆಲವು ವರ್ಷಗಳಿಂದಲೂ ಕೃಷಿ ಸಾಲಗಳು ನಿರಾಕರಿಸಲ್ಪಟ್ಟಿವೆ) ಮತ್ತು ರೈತ ಕೃಷಿಯನ್ನು ನಾಶಪಡಿಸುವ ಪ್ರಕ್ರಿಯೆಯು ವೇಗ ಪಡೆಯುವಂತೆ ನೋಡಿಕೊಳ್ಳಲಾಗುತ್ತದೆ.

ರೈತ ಕೃಷಿಯೂ ಸೇರಿದಂತೆ ಕಿರು ಉತ್ಪಾದನೆಯನ್ನು ನಾಶಪಡಿಸಿದ ಪರಿಣಾಮಗಳು ಕೇವಲ ಆರ್ಥಿಕ ವಲಯಕ್ಕೆ ಮಾತ್ರ ಸೀಮಿತಗೊಳ್ಳುವುದಿಲ್ಲ. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಭಾಗವಾಗಿ ರೂಪಗೊಂಡ ರಾಷ್ಟ್ರ ನಿರ್ಮಾಣದ ಯೋಜನೆಗೆ ನಿಯಂತ್ರಣಗಳ ಆಡಳಿತವು ಅವಶ್ಯವಾಗಿತ್ತು ಎಂಬುದನ್ನು ನಾವು ಮೊದಲೇ ಗಮನಿಸಿದ್ದೇವೆ. ನಮ್ಮಂಥಹ ದೇಶಗಳಲ್ಲಿ, ಬಂಡವಾಳದ ಆದಿಮ ಸಂಗ್ರಹಣೆಗಾಗಿ ಕಿರು ಉತ್ಪಾದಕರನ್ನು ನಿರುದ್ಯೋಗಿ ಕಾರ್ಮಿಕ ಪಡೆಗೆ ಸ್ಥಳಾಂತರಿಸಿದ ರೂಢ ಬಂಡವಾಳಶಾಹಿಯು ಅವರಿಗೆ ಕೆಲಸ ಒದಗಿಸುವಲ್ಲಿ ಯಾವತ್ತೂ ಯಶಸ್ವಿಯಾಗಲಿಲ್ಲ. ಯೂರೋಪಿನಲ್ಲೇ ಇದು ಸಂಭವಿಸಲಿಲ್ಲ. "ಹೊಸ ಜಗತ್ತಿಗೆ" ನಡೆದ ಸಾಮೂಹಿಕ ವಲಸೆಯು ಒಂದು ಸಾಮಾಜಿಕ ಬಿಕ್ಕಟ್ಟನ್ನು ಅಲ್ಲಿ ತಡೆಗಟ್ಟಿತು. ತಮ್ಮ ಹಿಂದಿನ ಸಾಮ್ರಾಜ್ಯಶಾಹಿ ಯಜಮಾನರ ಮುಂದೆ ದೈನ್ಯದಿಂದ ಕೈಯೊಡ್ಡಿ ನಿಲ್ಲುವ ವಸಾಹತುಶಾಹಿಯ ನಂತರದ "ವಿಫಲ" ಪ್ರಭುತ್ವಗಳ ಸಾಲಿನಲ್ಲಿ ಭಾರತವೂ ಸೇರಬಾರದು ಎಂದಾದರೆ, ಬಂಡವಾಳದ ಈ ಆದಿಮ ಸಂಚಯದ ಪ್ರಕ್ರಿಯೆಯನ್ನು ವಿರೋಧಿಸಬೇಕಾಗುತ್ತದೆ. ಈ ವಿರೋಧವು ಮೂರು ಕೃಷಿ ಕಾನೂನುಗಳಿಗೆ ವಿರೋಧವನ್ನು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀಕರಣದ ವಿರೋಧವನ್ನೂ ಒಳಗೊಂಡಿರಬೇಕು. ಹಾಗಾಗಿ, ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಸಗೀಕರಣದ ವಿರುದ್ಧವಾಗಿ ನಡೆಸುವ ಹೋರಾಟವು ಮಹತ್ವ ಪಡೆಯುತ್ತದೆ.

ಕ್ಯೂಬಾದ ಜುಲೈ 11 ಪ್ರತಿಭಟನೆಗಳಿಗೇನು ಕಾರಣ?

ವಸಂತರಾಜ ಎನ್.ಕೆ.

ಜುಲೈ 11 ರಂದು ಕ್ಯೂಬಾದಲ್ಲಿ ಸಾವಿರಾರು ಜನ ಬೀದಿಗಿಳಿದು ಸರಕಾರದ ವಿರುದ್ಧ ಪ್ರತಿಭಟನೆ ಮಾಡಿದರು ಎಂದು ಜಾಗತಿಕ ಕಾರ್ಪೊರೆಟ್ ಮಾಧ್ಯಮಗಳು ವರದಿ ಮಾಡಿದವು. ಸರಕಾರದ, ವ್ಯವಸ್ಥೆಯ ವಿರುದ್ಧ ಮತ್ತು ಸರಕಾರಗಳ ಬದಲಾವಣೆಯ ಅಗತ್ಯವಿದೆ ಎಂಬ ಘೋಷಣೆಗಳನ್ನು ಪ್ರತಿಭಟನಾಕಾರರು ಕೂಗಿದರು. ಪ್ರತಿಭಟನೆಗಳನ್ನು ದಮನಗಳ ಮೂಲಕ ನಿಯಂತ್ರಿಸಲಾಯಿತು. ಇದು 1959ರ ಕ್ರಾಂತಿಯ ನಂತರ ಮೊದಲ ಬಾರಿ ಹೀಗಾಗಿದೆ. ಕ್ಯಾಸ್ಟ್ರೊಗಳ ಅಥವಾ ಕ್ರಾಂತಿ ನಡೆಸಿದ ಪೀಳಿಗೆಯ ಪ್ರಭಾವಶಾಲಿ ನಾಯಕತ್ವವಿಲ್ಲದೆ ಕ್ಯೂಬನ್ ಕಮ್ಯುನಿಸ್ಟ್ ಸರಕಾರ ನಡೆಯಲಾರದು, ಬಿದ್ದು ಹೋಗುತ್ತದೆ. ಈಗಿನ ನಾಯಕತ್ವ ಕ್ಯೂಬಾದ ಸಮಸ್ಯೆಗಳನ್ನು ಸವಾಲುಗಳನ್ನು ಪರಿಹರಿಸಲಾಗದು. ಅದು ತನ್ನ ನಿಯಂತ್ರಣ ಕಳೆದುಕೊಳ್ಳುವ ಭಯದಿಂದ ವಿದೇಶೀ ಮಾನವೀಯ ಮಧ್ಯಪ್ರವೇಶವನ್ನು ನಿರಾಕರಿಸುತ್ತಿದೆ. ಅಮೆರಿಕದ ಮಾನವೀಯ ಮಧ್ಯಪ್ರವೇಶ ಅಗತ್ಯವಿದೆ, ಎಂದೆಲ್ಲ ಮಾಧ್ಯಮಗಳು ವರದಿ ಮಾಡಿದವು. ಈ ವರದಿಗಳು ಎಂದಿನಂತೆ ಅರೆ ಸತ್ಯಗಳು, ಹಸಿಸುಳ್ಳುಗಳು, ಹುಸಿ ನಿರೂಪಣೆ, ಅವಾಸ್ತವಿಕ ವಿಶ್ಲೇಷಣೆಗಳ ಮಿಶ್ರಣವಾಗಿದ್ದವು.

ಹಲವು ಕಡೆ ಜನ ಬೀದಿಗಿಳಿದು ಹಲವು ಸಮಸ್ಯೆಗಳ ಕುರಿತು ಪ್ರತಿಭಟನೆ ಮಾಡಿದ್ದು ಆಕ್ರೋಶ ವ್ಯಕ್ತಪಡಿಸಿದ್ದು ನಿಜ. ಆದರೆ ಅವರ ಘೋಷಣೆಗಳು ಆಯಾ ಪ್ರದೇಶದ ನಿರ್ದಿಷ್ಟ ಸಮಸ್ಯೆಗಳಿಗಷ್ಟೇ ಸೀಮಿತವಾಗಿದ್ದವು. ಅಮೆರಿಕ ಇತ್ತೀಚೆಗೆ ತೈಲ, ಮತ್ತಿತರ ಅಗತ್ಯ ವಸ್ತುಗಳ ಹಡುಗುಗಳು ಕ್ಯೂಬಾಕ್ಕೆ ಹೋಗುವುದನ್ನು ತಡೆಯುವುದನ್ನು ಇನ್ನಷ್ಟು ಬಿಗಿ ಗೊಳಿಸಿದ್ದರಿಂದ, ಹಲವು ಕಡೆ ಆಹಾರ, ಔಷಧಿ, ವಿದ್ಯುತ್ ಕೊರತೆಗಳು ಕಂಡು ಬಂದವು. ವಿದ್ಯುತ್ ಕೊರತೆಯಿಂದಾಗಿ ಆಸ್ಪತ್ರೆ, ಅಗತ್ಯ ವಸ್ತು ಉತ್ಪಾದನೆಯ ಪ್ರದೇಶಗಳಿಗೆ ಆದ್ಯತೆ ಕೊಟ್ಟು ವಸತಿ ಪ್ರದೇಶಗಳಲ್ಲಿ ದೀರ್ಘ ಕಾಲದ ವಿದ್ಯುತ್ ಕಡಿತಗಳನ್ನು ಮಾಡಿದ್ದರಿಂದ ಈ ಪ್ರತಿಭಟನೆ, ಆಕ್ರೋಶ ಹೊಮ್ಮಿತ್ತು. ಆದರೆ ಹೆಚ್ಚಿನ ಈ ಪ್ರತಿಭಟನೆಗಳಲ್ಲಿ ಸರಕಾರದ, ವ್ಯವಸ್ಥೆಯ ವಿರುದ್ಧ ಮತ್ತು ಸರಕಾರಗಳ ಬದಲಾವಣೆಯ ಅಗತ್ಯವಿದೆ ಎಂಬ ಘೋಷಣೆಗಳನ್ನು ಕೂಗಿರಲಿಲ್ಲ. ಕೆಲವು ಕಡೆ ಮಾತ್ರ ಇಂತಹ ಘೋಷಣೆಗಳು ಕೇಳಿ ಬಂದವು. ಆದರೆ ಇಂತಹ ಪ್ರತಿಭಟನೆಗಳಲ್ಲಿ ಸರಕಾರದ ವ್ಯವಸ್ಥೆಯ ಈಗಾಗಲೇ ಗೊತ್ತಿರುವ ವಿರೋಧಿಗಳು ಸಂಘಟಿಸಿದ ಪ್ರತಿಭಟನೆಗಳಲ್ಲಿ ಮಾತ್ರ ಇಂತಹ ಘೋಷಣೆಗಳು ಕೇಳಿ ಬಂದವು. ಈ ಸಂಘಟಕರು ಅಮೆರಿಕ 'ಮಾನವೀಯ ಮಧ್ಯಪ್ರವೇಶ ಮಾಡಬೇಕು' ಎಂದು ಕರೆ ಕೊಟ್ಟರು. ಇವರು ಹಿಂದಿನಿಂದಲೂ ಅಮೆರಿಕದ ಆರ್ಥಿಕ ದಿಗ್ಬಂಧನಗಳನ್ನು ಬೆಂಬಲಿಸಿದವರು ಮತ್ತು ಕಮ್ಯುನಿಸ್ಟ್ ಸರಕಾರವನ್ನು ಕಿತ್ತೊಗೆಯಲು ದಿಗ್ಬಂಧನಗಳು ಅಗತ್ಯ ಎಂದು ವಾದಿಸಿದವರು. ಅಮೆರಿಕದ ಮತ್ತು ಅಂತರ್ರಾಷ್ಟ್ರೀಯ ಸಣ್ಣ ಸ್ವತಂತ್ರ ಮಾಧ್ಯಮಗಳು ವರದಿ ಮಾಡಿವೆ.

ಜನರ ಪ್ರತಿಭಟನೆಗಳು ನಡೆಯಲಾರಂಭಿಸಿದಂತೆ ಸರಕಾರ ಅವರು ಎದುರಿಸುವ ಸಮಸ್ಯೆಗಳನ್ನು ಆಲಿಸಲು ಸರಕಾರದ ಪ್ರತಿನಿಧಿಗಳ ಹೋದರು. ಸ್ವತಃ ಅಧ್ಯಕ್ಷರೇ ಹಲವು ಕಡೆ ಭೇಟಿ ನೀಡಿದರು. ಮಾತ್ರವಲ್ಲದೆ ಟೆಲಿವಿಶನ್ ಭಾಷಣಗಳ ಮೂಲಕ ಸಮಸ್ಯೆಗಳ ಕಾರಣಗಳನ್ನು ವಿವರಿಸಿ, ಅದಕ್ಕೆ ಕೈಗೊಳ್ಳಲಾಗುತ್ತಿರುವ ಕ್ರಮಗಳನ್ನು ವಿವರಿಸಿದರು. ಅಮೆರಿಕದ ದಿಗ್ಬಂಧನಗಳೇ ಈಗ ಉಲ್ಬಣಗೊಂಡ ಸಮಸ್ಯೆಗಳಿಗೆ ಮೂಲಕಾರಣ. ಅಮೆರಿಕಕ್ಕೆ ಮಾನವೀಯತೆ ಇದ್ದರೆ, ಜಗತ್ತಿನ ಎಲ್ಲ ದೇಶಗಳು ಒಕ್ಕೊರಲಿನಿಂದ ವಿಶ್ವಸಂಸ್ಥೆಯಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ ಆ ಆರ್ಥಿಕ ದಿಗ್ಬಂಧನಗಳನ್ನು ವಾಪಸು ತೆಗೆದುಕೊಂಡರೆ ಸಾಕು. ಬೇರೆ ಯಾವುದೇ 'ಮಾನವೀಯ ಮಧ್ಯಪ್ರವೇಶದ ಅಗತ್ಯವಿಲ್ಲ. ಆದರೆ ಅಮೆರಿಕದ ಸರಕಾರದ ಹುನ್ನಾರ ಈ ಪರಿಸ್ಥಿತಿಯನ್ನು ಉಪಯೋಗಿಸಿ ಕ್ಯೂಬದಲ್ಲಿರುವ ಅಮೆರಿಕನ್ ಬೆಂಬಲಿಗರ ಮೂಲಕ 'ಮಾನವೀಯ ಮಧ್ಯಪ್ರವೇಶ'ಕ್ಕೆ ಕರೆ ಕೊಡಿಸಿ ಅದನ್ನು ಮಿಲಿಟರಿ ಮಧ್ಯಪ್ರವೇಶ ಮತ್ತು ಸರಕಾರ/ವ್ಯವಸ್ಥೆಯ ಬದಲಾವಣೆಯತ್ತ ತಿರುಗಿಸುವುದು ಎಂದು ಎಚ್ಚರಿಸಿದರು. ಇಂತಹ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು, ಜನ ಸಹ ಪ್ರತಿಭಟಿಸಬೇಕು. ಅಮೆರಿಕದ ಆರ್ಥಿಕ ದಿಗ್ಬಂಧನಗಳನ್ನು ವಾಪಸು ಪಡೆಯಲು ಒತ್ತಾಯಿಸಬೇಕು ಎಂದು ಕರೆ ಕೊಟ್ಟರು. ಇದಕ್ಕೆ ಸ್ಪಂದಿಸಿ ಹಲವು ಕಡೆ ಸರಕಾರದ ಪರ ಭಾರೀ ಪ್ರದರ್ಶನಗಳು ನಡೆದವು. ಈ ಎಲ್ಲ ವಸ್ತುಸ್ಥಿತಿಯನ್ನು ಕಾರ್ಪೊರೆಟ್ ಮಾಧ್ಯಮಗಳು ವರದಿ ಮಾಡಲಿಲ್ಲ. ಮಾತ್ರವಲ್ಲ, ಕೆಲವು ಸರಕಾರ ಪರ ಪ್ರದರ್ಶನಗಳನ್ನು ಸರಕಾರ–ವಿರೋಧಿ ಪ್ರದರ್ಶನಗಳು ಎಂದು ಬಿಂಬಿಸಿದವು ಎಂದೂ ಅಮೆರಿಕದ ಮತ್ತು ಅಂತರ್ರಾಷ್ಟ್ರೀಯ ಸಣ್ಣ ಸ್ವತಂತ್ರ ಮಾಧ್ಯಮಗಳು ವರದಿ ಮಾಡಿವೆ.

ಲ್ಯಾಟಿನ್ ಅಮೆರಿಕದ ಇತರ ಹಲವು ದೇಶಗಳಲ್ಲಿ ಮತ್ತು ಜಗತ್ತಿನಾದ್ಯಂತ ಅಮೆರಿಕದ 'ಮಗುವಿನ ಹಾಲು ಕಿತ್ತುಕೊಂಡು ಚಿವುಟಿ, ತಾಯಿಯನ್ನು ದೂಷಿಸುವ' ಈ ತಂತ್ರವನ್ನು ಖಂಡಿಸಿ, ಅಮೆರಿಕದ ಆರ್ಥಿಕ ದಿಗ್ಬಂಧನಗಳನ್ನು ವಾಪಸು ಪಡೆಯಲು ಒತ್ತಾಯಿಸಿ ಪ್ರದರ್ಶನಗಳು ನಡೆದಿವೆ.

ಜುಲೈ 26 ಮೊಂಕಾಡಾ ದಿನ: ಕ್ಯೂಬಾದಲ್ಲಿ ಅಮೆರಿಕನ್ ಮೂಗುತೂರಿಸುವಿಕೆಯ ಖಂಡನೆ

ಜುಲೈ 26, 1993 ರಂದು ಕ್ಯೂಬನ್ ಕ್ರಾಂತಿಯ ಕಿಡಿ ಹೊತ್ತಿತ್ತು. ಅಂದು ಫಿಡೆಲ್ ಕ್ಯಾಸ್ಟ್ರೊ ನಾಯಕತ್ವದ ಗೆರಿಲ್ಲಾ ಪಡೆ ಮೊಂಕಾಡಾ ಮಿಲಿಟರಿ ನೆಲೆಯ ಮೇಲೆ ಗೆರಿಲ್ಲಾ ದಾಳಿ ನಡೆಸಲಾಗಿತು. ಈ ದಾಳಿ ವಿಫಲವಾಗಿ ಕ್ಯಾಸ್ಟ್ರೋ ಮತ್ತು ಇತರ ಗೆರಿಲ್ಲಾಗಳನ್ನು ಬಂಧಿಸಲಾಯಿತಾದರೂ, ಜುಲೈ 26 ಚಳುವಳಿ ಎನ್ನುವ ವಿಮೋಚನಾ ಸಮರಕ್ಕೆ ಇದು ನಾಂದಿಯಾಯಿತು. ದೀರ್ಘ ಗೆರಿಲ್ಲಾ ಹೋರಾಟದ ನಂತರ 1959ರ ಜನವರಿ 1ರಂದು ಅಮೆರಿಕನ್ ಸಾಮ್ರಾಜ್ಯಶಾಹಿಯ ಬಾಲಬಡುಕ ಸರ್ವಾಧಿಕಾರಿ ಬಾಟಿಸ್ಟಾ ಸರಕಾರವನ್ನು ಉರುಳಿಸಲಾಯಿತು. ಆಗಿನಿಂದ ಜುಲೈ 26ನ್ನು ಕ್ಯೂಬಾ ಕ್ರಾಂತಿಯನ್ನು ನೆನಪಿಸಿಕೊಂಡು ಅದರ ಕ್ರಾಂತಿಕಾರಿ ಸಾಧನೆಗಳನ್ನು ಉಳಿಸಿ ಬೆಳೆಸಲು ಮತ್ತು ಕ್ಯೂಬಾದ ಜತೆ ಸೌಹಾರ್ದ ಕಾರ್ಯಾಚರಣೆ ನಡೆಸಲು 'ಕ್ಯೂಬಾ ಸೌಹಾರ್ದತಾ ದಿನ'ವಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಜುಲೈ 11ರಂದು ಕ್ಯೂಬಾದಲ್ಲಿ ನಡೆದ ಪ್ರತಿಭಟನೆಗಳನ್ನು ಬಳಸಿಕೊಂಡು ಅಮೆರಿಕ ಮೂಗುತೋರಿಸಲು ಅಪಪ್ರಚಾರ ಮಾಡಲು ಪ್ರಯತ್ನಿಸಿದ ಹಿನ್ನೆಲೆಯಲ್ಲಿ 2021ರ ಜುಲೈ 26 'ಕ್ಯೂಬಾ ಸೌಹಾರ್ದತಾ ದಿನ'ವು ವಿಶೇಷ ಮಹತ್ವ ಪಡೆದಿತ್ತು. ಕ್ಯೂಬಾದ ವಿರುದ್ಧ ಆರ್ಥಿಕ ದಿಗ್ಬಂಧನವನ್ನು ಮುಂದುವರೆಸುವುದು ಮತ್ತು ಕ್ಯೂಬಾದಲ್ಲಿ ಅಮೆರಿಕನ್ ಮೂಗುತೂರಿಸುವಿಕೆ ವಿರುದ್ಧ ಖಂಡನೆ ಮಾಡುವ ಪ್ರತಿಭಟನೆಗಳು ನಡೆದವು.

ಕೊವಿಡ್ ನಿರ್ಬಂಧಗಳಿಂದಾಗಿ 'ಕ್ಯೂಬಾ ಜತೆ ಸೌಹಾರ್ದದ ರಾಷ್ಟ್ರೀಯ ಸಮಿತಿ' ಮತ್ತು 'ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆ' ಜಂಟಿಯಾಗಿ ಕ್ಯೂಬಾದ ಜತೆ ಸೌಹಾರ್ಧತೆಗಾಗಿ ಒಂದು ಅಖಿಲ ಭಾರತ ವೆಬಿನಾರನ್ನು ಸಂಘಟಿಸಿತ್ತು. ಇದರಲ್ಲಿ 16 ವಿವಿಧ ಸಂಘಟನೆಗಳ ಕ್ಷೇತ್ರಗಳ ನಾಯಕರು ಕ್ಯೂಬಾದಲ್ಲಿ ಅಮೆರಿಕನ್ ಮೂಗುತೂರಿಸುವಿಕೆಯನ್ನು ಖಂಡಿಸಿ, ಕ್ಯೂಬಾದ ಜತೆ ಸೌಹಾರ್ಧತೆ ಘೋಷಿಸಿದರು. 'ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆ'ಯ ಫೇಸ್ ಬುಕ್ ಪುಟದಲ್ಲಿ ಲೈವ್ ಆಗಿ ಪ್ರಸಾರವಾದ ಈ ಕಾರ್ಯಕ್ರಮದ ವಿಡಿಯೊವನ್ನು ಹಲವು ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ಮರುಪ್ರಸಾರ ಮಾಡಿ 10 ಸಾವಿರಕ್ಕೂ ಹೆಚ್ಚು ಜನ ಅದರಲ್ಲಿ ಭಾಗವಹಿಸಿದರು. ಅಲ್ಲಿ ಕೇಳಿ ಬಂದ ಕೆಲವು ಮಾತುಗಳು.

ವೆಬಿನಾರಿನಲ್ಲಿ ಕೇಳಿ ಬಂದ ಮಾತಗಳು

"ಕ್ಯೂಬಾದಲ್ಲಿ ಇಂದಿನ ಆಹಾರ, ಔಷಧಿ ಮುಂತಾದ ಆವಶ್ಯಕ ಸಾಮಗ್ರಿಗಳ ಕೊರತೆಯು, ಕೊವಿಡ್ ಪರಿಸ್ಥಿತಿಯನ್ನು ಲೆಕ್ಕಿಸದೆ ಇತ್ತೀಚೆಗೆ ಇನ್ನಷ್ಟು ಬಿಗಿಗೊಳಿಸಿದ ಅಮೆರಿಕದ ಆರು ದಶಕಗಳ ಕರಾಳ ಆರ್ಥಿಕ ದಿಗ್ಬಂಧನದ ನೇರ ಪರಿಣಾಮ. ಈ ಪರಿಸ್ಥಿತಿಯನ್ನು ಹಾಗೂ ತನ್ನ ಅಗಾಧ ಪ್ರಚಾರ ಯಂತ್ರ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಬಳಸಿ, ಕ್ಯೂಬನ್ ಸರಕಾರದ ವಿರುದ್ಧ, ಪ್ರತಿಭಟನೆಗಳ ಸ್ವರೂಪದ ಬಗ್ಗೆ, ಅಲ್ಲಿನ ಪರಿಸ್ಥಿತಿಯ ಕಾರಣಗಳ ಬಗ್ಗೆ ಭಾರಿ ಅಪಪ್ರಚಾರದ ಮೂಲಕ ಆಂತರಿಕ ರಾಜಕೀಯ ಪ್ರಕ್ರಿಯೆಗಳಲ್ಲಿ ಮೂಗುತೂರಿಸಿ ಅಸ್ಥಿರಗೊಳಿಸಲು ಅಮೆರಿಕನ್ ಸರಕಾರ ಪ್ರಯತ್ನಿಸುತ್ತಿದೆ. ಇದನ್ನು ಬಯಲು ಮಾಡಿ ಕ್ಯೂಬಾಕ್ಕೆ ಸೌಹಾರ್ದ ಬೆಂಬಲ ನೀಡುವುದು ನಮ್ಮೆಲ್ಲರ ಕರ್ತವ್ಯ"

– ನೀಲೋತ್ಪಲ ಬಸು, ಕ್ಯೂಬಾ ಜತೆ ಸೌಹಾರ್ದದ ರಾಷ್ಟ್ರೀಯ ಸಮಿತಿ ಸಂಚಾಲಕ

"ಕ್ಯೂಬಾದ ಆಂತರಿಕ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡಿ ಅಸ್ಥಿರಗೊಳಿಸುವ ಅಮೆರಿಕದ ಪ್ರಯತ್ನಗಳನ್ನು ಸಿಪಿಐ(ಎಂ) ಖಂಡಿಸುತ್ತದೆ. 1990ರಲ್ಲಿ ಗೋಧಿ ಹಡಗುಗಳನ್ನು ಕಳಿಸುವ ಮೂಲಕ ಪ್ರಾಯೋಗಿಕವಾಗಿ ಸೌಹಾರ್ದತೆ ತೋರಿಸಿದಂತೆ ಮತ್ತೆ ಇಂದಿನ ಪರಿಸ್ಥಿತಿಯಲ್ಲಿ ಭಾರತ ಮಾಡಲಿದೆ. ಮನ್ರೋ ಧೋರಣೆಯಿಂದ ಇತ್ತೀಚಿನ ಹೆಲ್ಮ್ಸ್–ಬರ್ಟನ್ ಕಾಯಿದೆಯ ಬಳಕೆಯವರೆಗೆ ಕ್ಯೂಬಾವನ್ನು ಮಣಿಸಲು ಅಮೆರಿಕ ಶತಪ್ರಯತ್ನ ಮಾಡುತ್ತಿದೆ. ಕೊವಿಡ್ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ವ್ಯಾಪಕ ಸಾವು–ನೋವುಗಳನ್ನು ತಡೆಯುವಲ್ಲಿ ಅಮೆರಿಕ ಪೂರ್ಣವಾಗಿ ಸೋತಿದೆ. ಆದರೆ ಕ್ಯೂಬಾ ಅಮೆರಿಕದ ಕಟುವಾದ ದಿಗ್ಬಂಧನದ ಪರಿಸ್ಥಿತಿಯಲ್ಲೂ ತನ್ನ ಉನ್ನತ ಮಟ್ಟದ ಆರೋಗ್ಯ ಸೇವೆಯ ಮತ್ತು ವೈದ್ಯಕೀಯ ಜ್ಞಾನದ ಮೂಲಕ ಕ್ಯೂಬಾ ಕೊವಿಡ್ ನ್ನು ಚೆನ್ನಾಗಿ ನಿಭಾಯಿಸಿದೆ. ಮಾತ್ರವಲ್ಲ ಯಾವುದೇ ಪೇಟೆಂಟ್ ನಿರ್ಬಂಧ ಇಲ್ಲದ 5 ವ್ಯಾಕ್ಸೀನುಗಳನ್ನು ಇಡೀ ಜಗತ್ತಿಗಾಗಿ ಅಭಿವೃದ್ಧಿ ಪಡಿಸಿದೆ. ಇವುಗಳಲ್ಲಿ ಎರಡು ಈಗಾಗಲೇ ಪರೀಕ್ಷಣೆಯ ಹಂತಗಳನ್ನು ದಾಟಿದೆ. ಇದು ಕ್ಯೂಬಾದ ಸಮಾಜವಾದಿ ವ್ಯವಸ್ಥೆಯಿಂದಾಗಿ ಸಾಧ್ಯವಾಗಿದೆ.

– ಸೀತಾರಾಂ ಯೆಚುರಿ, ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂ)

"ಕ್ಯೂಬಾ ಜಗತ್ತಿನಾದ್ಯಂತ 'ಬಿಳಿ ಕೋಟು'ಗಳನ್ನು ಜನರ ಶುಶ್ರೂಷೆ ಮಾಡಲು ಕಳಿಸುತ್ತದೆ, ಅಮೆರಿಕ 'ಹಸಿರು ಮಿಲಿಟರಿ ಪೋಷಾಕು'ಗಳನ್ನು ದಾಳಿ ಮಾಡಿ ವಶಪಡಿಸಿಕೊಳ್ಳಲು ಕಳಿಸುತ್ತದೆ." ಎಂದು ಫಿಡೆಲ್ ಕ್ಯಾಸ್ಟ್ರೋ ಅಮೆರಿಕದ ಇರಾಕ್ ಅತಿಕ್ರಮಣದ ಸಂದರ್ಭಧಲ್ಲಿ ಹೇಳಿದ್ದು, ಎರಡು ದೇಶಗಳ ಧೋರಣೆ ಮತ್ತು ವ್ಯವಸ್ಥೆಗಳ ವ್ಯತ್ಯಾಸಗಳನ್ನು ಗುರುತಿಸುತ್ತದೆ. 'ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆ' ಅದರ ಸ್ಥಾಪನೆಯ ಸಮಯದಿಂದಲೂ ಕ್ಯೂಬಾದ ಸೌಹಾರ್ದತೆ ವ್ಯಕ್ತಪಡಿಸುತ್ತಾ ಬಂದಿದೆ. ಈಗಲೂ ಭಾರತದ ಜನರಿಗೆ ಕ್ಯೂಬಾದ ವಸ್ತುಸ್ಥಿತಿ ಕುರಿತು ಹೇಳುವ ಮೂಲಕ ಕ್ಯೂಬಾದ ಜತೆ ಸೌಹಾರ್ದತೆಗಾಗಿ ಅಣಿ ನೆರೆಸಲಿದೆ.

– ಪಲ್ಲಬ್ ಸೆನ್ ಗುಪ್ತಾ, ಪ್ರಧಾನ ಕಾರ್ಯದರ್ಶಿ, 'ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆ'

ಕ್ಯೂಬಾ ಜನಾಂಗೀಯ ಅಸಮಾನತೆಗಳನ್ನು ಹೋಗಲಾಡಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿ ಯಶಸ್ವಿಯಾಗಿದೆ. ಅದೇ 90 ಕಿ.ಮಿ ದೂರದಲ್ಲಿರುವ ಅಮೆರಿಕದಲ್ಲಿ ಜನಾಂಗೀಯ ಹಲ್ಲೆಗಳಿಲ್ಲದ ದಿನಗಳೇ ಇಲ್ಲ. ಬಿಳಿಯ–ಕರಿಯರ ನಡುವೆ ಇರುವ ಸಾಮಾಜಿಕ–ಆರ್ಥಿಕ ಅಗಾಧ ಅಸಮಾನತೆ, ಇತ್ತೀಚಿನ ಜಾರ್ಜ್ ಫ್ಲಾಯ್ಡ್ ಕೊಲೆ ಮತ್ತು 'ಕರಿಯರ ಜೀವಕ್ಕೂ ಬೆಲೆಯಿದೆ' (ಬ್ಲಾಕ್ ಲೈವ್ಸ್ ಮ್ಯಾಟರ್) ಚಳುವಳಿ ವ್ಯವಸ್ಥಿತ ಜನಾಂಗೀಯ ಅಸಮಾನತೆಯನ್ನು ಹೊರಗೆಡಹಿದೆ. ಇಂತಹ ಅಮೆರಿಕ ಇಂತಹ ಕ್ಯೂಬಾಕ್ಕೆ ಪ್ರಜಾಪ್ರಭುತ್ವದ ಪಾಠ ಹೇಳುವುದಕ್ಕಿಂತ ದೊಡ್ಡ ವಿಡಂಬನೆ ಬೇರೊಂದಿಲ್ಲ.

– ಎಂ.ಎ.ಬೇಬಿ, ಸಿಪಿಐ(ಎಂ) ಪೊಲಿಟ್ ಬ್ಯುರೋ ಸದಸ್ಯ ಮತ್ತು 'ಕ್ಯೂಬಾ ಜತೆ ಸೌಹಾರ್ದದ ರಾಷ್ಟ್ರೀಯ ಸಮಿತಿ'ಯ ನಿಕಟಪೂರ್ವ ಸಂಚಾಲಕ

ಟ್ರಂಪ್ ಆಡಳಿತದ ಅವಧಿಯಲ್ಲಿ ಆರ್ಥಿಕ ದಿಗ್ಬಂಧನ ಕ್ರಮಗಳನ್ನು ಇನ್ನಷ್ಟು ತೀವ್ರಗೊಳಿಸಿ ಕ್ಯೂಬಾದ ಆರ್ಥಿಕತೆಯ ಜೀವರೇಖೆಯನ್ನೇ ಹಿಸುಕುವ ಮತ್ತು ಕ್ಯೂಬನ್ನರ ಜೀವನೋಪಾಯದ ಮೇಲೆ ದಾಳಿ ಮಾಡುವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಮೆರಿಕ ತನ್ನ ಅಸಮರ್ಥನೀಯ ಕ್ರೂರ ಆರ್ಥಿಕ ದಿಗ್ಬಂಧನಗಳನ್ನು ಸಮರ್ಥಿಸಿಕೊಳ್ಳಲು ಹಲವು ತಪ್ಪು ಮಾಹಿತಿಗಳನ್ನು ವಾದಗಳನ್ನು ಮಂಡಿಸುತ್ತಿದೆ. ಮುಖ್ಯವಾಹಿನಿ ಮಾಧ್ಯಮಗಳು ಕ್ಯೂಬಾದ ನೈಜ ಪರಿಸ್ಥಿತಿ, ಅದಕ್ಕೂ ಅಮೆರಿಕದ ಕ್ರಮಗಳಿಗೂ ಇರುವ ಸಂಬಂಧಗಳ ಕುರಿತು ವಸ್ತುನಿಷ್ಠ ವರದಿ ಮಾಡದೆ ಅಮೆರಿಕನ್ ಸರಕಾರದ ಹುಸಿ ಕಥನಗಳನ್ನು ಪ್ರಸಾರ ಮಾಡುತ್ತಿವೆ. ಕ್ಯೂಬಾದ ವಿರುದ್ಧ ಅಪಪ್ರಚಾರವನ್ನು ಬಯಲು ಮಾಡಿ ಕ್ಯೂಬಾದ ಜತೆ ಸೌಹಾರ್ದತೆ ವ್ಯಕ್ತಪಡಿಸಬೇಕಾಗಿದೆ.

– ಎನ್. ರಾಂ, 'ದಿ ಹಿಂದೂ' ಗುಂಪಿನ ಅಧ್ಯಕ್ಷ

ಅಗಾಧ ತೊಡಕುಗಳು ಸವಾಲುಗಳ ನಡುವೆ ಸಹ ಕ್ಯೂಬಾ ಜನತೆಯ ಆರೋಗ್ಯ, ಶಿಕ್ಷಣಕ್ಕೆ ಗರಿಷ್ಠ ಆದ್ಯತೆ ಕೊಡುತ್ತದೆ. ಸಾರ್ವಜನಿಕ ಆರೋಗ್ಯ ಬಿಕ್ಕಟ್ಟನ್ನು ಪರಿಹರಿಸಲು ರೋಗ ತಡೆಯ ರಣನೀತಿಯನ್ನು ಸಫಲವಾಗಿ ಜಾರಿಗೊಳಿಸಿದೆ. ಇಟಲಿಯಂತಹ ಅಭಿವೃದ್ಧ ದೇಶಗಳಿಗೂ ಬಡ ದೇಶಗಳಿಗೂ ಕೊವಿಡ್ ಮಹಾಸೋಂಕಿನ ಸಂದರ್ಭದಲ್ಲಿ ಮುಕ್ತನೆರವು ನೀಡಿದೆ. ಆದ್ದರಿಂದ ಮಾನವೀಯತೆ ಬೆಂಬಲಿಸುವ ಎಲ್ಲರೂ ಕ್ಯೂಬಾವನ್ನು ಬೆಂಬಲಿಸಬೇಕು

– ಪ್ರೊ. ಟಿ. ಸುಂದರರಾಮನ್, ಜಾಗತಿಕ ಸಂಯೋಜಕ, ಜನಾರೋಗ್ಯ ಚಳುವಳಿ

ಕ್ಯೂಬಾದ ಮೇಲೆ ಅಮೆರಿಕ ಹಲವು ದಶಕಗಳಿಂದ ಹೊರಿಸಿರುವ ಆರ್ಥಿಕ ದಿಗ್ಬಂಧನವನ್ನು ಹಿಂತೆಗೆದುಕೊಳ್ಳಬೇಕು ಎಂದು ಪ್ರತಿ ವರ್ಷ ವಿಶ್ವಸಂಸ್ಥೆಯಲ್ಲಿ ಅಮೆರಿಕ ಮತ್ತು ಇಸ್ರೇಲಿನ ಅಪವಾದ ಬಿಟ್ಟರೆ ಭಾರತ ಸೇರಿದಂತೆ ಎಲ್ಲ ದೇಶಗಳು ಒಕ್ಕೊರಲಿನಿಂದ ಒತ್ತಾಯಿಸಿವೆ. ಆದರೂ ಅದು ಮುಂದುವರೆಯುತ್ತದೆ. ಕ್ಯೂಬಾದ ಜತೆ ಸೌಹಾರ್ದತೆಯ ಕುರಿತು ಭಾರತ ಸರ್ಕಾರದ ಧೋರಣೆ ಏನೇ ಇರಲಿ, ಭಾರತದ ಜನತೆ ಕ್ಯೂಬಾದ ಜನತೆಯ ಜತೆ ನಿಲ್ಲಬೇಕು, ನಿಲ್ಲುತ್ತಾರೆ.

– ಡಿ.ರಾಜಾ, ಪ್ರಧಾನ ಕಾರ್ಯದರ್ಶಿ, ಸಿಪಿಐ

ಕ್ಯೂಬಾ ಮಹಿಳೆಯರ ಹಕ್ಕುಗಳನ್ನು ಖಾತ್ರಿಗೊಳಿಸುವ ವ್ಯವಸ್ಥೆ ಇರುವ ದೇಶ. ಲಿಂಗ ಸಮಾನತೆ ಸಾಧಿಸಲು ಸಾಕಷ್ಟು ಕ್ರಮ ವಹಿಸಲಾಗುತ್ತಿದೆ. ಬಂಡವಾಳಶಾಹಿ ದೇಶಗಳಲ್ಲಿ ಅದರಲ್ಲೂ ಅದರ ನಾಯಕನಾದ ಅಮೆರಿಕದಲ್ಲಿನ ಅನುಭವ ಇದಕ್ಕೆ ಪೂರ್ಣವಾಗಿ ವ್ಯತಿರಿಕ್ತವಾಗಿದೆ. ಆದ್ದರಿಂದ ಕ್ಯೂಬಾಕ್ಕೆ ಸೌಹಾರ್ದ ಬೆಂಬಲ ಕೊಡುವುದು ನಮ್ಮ ಕರ್ತವ್ಯವಾಗಿದೆ.

– ಕವಿತಾ ಕೃಷ್ಣನ್, ಸಿಪಿಐ(ಎಂ.ಎಲ್ – ಲಿಬರೇಶನ್) ಪೊಲಿಟ್ ಬ್ಯುರೊ ಸದಸ್ಯರು

ಕ್ಯೂಬಾದ ಸಿನೆಮಾ ಅಲ್ಲಿನ ವ್ಯವಸ್ಥೆಯ ನ್ಯೂನತೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುತ್ತದೆ. ಅವು ಯಾವುದೇ ಸೆನ್ಸಾರ್ ಗೆ ಒಳಗಾಗುವುದಿಲ್ಲ. ಇದು ಅಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂದು ತೋರಿಸುತ್ತದೆ. ಕ್ಯೂಬಾದ ಜನತೆ ಬಹುವಾಗಿ ನೇರವಾಗಿ ಭಾಗವಹಿಸುವ ವಿಶಿಷ್ಟ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದೆ. ಅಮೆರಿಕ ನೈಜ ಪ್ರಜಾಪ್ರಭುತ್ವವಾಗಲು ಕ್ಯೂಬದ ಪ್ರಜಾಪ್ರಭುತ್ವದಿಂದ ಕಲಿಯಬೇಕಾದ್ದು ಬಹಳ ಇದೆ.

–ಪ್ರೊ. ಸೋನ್ಯಾ ಗುಪ್ತಾ, ಕಾರ್ಯದರ್ಶಿ, 'ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆ'

JANASHAKTHI KANNADA VARA PATRIKE August 02-08, 2021 Price: Rs. 10/- Date of Publication: 30 July 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಸಿಐಟಿಯು-ಎಐಕೆಎಸ್- ಎಐಎಡಬ್ಲ್ಯುಯು

'ಭಾರತ ಉಳಿಸಿ' ಜಂಟಿ ಪ್ರಚಾರಾಂದೋಲನ

ಜುಲೈ 25 ರಿಂದ ಆಗಸ್ಟ್ 8, 2021













ಕ್ಯೂಬಾದ ಜುಲೈ 11 ಪ್ರತಿಭಟನೆಗಳಿಗೇನು ಕಾರಣ? ವರದಿ ಪುಟ 15 ರಲ್ಲಿ



ಸರಕಾರ – ವಿರೋಧಿ ಪ್ರತಿಭಟನಾ ಪ್ರದರ್ಶನಗಳು



ಸರಕಾರ –ಪರ, ಅಮೆರಿಕ–ವಿರೋಧಿ ಪ್ರತಿಭಟನಾ ಪ್ರದರ್ಶನಗಳು

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**